ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 11 | ಮಾರ್ಚ್ 11-17, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಮೋದಿ ಕ್ಷೇತ್ರದಲ್ಲಿ ದುರಂತ

ಮ್ಯಾನ್‌ಹೋಲ್‌ಗೆ ಇಳಿದ ದಲಿತ ಕಾರ್ಮಿಕರ ಸಾವು

ರಾಜೇಶ್ ಪಾಸ್ವಾನ್ ಮತ್ತು ಚಂದನ್



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಹೋರಾಟವೊಂದೇ ಮುಂದಿನ ದಾರಿ



ಬಿಜೆಪಿಯ ಚುನಾವಣಾ ಲಾಭಕ್ಕಾಗಿ ಭಯೋತ್ಪಾದನೆಯ ವಿರುದ್ಧ ಐಕ್ಯಸಮರ ಛಿದ್ರ



ನಿರುದ್ಯೋಗ ನವ-ಉದಾರವಾದದ ಅನಿವಾರ್ಯ ದುಷ್ಫಲ



ಕೃಷಿ ಆದಾಯಗಳ ಇಳಿಕೆಯ ಮೋದಿ ಸರ್ಕಾರದ ಧೋರಣೆಗಳ ಸಾರ

ಕೊರಿಯ – ಅಮೆರಿಕ ಶೃಂಗಸಭೆ ವಿಫಲ



ಅಮೆರಿಕಾದ ಪ್ರತಿಕೂಲ ವ್ಯಾಪಾರ ಕ್ರಮಗಳ ವಿರುದ್ಧ ಮೋದಿ ಸರಕಾರ ದೃಢ ನಿಲುವು ತಳೆಯುತ್ತಿಲ್ಲ- ಸಿಪಿಐ(ಎಂ) ಪೊಲಿಟ್‌ಬ್ಯುರೊ

ಅಮೆರಿಕ ಸಂಯುಕ್ತ ಸಂಸ್ಥಾನ ಭಾರತಕ್ಕೆ ನೀಡಿದ್ದ ಆದ್ಯತೆಯ ವ್ಯಾಪಾರ ಸವಲತ್ತನ್ನು ಹಿಂತೆಗೆದುಕೊಳ್ಳುವ ಮೂಲಕ ವ್ಯಾಪಾರ ಸಮರವನ್ನು ಭಾರತಕ್ಕೂ ವಿಸ್ತರಿಸಿದೆ. 'ಜನರಲೈಸ್ಡ್ ಸಿಸ್ಟಮ್ ಆಫ್ ಪ್ರಿಫರೆನ್ಸಸ್' ಎಂಬುದರ ಅಡಿಯಲ್ಲಿರುವ ಸವಲತ್ತುಗಳನ್ನು ಮುಂದಿನ 60 ದಿನಗಳಲ್ಲಿ ರದ್ದು ಮಾಡುವ ಮೂಲಕ ಭಾರತದಿಂದ 1900 ಐಟಂಗಳ ಮೇಲೆ ಈಗ ಇರುವ ಸುಂಕ ವಿನಾಯ್ತಿ ಇಲ್ಲವಾಗುತ್ತದೆ.

ಈ ಹಿಂದೆ ಭಾರತದಿಂದ ಉಕ್ಕು ಮತ್ತು ಅಲ್ಯುಮಿನಿಯಂ ಆಮದುಗಳ ಮೇಲೆ ಸುಂಕಗಳನ್ನು ಹೆಚ್ಚಿಸಿದ ನಂತರ ಈಗ ಈ ಪ್ರತಿಕೂಲ ಕ್ರಮಗಳು ಬಂದಿವೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಮೋದಿ ಸರಕಾರ ಇಂತಹ ಪ್ರತಿಕೂಲ ಕ್ರಮಗಳ ವಿರುದ್ಧ ಒಂದು ದೃಢ ನಿಲುವನ್ನು ತಳೆಯುತ್ತಿಲ್ಲ ಎಂದು ಖೇದ ವ್ಯಕ್ತಪಡಿಸಿದೆ.

ಈ ಹಿಂದೆ, ಸ್ವತಃ ಪ್ರಧಾನ ಮಂತ್ರಿಗಳೇ ಅಧ್ಯಕ್ಷ ಟ್ರಂಪ್‌ರವರ ಒಂದು ಫೋನ್ ಕರೆಯ ಆಧಾರದಲ್ಲೇ ಅಮರಿಕಾದಿಂದ ಆಮದು ಮಾಡಿಕೊಳ್ಳುತ್ತಿರುವ ಹಾರ್ಲೆ ಡೇವಿಡ್ಸನ್ ಮೋಟಾರು ಬೈಕ್‌ಗಳ ಮೇಲಿನ ಸುಂಕವನ್ನು ಅರ್ಧದಷ್ಟು ಇಳಿಸಿದ್ದರು.

ಆದರೂ ನಮ್ಮ ಸರಕಾರ ಈಗ ಇಂತಹ ಪ್ರತಿಕೂಲ ಕ್ರಮಗಳನ್ನು ಪ್ರತಿಭಟಿಸುತ್ತಿಲ್ಲವೇಕೆ? ಸರಕಾರ ಇಂತಹ ಕ್ರಮಗಳಿಗೆ ದೃಢವಾದ ಪ್ರತ್ಯುತ್ತರ ನೀಡಬೇಕು ಮತ್ತು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು, ಭಾರತದ ವ್ಯಾಪಾರೀ ಹಿತಗಳನ್ನು ರಕ್ಷಿಸಿಕೊಳ್ಳಲು, ಅಮೆರಿಕಾದ ಕ್ರಮಗಳಿಗೆ ಪ್ರತಿಯಾದ ವ್ಯಾಪಾರೀ ಸುಂಕಪಟ್ಟಿಗಳೂ ಈ ಅಗತ್ಯ ಕ್ರಮಗಳಲ್ಲಿ ಸೇರಿರಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

'ರಾಷ್ಟ್ರೀಯ ನಗರಪ್ರದೇಶ ಧೋರಣಾ ಚೌಕಟ್ಟು': ಈಗ ಇದನ್ನು ಮುಂಬರುವ ಸರಕಾರಕ್ಕೇ ಬಿಡುವುದು ಸೂಕ್ತ

– ಕೇಂದ್ರ ನಗರ ವ್ಯವಹಾರಗಳ ಮಂತ್ರಿಗಳಿಗೆ ಸೀತಾರಾಂ ಯೆಚುರಿ ಪತ್ರ

ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯು 'ರಾಷ್ಟ್ರೀಯ ನಗರಪ್ರದೇಶ ಧೋರಣಾ ಚೌಕಟ್ಟು' (ನ್ಯಾಶನಲ್ ಅರ್ಬನ್ ಪಾಲಿಸಿ ಫ್ರೇಮ್‌ವರ್ಕ್-ಎನ್.ಯು.ಪಿ.ಎಫ್.)ನ ಮೊದಲ ಕರಡನ್ನು ಬಿಡುಗಡೆಮಾಡಿದೆ. 'ಇದು ಭಾರತದಲ್ಲಿ ನಗರ ಯೋಜನೆಯ ಭವಿಷ್ಯದ ಒಂದು ಮಾರ್ಗದರ್ಶಕ ದಸ್ತಾವೇಜು ಆಗಬೇಕು ಎಂದು ಪರಿಗಣಿಸಲಾಗಿದೆ. ಅಂದರೆ ಈ ಬಗ್ಗೆ ಬಹಳ ವಿಚಾರ-ವಿಮರ್ಶೆಗಳು ನಡೆಯಬೇಕಾಗಿದೆ. ಆದರೆ ಅದಕ್ಕೆ ಕೊಟ್ಟಿರುವ ಗಡುವು ಮಾರ್ಚ 10,2019 ರ ವರೆಗೆ ಮಾತ್ರ. ಇದು ಬಹುಪಾಲು ಜನರನ್ನು, ನಗರ ಪ್ರದೇಶಗಳ ವ್ಯವಹಾರಗಳನ್ನು ಕುರಿತಂತಹ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರನ್ನು ಹೊರಗಿಡುವ ಗಡುವು ಆಗುತ್ತಿದೆ, ಕೇವಲ ಕನ್ಸಲ್ಟೆಂಟ್‌ಗಳಿಗೆ ಸೀಮಿತವಾಗುವ ಒಂದು ಕಸರತ್ತಾಗಿ ಉಳಿಯುತ್ತದೆ" ಎಂದು ಈ ಕುರಿತು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಿಗಳಾದ ಹರ್ದೀಪ್ ಸಿಂಗ್ ಪುರಿಯವರಿಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ.

ಭಾರತದ ಬೆಳೆಯುತ್ತಿರುವ ನಗರಗಳ ಕ್ಲಿಷ್ಟತೆಗಳನ್ನು ಚಲನರಹಿತ ಯೋಜನಾ ಸಲಕರಣೆಗಳಿಂದ ಬಿಡಿಸಲು ಸಾಧ್ಯವಾಗದು, ನಗರ ಪ್ರದೇಶದ ಸತತವಾಗಿ ಬದಲಾಗುತ್ತಿರುವ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳಿಗೆ ಸಂಬಂಧವಿಲ್ಲದಂತಹ ಒಂದು ಸಿದ್ಧ ಭೂಮಿಕೆಯನ್ನು ಅವು ಪೋಷಿಸುತ್ತವೆ ಎಂದು ಈ ದಸ್ತಾವೇಜಿನಲ್ಲೇ ಹೇಳಲಾಗಿದೆ. ಇದು ಒಪ್ಪತಕ್ಕ ವಿಷಯ ಎಂದಿರುವ ಯೆಚುರಿಯವರು, ಈ ಮೂಲಕ ನಗರೀಕರಣದ ಧೋರಣೆಗಳು ಅಪೇಕ್ಷಿತ ಫಲಿತಾಂಶಗಳನ್ನು ಒದಗಿಸದೆ ತೀರಾ ವಿಫಲವಾಗಿರುವುದನ್ನು ಸ್ಪಷ್ಟವಾಗಿ ಇದು ಎತ್ತಿ ತೋರುತ್ತದೆ ಎಂದು ಟಿಪ್ಪಣಿ ಮಾಡಿದ್ದಾರೆ. ಈ ಕರಡಿನಲ್ಲಿ 'ಸ್ಮಾರ್ಟಸಿಟಿ' ಮುಂತಾದ ಬಹು-ಪ್ರಚಾರಿತ ಕಾರ್ಯಕ್ರಮಗಳ ಬಗ್ಗೆ ಒಂದು ಟಿಪ್ಪಣಿ ಕೂಡ ಕಾಣುತ್ತಿಲ್ಲ. ಇದೇ ಇಂತಹ ಎಲ್ಲ ಕಾರ್ಯಕ್ರಮಗಳು ವಿಫಲವಾಗಿರುವುದನ್ನು ತೋರಿಸುತ್ತದೆ, ಇದನ್ನೆಲ್ಲ ಎತ್ತಿ ತೋರುವ ಬೃಹತ್ ಪ್ರಮಾಣದ ಅಂಕಿ-ಅಂಶಗಳನ್ನು ಉದ್ಧರಿಸುವ ಅಗತ್ಯವೂ ಇಲ್ಲ ಎಂದು ಯೆಚುರಿಯವರು ತಮ್ಮ ಪತ್ರದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ಇದಲ್ಲದೆ ಈ ಕರಡಿನಲ್ಲಿ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ ಈ ಕುರಿತ ಅಭಿಪ್ರಾಯಗಳನ್ನು ತಿಳಿಸಲು ಒದಗಿಸಿರುವ ವಿಧಾನದಲ್ಲಿ ಧೋರಣೆ ಕುರಿತಂತೆ ಹೇಳಲು, ಶಿಫಾರಸು ಮಾಡಲು ಅವಕಾಶವಿಲ್ಲದಂತಾಗಿದೆ. ಅದು ಕೊಟ್ಟಿರುವ ಕೇವಲ 300 ಪದಗಳ ಮಿತಿಯಲ್ಲಿ ಸ್ಥೂಲಸ್ವರೂಪದ ವಿಷಯಗಳನ್ನಷ್ಟೇ ಹೇಳಲು ಸಾಧ್ಯ ಎಂಬ ಸಂಗತಿಯನ್ನೂ ಸೀತಾರಾಮ್ ಯೆಚುರಿಯವರು ಮಂತ್ರಿಗಳ ಗಮನಕ್ಕೆ ತಂದಿದ್ದಾರೆ.

ಇಷ್ಟೇ ಅಲ್ಲ, ಸದ್ಯದಲ್ಲೇ ಸಾರ್ವತ್ರಿಕ ಚುನಾವಣೆಗಳ ಪ್ರಕಟಣೆ ಬರಲಿದೆ, ಆದ್ದರಿಂದ ಮಾದರಿ ನೀತಿ ಸಂಹಿತೆ ಜಾರಿಯಾಗುವ ಸಮಯ, ಆದ್ದರಿಂದ, ಈ ಕರಡಿನ ಕುರಿತು ಅಭಿಪ್ರಾಯಗಳನ್ನು, ಸ್ಪಂದನೆಗಳನ್ನು ತಿಳಿಸಲು ನೀಡಿರುವ ಸಮಯದ ಗಡುವನ್ನು ವಿಸ್ತರಿಸುವದಷ್ಟೇ ಅಲ್ಲ, ನಗರ ಧೋರಣಾ ಚೌಕಟ್ಟನ್ನು ಕುರಿತಂತೆ ಹೊಸ ಸರಕಾರವೇ ಯೋಚಿಸಲು ಬಿಡುವುದು ಸೂಕ್ತ, ಏಕೆಂದರೆ ಇದಕ್ಕೆ ಜನಾದೇಶವೂ ಬೇಕಾಗುತ್ತದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಿಗಳಾದ ಹರ್ದೀಪ್ ಸಿಂಗ್ ಪುರಿಯವರಿಗೆ ಬರೆದ ಪತ್ರದಲ್ಲಿ ಸೂಚಿಸಿದ್ದಾರೆ.

ಚುನಾವಣಾ ಆಯೋಗದೊಂದಿಗೆ ಸಿಪಿಐ(ಎಂ) ನಿಯೋಗದ ಭೇಟಿ: ಮತಯಂತ್ರದೊಂದಿಗೆ ವಿವಿಪಿಎಟಿ, ಚುನಾವಣಾ ಬಾಂಡ್ ಮತ್ತು ಚುನಾವಣೆಗಳಲ್ಲಿ ಯೋಧರ ಬಲಿದಾನಗಳ ಬಿಂಬಗಳ ದುರ್ಬಳಕೆ ಬಗ್ಗೆ ಚರ್ಚೆ

ಮಾರ್ಚ್ 6 ರಂದು ಸಿಪಿಐ(ಎಂ) ನಿಯೋಗವೊಂದು ಚುನಾವಣಾ ಆಯೋಗವನ್ನು ಭೇಟಿ ಮಾಡಿತು. ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಮತ್ತು ಪೊಲಿಟ್‌ಬ್ಯುರೊ ಸದಸ್ಯರಾದ ನೀಲೋತ್ಪಲ್ ಬಸು ಅವರಲ್ಲದೆ ತ್ರಿಪುರಾದ ರಾಜ್ಯ ಕಾರ್ಯದರ್ಶಿ ಗೌತಮ್ ದಾಸ್ ಮತ್ತು ಆ ರಾಜ್ಯದ ಮೂರು ಸಂಸತ್ ಸದಸ್ಯರಾದ ಜಿತೇನ್ ಚೌಧರಿ, ಶಂಕರ್ ದತ್ತ ಮತ್ತು ಝರ್ನಾ ದಾಸ್ ಈ ನಿಯೋಗದಲ್ಲಿದ್ದರು.

ಮುಖ್ಯವಾಗಿ, ಒಂದು ಮುಕ್ತ ಹಾಗೂ ನ್ಯಾಯಯುತ 17ನೇ ಲೋಕಸಭಾ ಚುನಾವಣೆಗಳನ್ನು ನಡೆಸುವುದಕ್ಕೆ ತ್ರಿಪುರಾದಲ್ಲಿರುವ ಬೆದರಿಕೆಗಳನ್ನು, ಜತೆಗೆ ಈ ಚುನಾವಣೆಗಳಲ್ಲಿ ಆತಂಕವುಂಟು ಮಾಡಿರುವ ಇತರ ಮುಖ್ಯ ಸಂಗತಿಗಳನ್ನೂ ಆಯೋಗದ ಗಮನಕ್ಕೆ ತರುವುದು ಈ ಭೇಟಿಯ ಉದ್ದೇಶವಾಗಿತ್ತು.

ಕನಿಷ್ಠ 50% ದಷ್ಟು ಮತಗಟ್ಟೆಗಳ ಎಲೆಕ್ಟ್ರಾನಿಕ್ ಮತಯಂತ್ರಗಳ ವಿ.ವಿ.ಪಿ.ಎ.ಟಿ.(ಮತದಾರ ಪರಿವೀಕ್ಷಿತ ಕಾಗದ ಪರಿಶೋಧನಾ ಜಾಡು) ಅಂದರೆ ತಾನು ಚಲಾಯಿಸಿದ ಮತ ಸರಿಯಾಗಿ ದಾಖಲಾಗಿದೆಯೇ ಎಂಬುದನ್ನು ಮತದಾರರೇ ಖಾತ್ರಿ ಮಾಡಿಕೊಳ್ಳಲು ಲಗತ್ತಿಸಿರುವ ಚೀಟಿಯೊಂದಿಗೆ ಮತಗಣನೆಯನ್ನು ತಾಳೆ ಹಾಕುವ ಪ್ರಶ್ನೆಯ ಬಗ್ಗೆ ಸಿಪಿಐ(ಎಂ) ನಿಯೋಗ ಚುನಾವಣಾ ಆಯೋಗದ ಸದಸ್ಯರೊಂದಿಗೆ ಚರ್ಚಿಸಿತು.

ಒಂದು ಮುಖ್ಯ ಮತ್ತು ನ್ಯಾಯಪೂರ್ಣ ಚುನಾವಣೆಯನ್ನು ನಡೆಸುವಲ್ಲಿ ಎಲ್ಲರಿಗೂ ಸಮಾನ ನೆಲೆಯ ಅವಕಾಶವನ್ನು ಖಾತ್ರಿಪಡಿಸುವುದರ ಮೇಲೆ ಪರಿಣಾಮ ಬೀರ ಬಹುದಾದ ಚುನಾವಣಾ ಬಾಂಡುಗಳ ಹಣಕಾಸು ಪ್ರಭಾವಗಳನ್ನು ಆಯೋಗ ಹೇಗೆ ನಿಭಾಯಿಸುತ್ತದೆ ಎಂಬ ಪ್ರಶ್ನೆಯನ್ನು ಕೂಡ ಸಿಪಿಐ(ಎಂ) ನಿಯೋಗ ಚುನಾವಣಾ ಆಯೋಗದ ಮುಂದೆ ಇಟ್ಟಿತು.

ಸಮವಸ್ತ್ರದಲ್ಲಿರುವ ಯೋಧರು ಇಡೀ ದೇಶಕ್ಕೆ ಸೇರಿದವರು, ಯಾವುದೇ ಒಂದು ಪಕ್ಷಕ್ಕೆ ಸೇರಿದವರಲ್ಲವಾದ್ದರಿಂದ, ಆಳುವ ಪಕ್ಷ ಪುಲ್ವಾಮದಲ್ಲಿ ಯೋಧರ ಬಲಿದಾನ ಮತ್ತು ನಂತರದ ವಾಯು ಪ್ರಹಾರದ ಅಂಶಗಳು ಮತ್ತು ಬಿಂಬಗಳನ್ನು ಚುನಾವಣಾ ಪ್ರಚಾರದಲ್ಲಿ ಬಳಸಿಕೊಳ್ಳದಂತೆ ಅದಕ್ಕೆ ಲಗಾಮು ಹಾಕಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ನಿಯೋಗ ಚುನಾವಣಾ ಆಯೋಗವನ್ನು ಆಗ್ರಹಿಸಿತು.

ತ್ರಿಪುರಾದಲ್ಲಿ ವಿಶೇಷ ಕ್ರಮಗಳಿಗಾಗಿ ಮನವಿ ಪತ್ರ:

ತ್ರಿಪುರಾದಲ್ಲಿ, ಬಹುಮಟ್ಟಿಗೆ ರಾಜ್ಯ ಆಳ್ವಿಕೆತದ ಪಕ್ಷಪಾತಪೂರ್ಣ ಕೃತ್ಯಗಳು, ಮತ್ತು ಅದರಿಂದ ಉಂಟಾಗಿರುವ ಭಯ ಮತ್ತು ಬೆದರಿಕೆಯ ಭಾವನೆ ಮುಕ್ತ ಮತ್ತು ನ್ಯಾಯಪೂರ್ಣ ಚುನಾವಣೆಗಳನ್ನು ನಡೆಸುವುದಕ್ಕೆ ಒಂದು ದೊಡ್ಡ ಬೆದರಿಕೆಯೊಡ್ಡಿದೆ. ಈ ಕುರಿತಂತೆ ಆಯೋಗ ಪರಿಗಣಿಸಬೇಕಾದ ಪ್ರಮುಖ ಆತಂಕಗಳನ್ನು ಗುರುತಿಸಿ, ಅವನ್ನು ನಿವಾರಿಸಲು ವಹಿಸಬೇಕಾದ ಕ್ರಮಗಳನ್ನು ಚುನಾವಣಾ ಆಯೋಗದ ಮುಂದಿಡಲಾಯಿತು.

ಈ ಕುರಿತಂತೆ ಒಂದು ಮನವಿ ಪತ್ರವನ್ನು ಸಿಪಿಐ(ಎಂ) ನಿಯೋಗ ಮುಖ್ಯ ಚುನಾವಣಾ ಆಯುಕ್ತರಿಗೆ ಸಲ್ಲಿಸಿತು. ಇದರ ಜೊತೆಗೆ ಸಿಪಿಐ(ಎಂ) ತ್ರಿಪುರಾ ರಾಜ್ಯ ಸಮಿತಿ ಫೆಬ್ರುವರಿ 20 ಮತ್ತು 21 ರಂದು ಆಯೋಗಕ್ಕೆ ಸಲ್ಲಿಸಿದ, ತ್ರಿಪುರಾದಲ್ಲಿನ ನಿರ್ದಿಷ್ಟ ಪ್ರಕರಣಗಳ ವಿವರಗಳನ್ನು ನೀಡುವ ಮನವಿ ಪತ್ರಗಳ ಪ್ರತಿಗಳನ್ನೂ ಲಗತ್ತಿಸಲಾಗಿದೆ.

ಈ ಮೊದಲು ಪ್ರಜಾಪ್ರಭುತ್ವದ ಹಕ್ಕುಗಳ ಚಲಾವಣೆಗೆ ಮಾದರಿಯಾಗಿದ್ದ ಈಶಾನ್ಯ ಭಾರತದ ಈ ಪುಟ್ಟ ರಾಜ್ಯದಲ್ಲಿ ರಾಜಕೀಯ ಪಕ್ಷಗಳಿಗೆ ಮತ್ತು ಅಭ್ಯರ್ಥಿಗಳಿಗೆ ದೇಶದ ಸಂವಿಧಾನ ನೀಡಿರುವ ಹಕ್ಕುಗಳನ್ನು ಅವರು ಅನುಭವಿಸುವಂತಾಗಲು ಚುನಾವಣಾ ಆಯೋಗ ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕು, ಸಂವಿಧಾನವು ಭಾರತದ ಚುನಾವಣಾ ಆಯೋಗಕ್ಕೆ ನೀಡಿರುವ ಅಪಾರ ಅಧಿಕಾರಗಳನ್ನು ಒಂದು ಮುಕ್ತ ಮತ್ತು ನ್ಯಾಯಪೂರ್ಣ ಚುನಾವಣೆ ನಡೆಸಬೇಕೆಂಬ ರಾಜ್ಯದ ಜನತೆಯ ಆಶಯ-ಕಾಂಕ್ಷೆಗಳನ್ನು ಈಡೇರಿಸಲು ಚಲಾಯಿಸಬೇಕು ಎಂದು ಮನವಿ ಪತ್ರದಲ್ಲಿ ಕೋರಲಾಗಿದೆ.

ಮಾರ್ಚ್ 5 ರಂದು ನವದೆಹಲಿಯಲ್ಲಿ ನೂರಾರು ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಇತರ ಕಾರ್ಯಕರ್ತರು ಮಂಡಿ ಹೌಸ್‌ನಿಂದ ಸಂಸತ್ ಮಾರ್ಗದ ವರೆಗೆ ಒಂದು ಪ್ರತಿಭಟನಾ ಮೆರವಣಿಗೆ ನಡೆಸಿದರು. ಮೀಸಲಾತಿ ಉಳಿಸಿ, ಸಂವಿಧಾನ ಉಳಿಸಿ ಎಂದು ಘೋಷಣೆ ಕೂಗುತ್ತಿದ್ದ ಅವರು ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಅಧ್ಯಾಪಕರ ಹುದ್ದೆಗಳಿಗೆ ಪರಿಶಿಷ್ಟ ಜಾತಿಗಳು, ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವಿಭಾಗಗಳ ಜನಗಳನ್ನು ನೇಮಕಾತಿಯನ್ನು ಮೊಟಕು ಮಾಡಲು ಮಾಡುವ ಪ್ರಯತ್ನಗಳನ್ನು ವಿರೋಧಿಸುತ್ತಿದ್ದರು. ತಮ್ಮ ಶ್ರೀಮಂತ -ಪರ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸುಗ್ರೀವಾಜ್ಞೆಗಳನ್ನು ಯಾವುದೇ ಲಂಗುಲಗಾಮಿಲ್ಲದೆ ಹೊರಡಿಸುತ್ತಿರುವ ಈ ಸರಕಾರ ಅಂಚಿಗೆ ತಳ್ಳಲ್ಪಟ್ಟಿರುವ ವಿಭಾಗಗಳ ಪ್ರಶ್ನೆ ಬಂದಾಗ ಹಿಂದೇಟು ಹಾಕುತ್ತಿರುವ ಸನ್ನಿವೇಶದಲ್ಲಿ ಎರಡು ಸುಗ್ರೀವಾಜ್ಞೆಗಳನ್ನು ಹೊರಡಿಸಬೇಕು ಎಂದು ಆಗ್ರಹಿಸಿದರು-ಒಂದು, ಸುಪ್ರಿಂ ಕೋರ್ಟ್ ಆದೇಶದಿಂದಾಗಿ ಲಕ್ಷಾಂತರ ಆದಿವಾಸಿಗಳು ಮತ್ತು ಅರಣ್ಯವಾಸಿಗಳನ್ನು ಅರಣ್ಯಗಳಲ್ಲಿರುವ ಅವರ ಮನೆ-ಭೂಮಿಗಳಿಂದ ಒಕ್ಕಲೆಬ್ಬಿಸುವುದನ್ನು ತಪ್ಪಿಸಲು ಮತ್ತು ಇನ್ನೊಂದು, ಯುಜಿಸಿ ಅಧ್ಯಾಪಕ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಗಳು, ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವಿಭಾಗಗಳಿಗೆ ನ್ಯಾಯಪೂರ್ಣ ಪ್ರಾತಿನಿಧ್ಯವನ್ನು ಲಭ್ಯಗೊಳಿಸಲು.



ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ, 200 ಪಾಯಿಂಟುಗಳ ರೋಸ್ಟರನ್ನು ಮತ್ತೆ ತರಲು ಅವಕಾಶ ನೀಡುವ ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿದೆ ಎಂದು ತಿಳಿದುಬಂದಿದೆ. ಇದು ಈ ಹೋರಾಟಕ್ಕೆ ಸಂದಿರುವ ಒಂದು ಭಾಗಶಃ ವಿಜಯ ಎಂದು ಹೇಳಲಾಗಿದೆ.

ಆದರೆ ಮಾರ್ಚ 2ರಂದು ಅದೇ ಸಂಸತ್ ಮಾರ್ಗದಲ್ಲಿ ನೂರಾರು ಸಂತ್ರಸ್ತ ಆದಿವಾಸಿಗಳು ಮತ್ತು ಅರಣ್ಯವಾಸಿಗಳು ನಡೆಸಿದ ಹೋರಾಟಕ್ಕೆ ಸರಕಾರ ಇನ್ನೂ ಸ್ಪಂದಿಸಿಲ್ಲ.



ಪ್ರಧಾನಿ ಮೋದಿ ಕ್ಷೇತ್ರ ವಾರಣಾಸಿಯಲ್ಲಿ ದುರಂತ

ಮ್ಯಾನ್‌ಹೋಲ್‌ಗೆ ಇಳಿದ ದಲಿತ ಕಾರ್ಮಿಕರ ಸಾವು

– ನಿತ್ಯಾನಂದಸ್ವಾಮಿ –

ಮಾರ್ಚ್ 1 ರಂದು ಶುಕ್ರವಾರ ಚರಂಡಿ ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಇಬ್ಬರು ದಲಿತ ಕಾರ್ಮಿಕರು ಮೃತ ಪಟ್ಟಿರುವ ಘಟನೆ ಪ್ರಧಾನಿ ಮೋದಿಯವರ ಕ್ಷೇತ್ರವಾದ ವಾರಣಾಸಿಯಲ್ಲಿ ನಡೆದಿರುವುದಾಗಿ ವರದಿಯಾಗಿದೆ. ಮೃತಪಟ್ಟ ಯುವಕರನ್ನು ರಾಜೇಶ್ ಪಾಸ್ವಾನ್ ಮತ್ತು ಚಂದನ್ ಎಂದು ಗುರುತಿಸಲಾಗಿದೆ.

ವಾರಣಾಸಿಯ ಪಾಂಡೇಪುರ ಪ್ರದೇಶದಲ್ಲಿ ಮ್ಯಾನ್‌ಹೋಲ್ ಸ್ವಚ್ಛಗೊಳಿಸಲು ಇವರಿಬ್ಬರು ಕಾರ್ಮಿಕರು ಸುಮಾರು 4 ಅಡಿ 'ಆಳದ' ಮ್ಯಾನ್‌ಹೋಲ್‌ನ ಒಳಗೆ ಇಳಿದಿದ್ದರು. ಮ್ಯಾನ್‌ಹೋಲ್‌ನ ಬದಿಯಲ್ಲೇ ಕಟ್ಟಡ ನಿರ್ಮಾಣ ಕಾಮಗಾರಿಯ ತ್ಯಾಜ್ಯವನ್ನು ರಾಶಿ ಹಾಕಲಾಗಿತ್ತು. ಕಾರ್ಮಿಕರಿಬ್ಬರು ಮ್ಯಾನ್‌ಹೋಲ್‌ನಲ್ಲಿ ಇಳಿದು ಕೆಲಸ ಮಾಡುತ್ತಿದ್ದಾಗ ತ್ಯಾಜ್ಯದ ರಾಶಿ ಕುಸಿದು ಇವರ ಮೇಲೆ ಬಿದ್ದ ಪರಿಣಾಮವಾಗಿ ಕಾರ್ಮಿಕರಿಬ್ಬರೂ ಮ್ಯಾನ್‌ಹೋಲ್‌ನಲ್ಲೇ ಉಸಿರುಕಟ್ಟಿ ಮೃತರಾಗಿದ್ದಾರೆ. ಸ್ಥಳಕ್ಕೆ ಆಗಮಿಸಿದ ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡದ ಸಿಬ್ಬಂದಿ ಸುಮಾರು 6 ಗಂಟೆ ಕಾರ್ಯಾಚರಣೆ ನಡೆಸಿ ಕಾರ್ಮಿಕರ ಮೃತದೇಹಗಳನ್ನು ಹೊರತೆಗೆದಿದ್ದಾರೆ.

ಸ್ವಚ್ಛತಾ ಕಾರ್ಮಿಕರಿಗೆ ಯಾವುದೇ ಸುರಕ್ಷಾ ಸಾಧನಗಳನ್ನು ಒದಗಿಸದೆ ನಿರ್ಲಕ್ಷ ತೋರಲಾಗಿದೆ ಎಂದು ಕಾರ್ಮಿಕರ ಕುಟುಂಬದ ಸದಸ್ಯರು ಪ್ರತಿಭಟನೆ ನಡೆಸಿದರು. ಈ ಬಗ್ಗೆ ಹಲವಾರು ಬಾರಿ ಅಧಿಕಾರಿಗಳಿಗೆ ದೂರು ನೀಡಿದ್ದರೂ ಪ್ರಯೋಜನವಾಗಿಲ್ಲ ಎಂದು ಅವರು ದೂರಿದ್ದಾರೆ. ಕಳೆದ ವಾರ ಫೆಬ್ರವರಿ 24 ರಂದು ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿದ್ದ ಕುಂಭಮೇಳದ ಸಂದರ್ಭದಲ್ಲಿ ಪ್ರಧಾನಿ ಮೋದಿ ಸ್ವಚ್ಛತಾ ಕಾರ್ಮಿಕರನ್ನು ನೈಜ ಕರ್ಮ ಯೋಗಿಗಳೆಂದು ಬಣ್ಣಿಸಿದ್ದರಲ್ಲದೆ ಅವರ ಪಾದ ತೊಳೆದು ಸುದ್ದಿಯಾಗಿದ್ದರು. ಆದರೆ ಸ್ವಚ್ಛತಾ ಕಾರ್ಮಿಕರು ದೇಶದ ಉದ್ದಗಲಕ್ಕೂ ಪ್ರತಿಭಟನೆ ನಡೆಸಿ "ನಮ್ಮ ಪಾದಗಳನ್ನಲ್ಲ, ನಿಮ್ಮ ಮನಸ್ಸುಗಳನ್ನು ತೊಳೆಯಿರಿ" ಎಂದು ತಮ್ಮ ಒಡಲಾಳದ ಆಕ್ರೋಶವನ್ನು ವ್ಯಕ್ತ ಪಡಿಸಿದ್ದಾರೆ.

ಬಹಳ ಹಿಂದಿನಿಂದಲೂ 'ಅಲಹಬಾದ್' ಎಂದು ಕರೆಯಲ್ಪಡುತ್ತಿದ್ದ ಮೂರು ನದಿಗಳ ಸಂಗಮ ಸ್ಥಳ ಈಗ ಯೋಗಿ ಆದಿತ್ಯನಾಥರ ಅಪ್ಪಣೆಯಿಂದ 'ಪ್ರಯಾಗ್ ರಾಜ್' ಎಂದು ಕರೆಯಲ್ಪಡಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರು ಅಂದು ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆ ಕುಂಭಮೇಳದಲ್ಲಿ ಪಾಲ್ಗೊಂಡು, ಸ್ನಾನ ಮಾಡಿ, ಗಂಗಾನದಿಗೆ ಮಂಗಳಾರತಿ ಬೆಳಗಿ ಟಿವಿ ಕ್ಯಾಮರಾಗಳ ಎದುರು ಐವರು ಸ್ವಚ್ಛತಾ ಕಾರ್ಮಿಕರ ಪಾದ ತೊಳೆದಿದ್ದರು. ಇದಾಗಿ ಐದೇ ದಿನಗಳಲ್ಲಿ ಮೋದಿಯವರ ಕ್ಷೇತ್ರವಾದ ವಾರಣಾಸಿಯಲ್ಲಿ ಇಬ್ಬರು ದಲಿತ ಸ್ವಚ್ಛತಾ ಕಾರ್ಮಿಕರು ಸಮಾಜಕ್ಕೆ ತಮ್ಮ ಸೇವೆಯನ್ನು ಸಲ್ಲಿಸುತ್ತಿರುವಾಗಲೇ ತಮ್ಮ ಪ್ರಾಣ ಬಲಿದಾನ ಗೈದಿರುವುದು ಆಕಸ್ಮಿಕ, ಕಾಕತಾಳೀಯ ಘಟನೆಯಾಗಿರಬಹುದು. ಆದರೆ ಮೋದಿಯವರು ಐದು ಜನ ಪೌರಕಾರ್ಮಿಕರ ಪಾದ ತೊಳೆದದ್ದು ಕೇವಲ ಅವರ ಚುನಾವಣಾ ಗಿಮಿಕ್‌ಗಳಲ್ಲಿ ಒಂದಾಗಿದೆ ಎಂದು ತಮ್ಮ ಅಸಮಾಧಾನ ವ್ಯಕ್ತಪಡಿಸಿದವರಿಗೆ ಸಾಕ್ಷಿಯೊಂದು ತನ್ನಿಂದ ತಾನೇ ಎದುರಾದಂತಾಗಿದೆ.

ಮೋದಿಯವರನ್ನು ಚೆನ್ನಾಗಿ ಬಲ್ಲವರು, ಹೇಳುವ ಪ್ರಕಾರ 'ಮೋದಿಯವರು ಏನು ಮಾಡಿದರೂ ಅದಕ್ಕೊಂದು ಉದ್ದೇಶ ಇದ್ದೇ ಇರುತ್ತದೆ.' ಪೌರ ಕಾರ್ಮಿಕರನ್ನು ಅಭಿನಂದಿಸಿ ಅವರ ಪಾದಗಳನ್ನು ತೊಳೆಯುವುದರಲ್ಲಿ ಗಹನವಾದ ಉದ್ದೇಶ ಇಲ್ಲದೆ ಇರಲು ಸಾಧ್ಯವೇ ಇಲ್ಲ. ಮರುದಿನದಿಂದಲೇ ದೇಶದ ಹಲವೆಡೆ ದಲಿತ ಪೌರ ಕಾರ್ಮಿಕ ಮತ್ತು ಅವರ ಹಿತೈಷಿಗಳು ನಡೆಸಿದ ಪ್ರತಿಭಟನೆಯಲ್ಲಿ ಇದು ವ್ಯಕ್ತವಾಗಿದೆ.

ದೆಹಲಿಯ 'ಜಂತರ್ ಮಂತರ್' ನಲ್ಲಿ ಪ್ರತಿಭಟನೆ:

ಪ್ರಧಾನಿ ಮೋದಿಯವರು ದಲಿತ ಕಾರ್ಮಿಕರ ಪಾದ ತೊಳೆದ ಮರುದಿನವೇ ನವದೆಹಲಿಯ 'ಜಂತರ್ ಮಂತರ್' ನಲ್ಲಿ ದೇಶದ ವಿವಿಧ ಭಾಗಗಳಿಂದ ಆಗಮಿಸಿದ ಕಾರ್ಮಿಕರು 'ಮಲದ ಗುಂಡಿ ಸ್ವಚ್ಛ ಮಾಡುವ ಕಾರ್ಮಿಕರು ಸಾವಿಗೀಡಾಗುತ್ತಿರುವುದನ್ನು ಪ್ರತಿಭಟಿಸಿದರು. ಅಗತ್ಯ ಮತ್ತು ಅತ್ಯಾಧುನಿಕ ಸಂರಕ್ಷಣಾ ಉಪಕರಣಗಳನ್ನು ಒದಗಿಸಿದೆ ಮ್ಯಾನ್ ಹೋಲ್‌ಗಳಲ್ಲಿ ಇಳಿದು ಸ್ವಚ್ಛಮಾಡುವ ಕೆಲಸಕ್ಕೆ ಒತ್ತಾಯಿಸುವುದು ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಬೇಕೆಂದು ಒತ್ತಾಯಿಸಿದ ಪ್ರತಿಭಟನಾಕಾರರು ಸ್ವಚ್ಛತಾ ಕಾರ್ಮಿಕರಿಗೆ ಸೇವಾ ಭದ್ರತೆ, ಉತ್ತಮ ವೇತನ, ಅವರ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗ ರಂಗದಲ್ಲಿ ಅಗತ್ಯ ಮೀಸಲಾತಿ, ಉಚಿತ ಆರೋಗ್ಯ ಸೌಲಭ್ಯ ಮೊದಲಾದವುಗಳನ್ನು ಒದಗಿಸಬೇಕೆಂದು ಆಗ್ರಹಿಸಿದ್ದರು. ಕಾರ್ಮಿಕರ ಪಾದ ತೊಳೆದ ಮೋದಿಯವರ ಪ್ರಸಂಗ ಒಂದು 'ರಾಜಕೀಯ ಸ್ಟಂಟ್' ಎಂದು ಬಣ್ಣಿಸಿದ ಪ್ರತಿಭಟನಾಕಾರರು ಮೋದಿಯವರ ಚುನಾವಣಾ ಲೆಕ್ಕಾಚಾರವನ್ನು ದೇಶದ ದಲಿತರು ಮತ್ತು ಹಿಂದುಳಿದವರು ಸುಳ್ಳಾಗಿಸಲಿದ್ದಾರೆ ಎಂದರು.

ಹರ್ಯಾಣದ ಫರಿದಾಬಾದ್‌ನಿಂದ ಆಗಮಿಸಿದ್ದ ರವಿ ವಾಲ್ಮೀಕನ್ (30) ಎಂಬ ಪೌರ ಕಾರ್ಮಿಕ ಹೇಳಿದ್ದು ಹೀಗೆ. "ಮೋದಿಯವರು ನಮ್ಮನ್ನು ಸೈನ್ಯದಲ್ಲಿರುವ ಯೋಧರಿಗೆ ಸಮಾನರೆಂದು ಹೇಳಿದ್ದು ನಿಜವಾಗಿದ್ದರೆ, ನಮ್ಮಲ್ಲಿ ಒಬ್ಬನು ಕೆಲಸ ಮಾಡುತ್ತಿರುವಾಗ ಸತ್ತರೆ, ಅವನನ್ನು ಹುತಾತ್ಮ ಎಂದು ಪರಿಗಣಿಸಬೇಕು. ಆದರೆ ನಮಗೆಲ್ಲಿದೆ ಬೆಲೆ? ನಮಗೆ ಅಗತ್ಯವಾದ ಪಾದರಕ್ಷೆಗಳನ್ನಾಗಲಿ, ಕೈಗಳಿಗೆ ಕೈಗವಸಗಳನ್ನು ಮುಖ್ಯ ರಕ್ಷಾ ಕವಚಗಳನ್ನು ಮತ್ತು ಇತರ ರಕ್ಷಾ ಉಪಕರಣಗಳನ್ನು ನೀಡದೆ ಕೆಲಸ ಮಾಡಿಸುತ್ತಾರೆ" ಎಂದು ತನ್ನ ಗೋಳು ತೋಡಿಕೊಂಡನು.



ವಿಜಯ್ ಪಾಲ್ (53) ಎಂಬ ಹೆಸರಿನ ಕಾರ್ಮಿಕ 11 ಜನ ಪೌರ ಕಾರ್ಮಿಕರೊಂದಿಗೆ ಜಮ್ಮು ಮತ್ತು ಕಾಶ್ಮೀರದಿಂದ ದೆಹಲಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಬಂದಿದ್ದನು. ಅವನು ತನ್ನ ಸಮಸ್ಯೆಯನ್ನು ವಿವರಿಸುತ್ತಾ 'ಮಂತ್ರಿಗಳು ಬೇಟಿ ಕೊಟ್ಟಾಗ ಮಾತ್ರ ನಮಗೆ ಧರಿಸಲು ಮುಖ ರಕ್ಷಾ ಕವಚ ನೀಡುತ್ತಾರೆ. ಪುಲ್ವಾಮಾ ದಾಳಿಯ ನಂತರವೂ ನಮ್ಮ ಬದುಕಿನಲ್ಲಿ ಬದಲಾವಣೆ ಬಂದಿಲ್ಲ. ಕರ್ಫ್ಯೂ ಜಾರಿಯಲ್ಲಿದ್ದಾಗಲೂ ನಾವು ಕೆಲ್ಸ ಮಾಡಲೇ ಬೇಕು.

ಸ್ವಚ್ಛತಾ ಸಿಬ್ಬಂದಿಗಳ ಮಕ್ಕಳು ಸಹ ದೆಹಲಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ದೀಪಕ್ ವಾಲ್ಮಿಕನ್, ಪರಿಧಾಬಾದ್‌ನಿಂದ ಬಂದಿದ್ದ 24 ವರ್ಷ ವಯಸ್ಸಿನ ವಿದ್ಯಾರ್ಥಿ. "ನಮ್ಮಂತೆ ನೀವು ಜಾಡ್‌ಮಾಲಿಗಳಾಗುವುದು ಬೇಡ ಎಂಬ ನಮ್ಮ ತಾಯಿ ತಂದೆಯರ ಆದಾಯ ತೀರಾ ಕಡಿಮೆ ಇದ್ದು ಅವರಿಗೆ ನನ್ನನ್ನು ಓದಿಸಲು ತುಂಬಾ ಕಷ್ಟವಾಗುತ್ತಿದೆ." ಎಂದು ಹೇಳುತ್ತಾನೆ.

ಮುಂಬೈ ಆಜಾದ್ ಮೈದಾನದಲ್ಲಿ :

ಮಹಾರಾಷ್ಟ್ರದ ವಿವಿಧ ಜಿಲ್ಲೆಗಳಿಂದ ಬಂದು ಮುಂಬೈ ಆಜಾದ್ ಮೈದಾನಿನಲ್ಲಿ ಒಗ್ಗೂಡಿದ ಸಾವಿರಾರು ಜನ ಸಫಾಯಿ ಕರ್ಮಚಾರಿಗಳು, ಪೌರ ಕಾರ್ಮಿಕರು, ತ್ಯಾಜ್ಯ ಸಂಗ್ರಹಕರು ಮೋದಿಯವರ ನಾಟಕವನ್ನು ಖಂಡಿಸಿದರು. ಮಹಾರಾಷ್ಟ್ರ ಮುನ್ಸಿಪಲ್ ಕಾಮ್ಗಾರ್ ಯೂನಿಯನ್ ಮತ್ತು ಇತರ ಕಾರ್ಮಿಕ ಸಂಘಗಳು ಜಂಟಿಯಾಗಿ ಈ ಪ್ರತಿಭಟನೆಯನ್ನು ಏರ್ಪಡಿಸಿದ್ದರು.

ಮಹಾರಾಷ್ಟ್ರದಲ್ಲಿ ಕಳೆದ ಅನೇಕ ವರ್ಷಗಳಿಂದ ಕಾಯಂ ಸಫಾಯಿ ಕರ್ಮಚಾರಿಗಳಿಗಿಂತ ಹೆಚ್ಚಾಗಿ ಗುತ್ತಿಗೆ ಆಧಾರಿತ ಕಾರ್ಮಿಕರನ್ನೇ ದೊಡ್ಡ ಸಂಖ್ಯೆಯಲ್ಲಿ ದುಡಿಸಲಾಗುತ್ತಿತ್ತು. "ಸುಮಾರು 30 ಸಾವಿರ ಗುತ್ತಿಗೆ ಸಫಾಯಿ ಕರ್ಮಚಾರಿಗಳಿಗೆ ಈಗಲೂ ಕನಿಷ್ಠ ವೇತನವನ್ನು ನೀಡಲಾಗುತ್ತಿಲ್ಲ" ಎನ್ನುತ್ತಾರೆ. ಮುಂಬೈನ ಖಾಚ್ರಾ ವ್ಹಾಟುಕ್ ಶ್ರಮಿಕ್ ಸಂಘದ ಅಧ್ಯಕ್ಷ ದೀಪಕ್ ಭಲೇರಾವ್. ಒಬ್ಬೊಬ್ಬ ಕಾರ್ಮಿಕನಿಗೆ ಕೆಲವು ಲಕ್ಷ ರೂ. ಗಳಷ್ಟು ಅರಿಯರ್ಸ್ ಬಾಕಿ ಇದೆ. ಕನಿಷ್ಠ ವೇತನವನ್ನು ನಿರಾಕರಿಸುವ ಮೂಲಕ ಸರ್ಕಾರ ಕರ್ಮಚಾರಿಗಳನ್ನು ಜೀತದ ಆಳುಗಳಂತೆ ದುಡಿಸುತ್ತದೆ.

2015 ರಿಂದ, ಮಹಾರಾಷ್ಟ್ರ ರಾಜ್ಯಪಾಲರು ಪುರಸಭೆಗಳಿಗೆ ಆದೇಶವೊಂದನ್ನು ಹೊರಡಿಸಿ ಕನಿಷ್ಠ ವೇತನ ಕುರಿತಾದ ರಾಜ್ಯ ಸರ್ಕಾರದ ತೀರ್ಮಾನವನ್ನು ಜಾರಿಮಾಡಲು ನಿರ್ದೇಶಿಸಿದರು. ಆದರೆ ಭಲೇರಾವ್ ಹೇಳುವ ಪ್ರಕಾರ, ರಾಜ್ಯಪಾಲರ ಆದೇಶವನ್ನು ಉಲ್ಲಂಘಿಸಿದವರಿಗೆ ಯಾವುದೇ ಶಿಕ್ಷೆಯಾಗುತ್ತಿಲ್ಲ. 2017 ರಲ್ಲಿ ಥಾನೆ ಕಾರ್ಮಿಕ ಆಯುಕ್ತರು ಹೇಳಿಕೆಯೊಂದನ್ನು ನೀಡಿ ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನ ಅರಿಯರ್ಸ್ ಪಡೆಯುವ ಹಕ್ಕಿದೆ ಮಾತ್ರವಲ್ಲ ನಿರಾಕರಿಸಲಾದ ಕನಿಷ್ಠ ವೇತನದ 100% ರಷ್ಟನ್ನು ದಂಡದ ರೂಪದಲ್ಲಿ ಪಡೆಯುವ ಹಕ್ಕಿದೆ. ಆದರೆ ಇದೂ ಸಹ ಜಾರಿಯಾಗುತ್ತಿಲ್ಲ.

ನಾರಾಯಣ ಸರೋದೆ ಎಂಬುವನು ಮುಂಬೈ ಪಾಲಿಕೆಯ ಒಬ್ಬ ತ್ಯಾಜ್ಯ ಸಾಗಾಟಗಾರ ಡ್ರೈವರ್. ಆತ ಗುತ್ತಿಗೆ ಆದಾರದಲ್ಲಿ ಸೇವಾ ಭದ್ರತೆ ಇಲ್ಲದೆ ಕಳೆದ 18 ವರ್ಷಗಳಿಂದ ಕೆಲಸ ಮಾಡುತ್ತಿದ್ದು, ಯಾವುದೇ ರಜೆ, ಆರೋಗ್ಯ ವಿಮೆ, ರಕ್ಷಣಾ ಸಾಧನಗಳಿಲ್ಲದೆ ದುಡಿಯುತ್ತಾ ತಿಂಗಳಿಗೆ ರೂ. 12,000 ವೇತನ ಪಡೆಯುತ್ತಾನೆ. ಆದರೆ ಅಷ್ಟೇ ಕೆಲಸ ಮಾಡುವ ಕಾಯಂ ಕಾರ್ಮಿಕ ರಜೆ, ವಿಮೆ, ರಕ್ಷಣಾ ಸಲಕರಣೆಗಳ ಜೊತೆಯಲ್ಲಿ ತಿಂಗಳಿಗೆ ರೂ. 20 ಸಾವಿರಕ್ಕೂ ಹೆಚ್ಚು ವೇತನ ಪಡೆಯುತ್ತಾನೆ.

ಕರ್ನಾಟಕದಲ್ಲಿ ಮಲದ ಗುಂಡಿಗಿಳಿದು ಸಾಯುವವರು :

ಇದೇ ಮಾರ್ಚ್ 2 ರಂದು ಬೆಂಗಳೂರಿನ ಬೇಗೂರ್ ಠಾಣೆ ವ್ಯಾಪ್ತಿಯಲ್ಲಿ, ಜೈ ಹಿಂದ್ ಇಂಟರ್ ನ್ಯಾಷನಲ್ ಶಾಲೆಯ ಆವರಣದಲ್ಲಿರು ಮಲದ ಗುಂಡಿಯೊಳಗೆ ಬಿದ್ದು ಮನು ಎಂಬ ದಿನಗೂಲಿ ನೌಕರನು ಮೃತಪಟ್ಟಿರುವ ಸುದ್ದಿ ವರದಿಯಾಗಿದೆ. ಇದು ಕೇಂದ್ರ ಸರ್ಕಾರದ 'ಸ್ವಚ್ಛ ಭಾರತ್' ಅಭಿಯಾನದ ವೈಫಲ್ಯಕ್ಕೆ ಸಾಕ್ಷಿಯಾಗಿದೆ. ಕಾನೂನುಗಳು, ಕೋರ್ಟ್ ಆದೇಶಗಳು ಇದ್ದಾಗ್ಯೂ ಮಲದ ಗುಂಡಿಯೊಳಗೆ ಇಳಿಸಿ, ಕೈಗಳಿಂದಲೇ ಸ್ವಚ್ಛ ಮಾಡಿಸುವುದು ನಡೆಯುತ್ತಲೇ ಇದೆ. ಖಾಸಗಿ ಶಾಲೆಯ ಆವರಣದಲ್ಲಿರುವ ಮಲದ ಗುಂಡಿಯನ್ನು ಸ್ವಚ್ಛ ಮಾಡಿಸಲು ಶಾಲೆಯ ಆಡಳಿತ ಮಂಡಳಿಯವರು ಶಾಲೆಯ ಹತ್ತಿರದಲ್ಲೇ ತನ್ನ ಹೆಂಡತಿ ನಂದಿನಿಯೊಂದಿಗೆ ವಾಸವಿದ್ದ ಮನು ಅವರನ್ನು ಕರೆಸಿಕೊಂಡಿದ್ದರು. ಗುಂಡಿ ಪಕ್ಕದಲ್ಲಿ ನಿಂತುಕೊಂಡು ಮಲವನ್ನು ಹೊರಗೆ ತೆಗೆಯುತ್ತಿದ್ದಾಗ, ಮಲದ ಗುಂಡಿಯಿಂದ ಬರುತ್ತಿದ್ದ ದುರ್ನಾತದಿಂದಾಗಿ ಮನು ಪ್ರಜ್ಞೆತಪ್ಪಿ ತಲೆ ಕೆಳಗಾಗಿ ಗುಂಡಿಯೊಳಕ್ಕೆ ಬಿದ್ದರು. ಆತನನ್ನು ಮೇಲಕ್ಕೆ ಎತ್ತಿ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಆತ ಮೃತಪಟ್ಟಿದ್ದನು.

ಕರ್ನಾಟಕದಲ್ಲಿ ಇಂತಹ ಸಾವುಗಳು ಬಹು ಸಾಮಾನ್ಯವಾಗುತ್ತಿವೆ. ಒಂದು ಅಧ್ಯಯನದ ಪ್ರಕಾರ 2008 ರಿಂದ ಈಚೆಗೆ 70 ಕ್ಕೂ ಹೆಚ್ಚು ಪೌರ ಕಾರ್ಮಿಕರು ಮಲದ ಗುಂಡಿಯೊಳಗೆ ಬಿದ್ದು ಮೃತಪಟ್ಟಿದ್ದಾರೆ. 2018 ರ ಒಂದು ವರ್ಷದಲ್ಲೇ ಸುಮಾರು 7 ಮಂದಿ ಸಫಾಯಿ ಕಾರ್ಮಿಕರು ಮಲ ಗುಂಡಿಗೆ ಇಳಿದು ಪ್ರಾಣ ಕಳೆದುಕೊಂಡಿದ್ದಾರೆ. ಇವು ವ್ಯರ್ಥ ಸಾವುಗಳು. ತಪ್ಪಿಸಬಹುದಾದ ಕೊಲೆಗಳು! ಮಲದ ಗುಂಡಿ ಸ್ವಚ್ಛ ಮಾಡಲು ಯಂತ್ರಗಳು ಲಭ್ಯವಿವೆ. ಒಂದು ಯಾಂತ್ರಿಕ ಸಾಧನದ ಬೆಲೆ ಹೆಚ್ಚೆಂದರೆ ರೂ. 2000/– ಆದರೆ ಒಬ್ಬ ಬಡ ಕಾರ್ಮಿಕ ಆ ಕೆಲಸವನ್ನು ಕೇವಲ ರೂ. 300 ರಿಂದ ರೂ. 500 ಕ್ಕೆ ಮಾಡಿಕೊಡಬಹುದು. ಆದಷ್ಟು ಹಣದ ಆಸೆಗಾಗಿ ಒಬ್ಬ ಬಡಪಾಯಿ ಕಾರ್ಮಿಕನನ್ನು ಮಲದ ಗುಂಡಿಯೊಳಕ್ಕೆ ಇಳಿಸಿ ಸಾಯಿಸಲು ನಾವು ಸಂಕೋಚಪಡುವುದಿಲ್ಲ. ಈ ಮನೋಭಾವ ಬದಲಾಗಬೇಕಾಗಿದೆ.

ಬಡ ಕಾರ್ಮಿಕರಿಗೆ ಹಣದ ಆಸೆ ತೋರಿಸಿ, ಅವರನ್ನು ಮಲದ ಗುಂಡಿಗೆ ಇಳಿಸಿ, ಅವರು ಉಸಿರುಗಟ್ಟಿಸಾಯುವುದನ್ನುತಡೆಯಬೇಕಾಗಿರುವುದು ನಮ್ಮ ಸಮಾಜದ ಜವಾಬ್ದಾರಿ ಹೊತ್ತವರ ಜವಾಬ್ದಾರಿಯಾಗಿದೆ. ಅಂತಹ ಜವಾಬ್ದಾರಿಯನ್ನು ನಿರ್ವಹಿಸದೆ ದಲಿತ ಕಾರ್ಮಿಕರ ಪಾದ ಪೂಜೆ ಮಾಡುವುದು ನಮ್ಮ ದಲಿತ ಬಂಧುಗಳು ತಿರಸ್ಕರಿಸುವ ನಾಟಕವಷ್ಟೇ.

ಮೋದಿ ಆಳ್ವಿಕೆಯಲ್ಲಿ:

ಮೋದಿ ಸರ್ಕಾರ ತನ್ನ ಆಡಳಿತ 5 ವರ್ಷಗಳನ್ನು ಪೂರ್ಣಗೊಳಿಸುತ್ತಿದೆ. ಈ ಅವಧಿಯಲ್ಲಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಸಫಾಯಿ ಕರ್ಮಚಾರಿಗಳಿಗಾಗಿ ಅನುದಾನವನ್ನು ನೀಡಲೇ ಇಲ್ಲ. 2006 ಮತ್ತು 2013 ರ ನಡುವಿನ ಅವಧಿಯಲ್ಲಿ ಹಿಂದಿನ ಸರ್ಕಾರ 226 ಕೋಟಿ ರೂ. ಗಳನ್ನು ಸಫಾಯಿ ಕರ್ಮಚಾರಿಗಳ ಸ್ವಯಂ ಉದ್ಯೋಗ ಯೋಜನೆಗಾಗಿ ಒದಗಿಸಿತ್ತು. 2014 ರಲ್ಲಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅದು ಹೆಚ್ಚುವರಿ ಹಣವನ್ನು ಬಿಡುಗಡೆ ಮಾಡಲೇ ಇಲ್ಲ. 2015–16 ರಲ್ಲಿ ಹಿಂದಿನ ಯುಪಿಎ ಸರ್ಕಾರ ಒದಗಿಸಿದ ಹಣವನ್ನು ಬಿಜೆಪಿ ಸರ್ಕಾರ 8627 ಸಫಾಯಿ ಕರ್ಮಚಾರಿಗಳಿಗೆ ನಗದು ನೆರವು ಒದಗಿಸಿತ್ತು. ಆದರೆ ಈ ವರ್ಷ ಬಿಜೆಪಿ ಸರ್ಕಾರ ಕೇವಲ 365 ಸಫಾಯಿ ಕರ್ಮಚಾರಿಗಳಿಗೆ ನೆರವು ನೀಡಿದೆ.

ಕಳೆದ ಕೆಲವು ವರ್ಷಗಳಿಂದ ದೇಶದ ಬಹುತೇಕ ರಾಜ್ಯಗಳ ಸಫಾಯಿ ಕರ್ಮಚಾರಿಗಳು ಉತ್ತಮ ವೇತನ, ಸೇವಾ ಭದ್ರತೆ, ಸ್ವಾಭಿಮಾನದ ವೃತ್ತಿಗಾಗಿ ಹೋರಾಟ ಮಾಡುತ್ತಾ ಬಂದಿದ್ದಾರೆ. ಆದರೆ ಮೋದಿಯವರು ಅವರೊಂದಿಗೆ ಫೋಟೋ ತೆಗೆಸಿಕೊಳ್ಳುವ ಕಾರ್ಯಕ್ರಮದೊಂದಿಗೆ ಅವರ ಬದುಕಿನ ಪ್ರಶ್ನೆಗಳ ಮೇಲೆ ನಾಟಕದ ಪರದೆ ಎಳೆಯಲು ಯತ್ನಿಸಿದ್ದಾರೆ. ಇಂತಹ ರಾಜಕಾರಣ ನಮಗೆ ಬೇಕಾ?

ಕಾಲೇಜಿನಲ್ಲಿ ರಾಜಕೀಯ ಭಾಷಣಕ್ಕೆ ಕುಂದಾಪುರದಲ್ಲಿ ಪ್ರತಿಭಟನೆ

ವರದಿ: ವಾ.ಉ.

ಕುಂದಾಪುರ ಭಂಡಾರ್ಕರ್ಸ್ ಕಾಲೇಜಿನಲ್ಲಿ ಫೆಬ್ರವರಿ 25 ರಂದು ನಡೆದ ಹುತಾತ್ಮ ಸೈನಿಕರಿಗೆ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಟೀಮ್ ಮೋದಿ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ವಿದ್ಯಾರ್ಥಿಗಳನ್ನುದ್ದೇಶಿಸಿ ರಾಜಕೀಯ ಪ್ರೇರಿತ ಭಾಷಣ ಮಾಡಿರುವುದಾಗಿ ಆರೋಪಿಸಿ, ಇದಕ್ಕೆ ಅವಕಾಶ ಮಾಡಿಕೊಟ್ಟ ಕಾಲೇಜಿನ ಪ್ರಾಂಶುಪಾಲರ ವಿರುದ್ಧ ಸಿಪಿಐ(ಎಂ) ಮುಖಂಡರ ನೇತೃತ್ವದಲ್ಲಿ ಸಾರ್ವಜನಿಕರು ಪ್ರತಿಭಟಿಸುತ್ತಿದ್ದಾರೆ.

ಬಿಜೆಪಿ ಹಾಗೂ ಮೋದಿ ಪರವಾಗಿ ಏಕಮುಖಿ ಪರಾಕು ಹಾಕುತ್ತಿರುವ ಚಕ್ರವರ್ತಿ ಸೂಲಿಬೆಲೆಯವರ ಬಗ್ಗೆ ತಿಳಿದಿದ್ದೂ ಪ್ರಾಂಶುಪಾಲರು ಅವಕಾಶ ಮಾಡಿಕೊಟ್ಟುದಕ್ಕೆ ಬೇಷರಮ್ ಕ್ಷಮೆ ಕೇಳಬೇಕೆಂದು ಸಾರ್ವಜನಿಕರ ನಿಯೋಗ ಮಾರ್ಚ್ 1 ರಂದು ಅವರನ್ನು ಭೇಟಿಯಾಗಿ ಒತ್ತಾಯಿಸಿತು. ಪ್ರಾಂಶುಪಾಲರು ಇದಕ್ಕೆ ನಿರಾಕರಿಸಿದ್ದರಿಂದ ಸಾರ್ವಜನಿಕರು ಹಳೆ ವಿದ್ಯಾರ್ಥಿಗಳು ಹೊರ ಬಂದು ಮುಂದಿನ ಹೋರಾಟಗಳ ಬಗ್ಗೆ ಸಭೆ ನಡೆಸಿ ಚರ್ಚಿಸಿದರು.

ಸಭೆಯಲ್ಲಿ ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಮುಖಂಡರಾದ ಎಚ್.ನರಸಿಂಹ, ರಾಜೇಶ್ ವಡೇರಹೋಬಳಿ, ಸಾಮಾಜಿಕ ಚಿಂತಕರಾದ ಶಶಿಧರ ಹೆಮ್ಮಾಡಿ, ರಾಮಕೃಷ್ಣ ಹೇರಳೆ ಭಾಗವಹಿಸಿದ್ದರು. ಪ್ರಾಂಶುಪಾಲರಿಗೆ ಫೋನು ಕರೆ ಮಾಡುವ ಚಳುವಳಿಯನ್ನು ಸಭೆ ತೀರ್ಮಾನಿಸಿರುತ್ತದೆ.

ಕಟ್ಟಡ ಕಾರ್ಮಿಕರ ಸಂಘದಿಂದ ಬೈಂದೂರಿನಲ್ಲಿ ಮತ್ತು ಮೂಡಬಿದರೆಯಲ್ಲಿ ಪ್ರತಿಭಟನೆ:

ಬೈಂದೂರಿನಲ್ಲಿ ಕಟ್ಟಡ ಕಾರ್ಮಿಕರ ಕಾನೂನು 1996 ಉಳಿಸಿ, ಕಟ್ಟಡ ಕಾರ್ಮಿಕ ಮಂಡಳಿ ಹಾಗೂ ಕಾರ್ಮಿಕರ ಬದುಕು ರಕ್ಷಿಸಿ – ದೇಶವ್ಯಾಪಿ ಪ್ರಚಾರಾಂದೋಲನದ ಪ್ರಯುಕ್ತ–ಫೆಬ್ರವರಿ 28 ರಂದು ಬೈಂದೂರು ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಮನ್ವಯ ಸಮಿತಿಯ ನೇತೃತ್ವದಲ್ಲಿ ಬೈಂದೂರಿನಲ್ಲಿ ಸಂಸದರ ಕಚೇರಿ ಎದುರು ಧರಣಿ ನಡೆಸಿ ಮನವಿ ಸಲ್ಲಿಸಲಾಯಿತು. ಸಿಐಟಿಯು ತಾಲೂಕು ಕಾರ್ಯದರ್ಶಿ ವೆಂಕಟೇಶ ಕೋಣಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ರಾಜೀವ ಪಡುಕೋಣೆ, ಕಾರ್ಯದರ್ಶಿ ಗಣೇಶ್ ತೊಂಡೆಮಕ್ಕಿ, ಕೋಶಾಧಿಕಾರಿ ರೋನಾಲ್ಡ್, ರಾಜೇಶ್ ಕ್ರಾಸ್ತಾ ಉಪಸ್ಥಿತರಿದ್ದರು.

ಮೂಡಬಿದ್ರಿಯಲ್ಲಿ ಮಾರ್ಚ್ 6 ರಂದು ಮೂಡಬಿದ್ರಿ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಸಂಘದ ವತಿಯಿಂದ ನಡೆದ ಪ್ರತಿಭಟನೆಯನ್ನು ಮೂಡಬಿದ್ರಿ ನಾಡ ಕಚೇರಿಯ ಎದುರು ನಡೆಸಲಾಯಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಕಟ್ಟಡ ಕಾರ್ಮಿಕರ ದ.ಕ.ಜಿಲ್ಲಾ ಸಂಘಟನೆಯ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು, ಸಿಐಟಿಯು ಜಿಲ್ಲಾ ಉಪಾಧ್ಯಕ್ಷೆ ರಮಣಿ ಮೂಡಬಿದ್ರಿ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ ಮಾತನಾಡಿದರು. ಸಿಐಟಿಯು ಮುಖಂಡರಾದ ಗಿರಿಜ ಮೂಡಬಿದ್ರಿ, ರಾಧಾ ಮೂಡಬಿದ್ರಿ, ಕಟ್ಟಡ ಕಾರ್ಮಿಕ ಸಂಘದ ಮುಖಂಡರಾದ ಕೃಷ್ಣಪ್ಪ, ಜಯಾನಂದ, ವಾಸುದೇವ ಆಚಾರಿ, ವಾಸು ನಾಯ್ಕ್ ಭಾಗವಹಿಸಿದ್ದರು. ಪ್ರತಿಭಟನೆಗೂ ಮೊದಲು ಸಂಘದ ಕಚೇರಿಯಿಂದ ನಾಡಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಮೂಡಬಿದ್ರಿ, ಗುರುಪುರ–ಕೈಕಂಭಗಳಲ್ಲಿ ಬೀಡಿ ಕಾರ್ಮಿಕರ ಪ್ರತಿಭಟನೆಗಳು:

ಬೀಡಿ ಕಾರ್ಮಿಕರಿಗೆ 2015 ರಿಂದ ಬಾಕಿ ಉಳಿಸಿರುವ ತುಟ್ಟಿಭತ್ತೆಯನ್ನು ಕೂಡಲೇ ಮಂಜೂರುಗೊಳಿಸಬೇಕು. 2018 ಎಪ್ರಿಲ್‌ನಿಂದ ಹೆಚ್ಚಳವಾಗಿರುವ ವೇತನ ಬಾಕಿಯನ್ನು ಪಾವತಿಸಬೇಕು. ರಾಷ್ಟ್ರೀಯ ಸಮಾನ ಕಾರ್ಮಿಕ ವೇತನದ ಅನ್ವಯ ಬೀಡಿ ಕಾರ್ಮಿಕರಿಗೆ ಸಾವಿರ ಬೀಡಿಗೆ ರೂ.300–ಕನಿಷ್ಟ ವೇತನ ನೀಡಬೇಕು ಇತ್ಯಾದಿ ಬೇಡಿಕೆಗಳೊಂದಿಗೆ ಸಿಐಟಿಯು ಸಂಯೋಜಿತ ಬೀಡಿ ಕಾರ್ಮಿಕ ಸಂಘಟನೆಗಳು ರಾಷ್ಟ್ರವ್ಯಾಪಿ ಹಮ್ಮಿಕೊಂಡ ಪ್ರತಿಭಟನಾ ಹೋರಾಟಗಳ ಭಾಗವಾಗಿ ಬೀಡಿ ಕಾರ್ಮಿಕ ಸಂಘಟನೆಗಳು ಕಳೆದ ಕೆಲವು ದಿನಗಳಿಂದ ಅಲ್ಲಲ್ಲಿ ಪ್ರತಿಭಟನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ.

ಫೆಬ್ರವರಿ 28 ರಂದು ಮೂಡಬಿದ್ರಿ ವಲಯ ಬೀಡಿ ಕಾರ್ಮಿಕ ಸಂಘಟನೆಯ ನೇತೃತ್ವದಲ್ಲಿ ಬೀಡಿ ಕಾರ್ಮಿಕರು ತಮ್ಮ ಸಂಘದ ಕಚೇರಿಯಿಂದ ನಾಡ ಕಚೇರಿವರೆಗೆ ಪ್ರತಿಭಟನಾ ಜಾಥಾ ನಡೆಸಿದರು. ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿ ಜಾಥಾವನ್ನು ಉದ್ಘಾಟಿಸಿ ಮಾತನಾಡಿದರು. ನಾಡ ಕಚೇರಿಯಲ್ಲಿ ಮನವಿ ಸಲ್ಲಿಸುವ ಮುನ್ನ ಕಚೇರಿ ಎದುರು ನಡೆದ ಪ್ರತಿಭಟನೆಯನ್ನುದ್ದೇಶಿಸಿ ಮೂಡಬಿದ್ರಿ ಬೀಡಿ ಕಾರ್ಮಿಕ ಸಂಘದ ಅಧ್ಯಕ್ಷೆ ರಮಣಿ ಮೂಡಬಿದ್ರೆ, ಪ್ರಾಂತ ರೈತ ಸಂಘದ ದ.ಕ. ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ಸಂಘದ ಕಾರ್ಯದರ್ಶಿ ರಾಧಾ ಮೂಡಬಿದ್ರಿ, ಮುಖಂಡರಾದ ಗಿರಿಜ, ಲಕ್ಷ್ಮಿ ವಹಿಸಿದ್ದರು.

ಮಾರ್ಚ್ 5 ರಂದು ಗುರುಪುರ–ಕೈಕಂಭದಲ್ಲಿ ನಡೆದ ಬೀಡಿ ಕಾರ್ಮಿಕರ ಪ್ರತಿಭಟನೆಯನ್ನು ಗುರುಪುರ ಬೀಡಿ ಕಾರ್ಮಿಕರ ಸಂಘ, ಕುಪ್ಪೆಪದವು ಬೀಡಿ ಕಾರ್ಮಿಕರ ಸಂಘ ಹಾಗೂ ವಾಮಂಜೂರು ಬೀಡಿ ಕಾರ್ಮಿಕರ ಸಂಘಗಳು ಜಂಟಿಯಾಗಿ ನಡೆಸಿದ್ದು, ಪ್ರತಿಭಟನೆಗೂ ಮೊದಲು ಕೈಕಂಭ ಜಂಕ್ಷನ್‌ನಿಂದ ಕೈಕಂಭ ನಾಡ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಪ್ರತಿಭಟನೆಯನ್ನು ಉದ್ದೇಶಿಸಿ ದ.ಕ.ಜಿಲ್ಲಾ ಕಾರ್ಮಿಕ ಫೆಡರೇಶನ್ ಅಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಫೆಡರೇಶನ್ನಿನ ಉಪಾಧ್ಯಕ್ಷ ಯು.ಬಿ.ಲೋಕಯ್ಯ, ಬೀಡಿ ಕಾರ್ಮಿಕ ಮುಖಂಡರಾದ ಸದಾಶಿವ ದಾಸ್, ಗಂಗಯ್ಯ ಅಮೀನ್, ಎನ್.ಎ.ಹಸನಬ್ಬ, ವಸಂತಿ ಕುಪ್ಪೆಪದವು, ನೋಣಯ್ಯ ಗೌಡ, ಹೊನ್ನಯ್ಯ ಅಮೀನ್ ಭಾಗವಹಿಸಿದ್ದರು.

ರಕ್ತ ನಮ್ಮದಾದರೇನು? ಅವರದಾದರೇನು?

–ಸಾಹಿರ್ ಲೂಧಿಯಾನ್ವಿ

ರಕ್ತ ನಮ್ಮದಾದರೇನು? ಅವರದಾದರೇನು?
ಒಟ್ಟಿನಲ್ಲದು ಮನುಷ್ಯರದ್ದೇ..
ಯುದ್ಧ ಪೂರ್ವದಲ್ಲಾದರೇನು? ಪಶ್ಚಿಮದಲ್ಲಾದರೇನು?
ಒಟ್ಟಿನಲ್ಲಿ ಕುಸಿಯುವುದು ಶಾಂತಿನಿಕೇತನವೇ..

ಬಾಂಬುಗಳು ಮನೆಯ ಮೇಲೆ ಬಿದ್ದರೇನು?
ದೂರದ ಗಡಿಯಲ್ಲಾದರೇನು?
ಭೂಮಿಯ ಹೊಲಿಗೆಗಳು ಘಾಸಿಗೊಳ್ಳುತ್ತವೆ
ಬೆಂಕಿಬಿದ್ದ ಹೊಲ ನಮ್ಮದಾದರೇನು? ಅವರದಾದರೇನು?
ಸುಡುಬೆಂಕಿಗೆ ಸಕಲ ಜೀವಗಳು ತತ್ತರಿಸುತ್ತವೆ

ಟ್ಯಾಂಕುಗಳು ಮುನ್ನುಗ್ಗಿದರೇನು?
ಹಿಂದೆ ಸರಿದರೇನು?
ಭೂತಾಯಿ ಒಡಲು ಬರಿದಾಗುತ್ತದೆ
ವಿಜಯದ ಸಂಭ್ರಮವಾದರೇನು? ಸೋಲಿನ ಸೂತಕವಾದರೇನು?
ಬದುಕು ಗೋರಿಯಲ್ಲಿ ಅವಿತು ಕಣ್ಣೀರಿಡುತ್ತದೆ.

ಯುದ್ಧವೇ ಸಮಸ್ಯೆಯಾಗಿರುವಾಗ
ಯುದ್ಧ ಹೇಗೆ ಸಮಸ್ಯೆಗಳ ಬಗೆಹರಿಸೀತು
ಇಂದು ರಕ್ತ ಮತ್ತು ಬೆಂಕಿಗಳ ಮಳೆ ಸುರಿಸುತ್ತವೆ
ನಾಳೆ ಹಸಿವು ಮತ್ತು ಕ್ಷಾಮಗಳು ಬೆಳೆಯುತ್ತವೆ
ಆದ್ದರಿಂದ ಸಜ್ಜನರೇ
ಯುದ್ಧವು ಹಿಂದೆ ಸರಿದು ಇಲ್ಲವಾದರೆ ಚಂದ
ನಮ್ಮ ನಿಮ್ಮ ಅಂಗಳದಲ್ಲಿ ದೀಪ ಬೆಳಗಿದರೆ ಚಂದ

ಹಿಂದಿ ಮೂಲ– ಸಾಹಿರ್ ಲೂಧಿಯಾನ್ವಿ– ಅನುವಾದ– ಶಿವಸುಂದರ್

ಯುದ್ಧ ಬೇಕೇ ಬೇಕು ಎನ್ನುವವರಿಗಾಗಿ..

ನೀವು ನಿಮ್ಮ ಸೈನಿಕರನ್ನು
ಪ್ರೀತಿಸುವಿರಾದರೆ

ನೀವು ನಿಮ್ಮ ಸೈನಿಕರನ್ನು ಪ್ರೀತಿಸುವಿರಾದರೆ,
ದೂಡಬೇಡಿ ಅವರನ್ನು ಯುದ್ಧಕ್ಕೆ.

ನೀವು ನಿಮ್ಮ ಸೈನಿಕರನ್ನು ಪ್ರೀತಿಸುವಿರಾದರೆ
ಶ್ರಮಿಸಿ ಶಾಂತಿಗಾಗಿ ಮತ್ತು ನ್ಯಾಯಕ್ಕಾಗಿ. ಶಾಂತಿಗಿಂತ ಮಿಗಿಲಾಗಿ ಸಾವಿದೆ ಯುದ್ಧದಲ್ಲಿ.

ನೀವು ನಿಮ್ಮ ಸೈನಿಕರನ್ನು ಪ್ರೀತಿಸುವಿರಾದರೆ,
ವ್ಯವಸ್ಥೆಯ ರಚನೆಯಲ್ಲಿರುವ ಹಿಂಸೆಯನ್ನು ಅರ್ಥಮಾಡಿಕೊಳ್ಳಿ. ಸೈನಿಕರ ಸಾವು ಶುರುವಾಗುವುದು ಯುದ್ಧಭೂಮಿಗೆ ಎಷ್ಟೋ ಮುಂಚೆ..

ನೀವು ನಿಮ್ಮ ಸೈನಿಕರನ್ನು ಪ್ರೀತಿಸುವಿರಾದರೆ,
ಪ್ರೀತಿಸಿರಿ, ಮನಷ್ಯರಂತೆ ಅವರನ್ನು, ಅವರ ಸಮವಸ್ತ್ರವನ್ನಲ್ಲ.

ನೀವು ನಿಮ್ಮ ಸೈನಿಕರನ್ನು ಪ್ರೀತಿಸುವಿರಾದರೆ,
ಗೊತ್ತಿರಲಿ, ಅವರು ಸಾಯಲು ಬಯಸುವುದಿಲ್ಲವೆಂದು. ನೀವು ಬಯಸುವಂತೆ ಬದುಕಿರಲು, ಅವರೂ ಬಯಸುತ್ತಾರೆ.

ನೀವು ನಿಮ್ಮ ಸೈನಿಕರನ್ನು ಪ್ರೀತಿಸುವಿರಾದರೆ,
ಅರ್ಥಮಾಡಿಕೊಳ್ಳಿ ಕೃಷಿನೀತಿಯನ್ನು, ಮತ್ತದರ ಪರಿಣಾಮವನ್ನು.

ನೀವು ನಿಮ್ಮ ಸೈನಿಕರನ್ನು ಪ್ರೀತಿಸುವಿರಾದರೆ,
ಹೋಗಿ ನೋಡಿ ಬರ ಬಡಿದ ಹಳ್ಳಿಯ–ಇಂಧನಕ್ಕೆಂದು ಸೂರೆಮಾಡಿದ ಗ್ರಾಮವನ್ನು,
ಬೆಳೆವುದಲ್ಲವೆ ಅಲ್ಲೆ ನಿಮ್ಮ ಆಡಂಬರದ ನಾಡಭಕ್ತಿಯ ಮೇವು.

ನೀವು ನಿಮ್ಮ ಸೈನಿಕರನ್ನು ಪ್ರೀತಿಸುವಿರಾದರೆ,
ಚರಿತ್ರೆ ಓದಿ. ಇವೆಯೆ ಸರಿಗಟ್ಟುವ ಇಂಥ ದಾಳಿಗಳು ಅಲ್ಲಿ?

ನೀವು ನಿಮ್ಮ ಸೈನಿಕರನ್ನು ಪ್ರೀತಿಸುವಿರಾದರೆ,
ಒಮ್ಮೆ ಉಸಿರೆಳೆದುಕೊಳ್ಳಿ, ಇನ್ನೂ ಹೆಚ್ಚು ರಕ್ತಕ್ಕಾಗಿ ಹುಯ್ಲಿಡುವ ಮೊದಲು,
ಪ್ರತೀಕಾರಕ್ಕಾಗಿ ಯುದ್ಧಮಾಡುವವರಾರು? ನೀವಾ?

ಪ್ರೀತಿಸಬಲ್ಲಿರಾ ರೈತನನ್ನು? ದಿನಗೂಲಿ ಶ್ರಮಿಕನನ್ನು? ಬಡವ– ದೀನ–ದಲಿತನನ್ನು?
ಹೌದಾದರೆ ನೀವೀಗಾಗಲೇ ಪ್ರೀತಿಸಿಬಿಟ್ಟಿದ್ದೀರಿ ಸೈನಿಕನನ್ನು, ಸಮವಸ್ತ್ರವಿಲ್ಲದೆಯೇ.

ಸೋಮನಾಥ ಮುಖರ್ಜಿ

ಮರ್ಯಾದೆ ಮತ್ತು ಜಾತಿ ಸಂಪ್ರದಾಯ ಹೆಸರಿನಲ್ಲಿ ನಡೆಯುವ ಹತ್ಯೆ (ತಡೆ, ರಕ್ಷಣೆ ಮತ್ತು ಪುನರ್ವಸತಿ) ತಡೆ ಮಸೂದೆ 2018 ರ ಕುರಿತಂತೆ ದುಂಡು ಮೇಜಿನ ಸಭೆ

ಮರ್ಯಾದೆ ಮತ್ತು ಜಾತಿ ಸಂಪ್ರದಾಯ ಹೆಸರಿನಲ್ಲಿ ನಡೆಯುವ ಹತ್ಯೆ ತಡೆ ಕರಡು ಮಸೂದೆ 2018 ಯ ಮೇಲೆ, ಮಾರ್ಚ್ 2,ರಂದು ಬೆಂಗಳೂರಿನ ಶಾಸಕರ ಭವನದ ಸಭಾಂಗಣದಲ್ಲಿ ನಡೆದ ದುಂಡು ಮೇಜಿನ ಸಭೆಯಲ್ಲಿ, ಬಾಗೇಪಲ್ಲಿಯ ಮಾಜಿ ಶಾಸಕರಾದ ಜಿ.ವಿ.ಶ್ರೀರಾಮ ರೆಡ್ಡಿ, ಪ್ರಸಿದ್ಧ ಉಚ್ಚ ನ್ಯಾಯಾಲಯದ ಲಾಯರ್ಸ್ ಗಳಾದ, ವೆಂಕಟೇಶ್ ದೊಡ್ಡೇರಿ, ಮೋಹನ್ ಕುಮಾರ್, ಮಂಜುನಾಥ್, ರಕ್ಷಿತ್ ಶಿವರಾಮ್, ಶರಣ ಬಸವಪ್ಪ, ರಾಮಯ್ಯ, ರಂಗಸ್ವಾಮಿ, ಮತ್ತಿತ್ತರರು ಭಾಗವಹಿಸಿದ್ದರು.

ಇವರೊಂದಿಗೆ, ಕರ್ನಾಟಕ ರಾಜ್ಯ ಎಸ್.ಸಿ ಮತ್ತು ಎಸ್.ಟಿ ನೌಕರರ ಸಮನ್ವಯ ಸಮಿತಿ ಅಧ್ಯಕ್ಷ ರಾದ ಡಿ.ಶಿವಶಂಕರ್, ಮೋಹನ್ ಕುಮಾರ್ ಮತ್ತು ಇವರ ಇತರೆ ಪದಾಧಿಕಾರಿಗಳು, ಎಸ್.ವೈ.ಗುರುಶಾಂತ್, ಆದಿವಾಸಿ ಸಮನ್ವಯ ಸಮಿತಿ ಮುಖಂಡರು, ಡಿ.ವೈ.ಎಫ್.ಐ. ನ ರಾಜ್ಯ ಪ್ರಧಾನ ಕಾರ್ಯದರ್ಶಿ ಬಸವರಾಜು ಪುಜಾರಿ, ರೇಣುಕ, ಇನ್ನಿತರರು ಭಾಗವಹಿಸಿದ್ದರು. ಸಾರ್ವಜನಿಕ ಉದ್ಯಮಗಳಾದ ಬಿ ಇ ಎಮ್ ಎಲ್, ಮತ್ತು ಬಿಎಸ್ ಎನ್ ಎಲ್ ನ ಎಸ್.ಎಸ್ಸಿ ಎಸ್.ಟಿ ನೌಕರರ ಅಸೋಸಿಯೇಷನ್ ನ ನಾಯಕರುಗಳು, ಎಲ್.ಐ.ಸಿ ಮತ್ತು ಜಿ.ಐ.ಸಿ ಎಸ್.ಸಿ ಮತ್ತು ಎಸ್.ಟಿ ನೌಕರರ ಅಸೋಸಿಯೇಷನ್, ಮತ್ತು ಕೆನರಾ ಬ್ಯಾಂಕ್ ಮತ್ತು ಕಾರ್ಪೊರೇಷನ್ ಬ್ಯಾಂಕ್ ಎಸ್.ಸಿ ಮತ್ತು ಎಸ್.ಟಿ ನೌಕರರ ಅಸೋಸಿಯೇಷನ್ ನ ನಾಯಕರು, ಹಾಗೂ ದಲಿತ ಸಂಘರ್ಷ ಸಮಿತಿಯ ಹಲವು ನಾಯಕರು ಭಾಗವಹಿಸಿದ್ದರು.

ಕರಡು ಮಸೂದೆಯ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಶ್ರೀರಾಮ ರೆಡ್ಡಿ ಯವರು, ದಲಿತ್ ಶೋಷಣ್ ಮುಕ್ತಿ ಮಂಚ್ (ಡಿ ಎಸ್ ಎಮ್ ಎಮ್) ನ ಈ ಪ್ರಯತ್ನ ವನ್ನು ಅಭಿನಂದಿಸುತ್ತಾ, ಇತ್ತೀಚಿನ ವರ್ಷಗಳಲ್ಲಿ ಮರ್ಯಾದೆ ಯ ಹೆಸರಿನಲ್ಲಿ ದೌರ್ಜನ್ಯ ಗಳು ವಿಪರೀತ ವಾಗಿ ಹೆಚ್ಚಾಗಿರುವುದು ವಿಷಾದನೀಯವೆಂದರು. ನಮ್ಮ ದೇಶದಲ್ಲಿ ಊಳಿಗಮಾನ್ಯ ವ್ಯವಸ್ಥೆ ಇನ್ನೂ ಜೀವಂತವಾಗಿ ಇರುವುದರಿಂದಲೇ, ಕಾಪ್ ಪಂಚಾಯತಿ ಗಳು ಕೊಡುವ ತೀರ್ಮಾನ ಗಳು ಕೂಡಾ ಈ ಪದ್ಧತಿಯನ್ನು ಪ್ರೋತ್ಸಾಹ ಮಾಡಿಕೊಂಡು ಬರುತ್ತಿದೆ. ಅಂತರ ಜಾತಿ ವಿವಾಹಿತರಿಗೆ ರಕ್ಷಣೆ ಒದಗಿಸುವ ನಿಟ್ಟಿನಲ್ಲಿ ಇಂತಹ ಕಾನೂನುಗಳ ಅಗತ್ಯವಿದೆ, ಆದರೆ, ಈಗಾಗಲೇ, ಇಂತಹ ಹಲವಾರು ಕಾನೂನುಗಳು ಬೇಕಾದಷ್ಟಿವೆ. ಆದಾಗ್ಯೂ, ಅಪರಾಧಗಳ ಪ್ರಮಾಣಗಳು ಕಡಿಮೆಯಾಗಿಲ್ಲ. ಇದರ ಅರ್ಥ, ಜಾತಿ ಪದ್ಧತಿಯನ್ನು ಬೇರು ಸಹಿತ ಕಿತ್ತು ಹಾಕುವವರೆಗೂ ಈ ಬರ್ಬರ ಅಮಾಯಕ ಮತ್ತು ಅಮಾನವೀಯ ಕೃತ್ಯಗಳಿಗೆ ಕೊನೆ ಎಂಬುದು ಇರುವುದಿಲ್ಲ ಎಂದರು.

ಈ ಚರ್ಚೆಯ ಮೇಲೆ ಭಾಗವಹಿಸಿದ್ದ ಹಲವಾರು ಅಡ್ವೋಕೇಟ್ ಗಳು, ಅಂತರ ಜಾತಿಯ ವಿವಾಹಿತರಾದವರಿಗೆ ಸರ್ಕಾರವೇ ಭದ್ರತೆ ಒದಗಿಸಬೇಕು. ಇಂತಹ ಜೋಡಿಗಳಿಗೆ ಕಡ್ಡಾಯವಾಗಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿಯನ್ನು ಸರ್ಕಾರ ಒದಗಿಸಬೇಕು. ಭೂಮಿ, ವಸತಿ ಮತ್ತು ಇನ್ನಿತರೆ ಮೂಲ ಸೌಕರ್ಯಗಳನ್ನು ಒದಗಿಸಬೇಕು ಎಂಬ ಅಭಿಪ್ರಾಯಗಳನ್ನು ನೀಡಿದರು. ನಮ್ಮ ದೇಶದಲ್ಲಿ ಕಳೆದ ವರ್ಷ ಸುಮಾರು 300 ಕೊಲೆಗಳು ನಡೆದಿವೆ. ಸೂಕ್ತ ಕಾನೂನು ಗಳು ಇಲ್ಲದ ಕಾರಣ ಅಪರಾಧ ವೆಸಗಿದವರು ತಪ್ಪಿಸಿಕೊಳ್ಳುತ್ತಿದ್ದಾರೆ. ಜಗತ್ತಿನ ಇನ್ನಿತರ ದೇಶಗಳಲ್ಲೂ ಇಂತಹ ಅಪರಾದಗಳು ನಡೆಯುತ್ತವೆ. ಲಭ್ಯವಿರುವ ಮಾಹಿತಿಗಳ ಪ್ರಕಾರ, 5 ಸಾವಿರಕ್ಕೂ ಹೆಚ್ಚು ಪ್ರಕರಣಗಳು ನಡೆದಿವೆ. ಆದ್ದರಿಂದ ಈ ಕಾನೂನು ನಿನ ಅವಶ್ಯಕತೆ ಇದೆ, ರಾಜ್ಯ ಮಟ್ಟದಲ್ಲಿಯೂ ಇಂತಹ ಕಾನೂನು ಅಗತ್ಯವಿದೆ ಎಂಬ ಅಭಿಪ್ರಾಯ ಗಳು ಸಭೆಯಲ್ಲಿ ಮೂಡಿ ಬಂದವು.

ಈ ದುಂಡು ಮೇಜಿನ ಸಭೆಯನ್ನು, ದಲಿತ ಹಕ್ಕುಗಳ ಸಮಿತಿಯ ವತಿಯಿಂದ ಆಯೋಜಿಸಲಾಗಿತ್ತು. ಡಿ ಎಸ್ ಎಮ್ ಎಮ್ ನ ರಾಷ್ಟ್ರೀಯ ಸದಸ್ಯ ರಾದ ನಾಗರಾಜ ನಂಜುಂಡಯ್ಯ ನವರು ಅಧ್ಯಕ್ಷ ತೆ ವಹಿಸಿದ್ದರು. ಡಿಎಸ್ಹೆಚ್ ನ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ ಉಪಸ್ಥಿತರಿದ್ದು ಮಸೂದೆಯಲ್ಲಿನ ಹಲವು ಅಂಶಗಳನ್ನು ಸಭೆಗೆ ತಿಳಿಸಿ ಕೊಟ್ಟರು. ಆರಂಭದಲ್ಲಿ ಎನ್.ರಾಜಣ್ಣ ಸ್ವಾಗತಿಸಿದರು. ಕೊನೆಯಲ್ಲಿ, ಹೆಚ್.ಜಿ.ನಾಗಣ್ಣ ವಂದಿಸಿದರು.



ಕರಾಳ ಭೂಸ್ವಾಧೀನ ಕರ್ನಾಟಕ ತಿದ್ದುಪಡಿ ಮಸೂದೆ – 2019 ಸುಟ್ಟು ಕರ್ನಾಟಕ ಪ್ರಾಂತ ರೈತ ಸಂಘ ಪ್ರತಿಭಟನೆ

ರೈತರ ಪಾಲಿಗೆ ಕರಾಳ ಶಾಸನವಾಗಿರುವ ದೊಡ್ಡ ಬಂಡವಾಳದಾರರು, ಬಹುರಾಷ್ಟ್ರೀಯ ಸಂಸ್ಥೆಗಳ ಲೂಟಿಗೆ ನೆರವಾಗುವ ಭೂ ಸ್ವಾಧೀನ, ಪುನರ್ವಸತಿ ಹಾಗೂ ಪುನರ್ ವ್ಯವಸ್ಥೆಯಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕ ಹಕ್ಕು ಕರ್ನಾಟಕ ತಿದ್ದುಪಡಿ ಮಸೂದೆಯನ್ನು – 2019 ಅನ್ನು ಸುಟ್ಟು ಕರ್ನಾಟಕ ಪ್ರಾಂತ ರೈತಸಂಘ (ಕೆಪಿಆರ್‌ಎಸ್) ಭಾನುವಾರ ಪ್ರತಿಭಟನೆ ನಡೆಸಿತು.

ಈ ವೇಳೆ ಮಾತನಾಡಿದ ಕೆಪಿಆರ್‌ಎಸ್ ರಾಜ್ಯ ಉಪಾಧ್ಯಕ್ಷ ಮಾರುತಿ ಮಾನ್ಪಡೆ, ಕಳೆದ ಫೆಬ್ರವರಿ 6 ರಿಂದ 13, 2019ರಂದು ನಡೆದ ವಿಧಾನಸಭಾ ಅಧಿವೇಶನದಲ್ಲಿ ಏನೊಂದು ಚರ್ಚೆ ಮಾಡದೇ, ದೊಡ್ಡ ಬಂಡವಾಳದಾರರು, ಬಹುರಾಷ್ಟ್ರೀಯ ಸಂಸ್ಥೆಗಳ ಲೂಟಿಗೆ ನೆರವಾಗುವ. ಭೂ ಸ್ವಾಧೀನ, ಪುನರ್ವಸತಿ ಹಾಗೂ ಪುನರ್ ವ್ಯವಸ್ಥೆಯಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕ ಹಕ್ಕು ಕರ್ನಾಟಕ ತಿದ್ದುಪಡಿ ಮಸೂದೆಯನ್ನು – 2019 ನ್ನು ಅಂಗೀಕರಿಸಿದೆ. ಬಿಜೆಪಿಯ ದುಷ್ಕೃತ್ಯದಿಂದುಂಟಾದ ಪರಿಸ್ಥಿತಿಯನ್ನು ವಿಧಾನಸಭೆಯಲ್ಲಿ ದುರುಪಯೋಗಪಡಿಸಿಕೊಂಡು ಈ ಮಸೂದೆ ಅಂಗೀಕರಿಸಿದೆ. ರೈತರ ಮತ್ತು ರೈತಸಂಘಗಳ ಜೊತೆ ಚರ್ಚೆ ನಡೆಸುವ ಸೌಜನ್ಯವನ್ನು ಸರಕಾರ ತೋರಲಿಲ್ಲ ಎಂದು ದೂರಿದರು.

ಮಸೂದೆಯು ರೈತ ವಿರೋಧಿಯಾದ ಕರಾಳ ತಿದ್ದುಪಡಿಯಾಗಿದೆ. ಇದು ರೈತರ ಜಮೀನುಗಳನ್ನು ಯಾವುದೇ ಒಪ್ಪಿಗೆಯಿಲ್ಲದೇ, ಭೂಸ್ವಾಧೀನದಿಂದ ಸಮಾಜ ಹಾಗೂ ಪರಿಸರದ ಮೇಲಾಗುವ ಪರಿಣಾಮಗಳನ್ನಾಗಲೀ ಮತ್ತು ದೇಶದ, ರಾಜ್ಯದ ಆಹಾರ ಭದ್ರತೆ ಹಾಗೂ ಆಹಾರದ ಸ್ವಾವಲಂಬನೆಯ ಮೇಲಾಗುವ ದುಷ್ಪರಿಣಾಮಗಳನ್ನಾಗಲೀ ಪರಿಗಣಿಸದೇ, ಪುನರ್ವಸತಿ ಕ್ರಮಗಳನ್ನು ದುರ್ಬಲಗೊಳಿಸುವ ಹಾಗೂ ಬೇಕಾಬಿಟ್ಟಿ ದರಕ್ಕೆ ಸ್ವಾಧೀನ ಮಾಡುವ ದುರುದ್ದೇಶವನ್ನು ಹೊಂದಿದೆ. ಇದು ಈ ಹಿಂದೆ ಕೇಂದ್ರದ ನರೇಂದ್ರ ಮೋದಿ ಸರಕಾರ ಮೂರು ಬಾರಿ ಸುಗ್ರೀವಾಜ್ಞೆ ಮೂಲಕ ತಿದ್ದುಪಡಿ ಮಾಡಲು ಯತ್ನಿಸಿದುದರ ಪಡಿಯಚ್ಚಾಗಿದೆ. ಆದ್ದರಿಂದ ರೈತ ವಿರೋಧಿ ಈ ತಿದ್ದುಪಡಿ ಕಾಯ್ದೆಯನ್ನು ತಕ್ಷಣವೇ ವಾಪಾಸು ಪಡೆಯುವಂತೆ ಕರ್ನಾಟಕ ಪ್ರಾಂತ ರೈತ ಸಂಘ ಹಾಸನ ಜಿಲ್ಲಾ ಸಮಿತಿ ಒತ್ತಾಯಿಸುತ್ತದೆ. ಜೊತೆಗೆ ಈ ರೈತ ವಿರೋಧಿ ಕರಾಳ ಮಸೂದೆಯನ್ನು ಮಾಡಲು ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಎಂದು ಎಚ್ಚರಿಸಿದರು.

ಪ್ರತಿಭಟನೆಗೆ ಬೆಂಬಲ ಸೂಚಿಸಿ ಮಾತನಾಡಿದ ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್, ರೈತರ ಭೂಮಿಯನ್ನು ಮತ್ತು ಕಾರ್ಮಿಕರ ಶ್ರಮಶಕ್ತಿಯನ್ನು ಸರ್ಕಾರಗಳು ಲೂಟಿ ಮಾಡಲು ಸರ್ಕಾರಗಳು ಪೈಪೋಟಿಗೆ ಬಿದ್ದಂತೆ ಮಾಡುತ್ತಿವೆ. ರೈತವಿರೋಧಿ ಕರಾಳ ಮಸೂದೆಯನ್ನು ಜಾರಿ ಮಾಡಲು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಪ್ರಧಾನಿ ನರೇಂದ್ರ ಮೋದಿ ಜಾರಿ ಮಾಡಲು ವಿಫಲರಾಗಿ ಈಗ ರಾಜ್ಯಗಳ ಮೇಲೆ ಜಾರಿ ಮಾಡುವ ಹೊಣೆ ಹೊರಿಸಿದ್ದಾರೆ. ಬಿಜೆಪಿ ವಿರೋಧಿಸಿ ಮೈತ್ರಿ ಸರ್ಕಾರ ರಚಿಸಿರುವ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಅದೇ ಕರಾಳ ಮಸೂದೆ ಜಾರಿಗೆ ಪಟ್ಟು ಹಿಡಿದು ಕುಳಿತಿವೆ. ಜೆಡಿಎಸ್ ಪಕ್ಷದವರು ಅವರೇ ಹೇಳಿಕೊಳ್ಳುವಂತೆ ನಿಜವಾಗಿಯೂ ರೈತ ಪರವೇ ಆಗಿದ್ದರೆ ಈ ಕರಾಳ ಮಸೂದೆಯನ್ನು ಜಾರಿ ಮಾಡಬಾರದು ಎಂದು ಹೇಳಿದರು.

ಹೇಮಾವತಿ ಪ್ರತಿಮೆ ಬಳಿ ನಡೆದ ಪ್ರತಿಭಟನೆಯಲ್ಲಿ ಸರ್ಕಾರವು ವಿಧಾನಸಭೆಯಲ್ಲಿ ಚರ್ಚೆ ಇಲ್ಲದೆ ಅನುಮೋದಿಸಿ ರಾಜ್ಯಪಾಲರ ಸಹಿಗಾಗಿ ಕಳುಹಿಸಿರುವ ಪ್ರತಿಯನ್ನು ಸುಡಲಾಯಿತು.

ಪ್ರತಿಭಟನೆಯಲ್ಲಿ ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷ ಎಚ್.ಆರ್.ನವೀನ್‌ಕುಮಾರ್, ಜಿಲ್ಲಾ ಕಾರ್ಯದರ್ಶಿ ವಸಂತಕುಮಾರ್, ಹಾಸನ ತಾಲೂಕು ಅಧ್ಯಕ್ಷ ದೇವರಾಜ್, ಕಾರ್ಯದರ್ಶಿ ಪ್ರಕಾಶ್, ಸಕಲೇಶಪುರ ತಾಲೂಕು ಅಧ್ಯಕ್ಷ ಶಂಕರ್, ಕಾರ್ಯದರ್ಶಿ ಗಿಡ್ಡೇಗೌಡ, ಚನ್ನರಾಯಪಟ್ಟಣ ತಾಲೂಕು ಮುಖಂಡರಾದ ಎಚ್.ಎಸ್.ಮಂಜುನಾಥ್, ಅರಸೀಕೆರೆ ತಾಲೂಕು ಮುಖಂಡರಾದ ಹರೀಶ್ ಮತ್ತು ಹೊನ್ನೇಗೌಡ, ಅಶೋಕ್, ಮಲ್ಲಿಕಾರ್ಜುನ್ ಮತ್ತಿತರರು ಇದ್ದರು.

ಎಚ್.ಆರ್. ನವೀನ್‌ಕುಮಾರ್

ಕಾಳಿಂಗ ನಾವುಡರು ತೀರಿ ಹೋದಾಗಲೇ ನಾನು ನನ್ನ ಕಸುಬು ಬಿಡಬೇಕಾಗಿತ್ತು

(ಜಲವಳ್ಳಿ ವೆಂಕಟೇಶರಾವ್ ಅವರ ಸಂದರ್ಶನದ ಆಯ್ದ ಭಾಗ) ಸಂದರ್ಶಕರು: **ಡಾ.ವಿಠ್ಠಲ ಭಂಡಾರಿ**



1) ಯಕ್ಷಗಾನದ ಮೇರು ಶಿಖರದ ಮೇಲೇರಿ ಒಮ್ಮೆ ಹಿಂತಿರುಗಿ ನೋಡಿದರೆ ಕಾಣುವ ಚಿತ್ರ ಯಾವುದು? ನಿಮ್ಮ ಬಾಲ್ಯ ಅಕಾಲದ ಮನೆಯ ಸ್ಥಿತಿ ಗತಿಯನ್ನೂ ಒಳಗೊಂಡಂತೆ ಹೇಗಿತ್ತು?

ಬಾಲ್ಯದಲ್ಲೆ ತಂದೆ ತೀರಿಕೊಂಡರು ನನ್ನ ತಾಯಿಗೆ ನನ್ನನ್ನು ಸಾಕೊದು ಕಷ್ಟ ಆಯ್ತು. ಆಮೀನು ಇಯಾದಿ ಇರಲಿಲ್ಲ. ಓದುವ ವಾತಾವರಣವೂ ಇರಲಿಲ್ಲ. ನನ್ನ ಅಜ್ಜನ ಮನೆಯಲ್ಲಿ ನನಗೆ ಆಶ್ರಯ ಸಿಕ್ತು. ಅಲ್ಲಿ ಬಾಲ್ಯ ಕಳೆದು ಜಲವಳ್ಳಿಗೆ ಬಂದೆ. ಜಲವಳ್ಳಿ ಹುಟ್ಟಿದ ಊರು ಬಳಕೂರು ತಾಯಿಯ ತವರು ಮನೆ. ಅಲ್ಲೆ ಬಳಕೂರು ಕೂಡ್ಲಮನೆ ಶಾಲೆಗೆ ನನ್ನನ್ನು ಸೇರಿಸಿದ್ರು. ಒಂದನೇ ಇಯತ್ತಿ ಮುಗಿಸಿ ಎರಡನೇ ಇಯತ್ತೆಗೆ ಹೋದ ನೆನಪು. ಹಾಗೇ ಇತ್ತಿಚೆಗೆ ತಂದ ಸರ್ಟಿಫಿಕೆಟ್‌ನಲ್ಲಿ ನಮೂದು ಇದೆ. ಎರಡನೇ ಇಯತ್ತಿಗೆ ಹೊದ ನೆನಪಿಲ್ಲ. ಜಲವಳ್ಳಿಗೆ ಬಂದ ಮೇಲೆ ಕೂಲಿ ನಾಲಿ ಮಾಡಿ ಜೀವನೋಪಾಯ ಸಾಗಿಸುತ್ತಿದ್ದೆ. ಆಗಲೇ ಯಕ್ಷಗಾನದ ಕುರಿತು ಆಸಕ್ತಿ ಇತ್ತು. ಅಲ್ಲಿ ಸುತ್ತ–ಮುತ್ತಲೂ ಆಗೋ ಆಟವನ್ನು ನೋಟ್ತಿದ್ದೆ.

2) ಯಕ್ಷಗಾನ ಕಲೆ ನಿಮಗೆ ನಿಮ್ಮ ಹಿರಿಯರಿಂದ ಒಲಿದದ್ದಾ?ನಿಮ್ಮ ಮೊದಲ ಪ್ರವೇಶ ಹೇಗಾಯ್ತು?

ನಾನು 1933 ರಲ್ಲಿ ಹುಟ್ಟಿದ್ದು. ಮೊದಲ ವೇಷ ಮಾಡಿದ್ದು ನನ್ನ 16 ನೇ ವಯಸ್ಸಿನಲ್ಲಿ ನಮ್ಮ ಹಿರಿಯರು ಯಾರು ಯಕ್ಷಗಾನ ಕ್ಷೇತ್ರದಲ್ಲಿ ಇರಲಿಲ್ಲ. ಇದು ನನ್ನ ಸ್ವಯಾರ್ಜಿತ. ಅಮ್ಮನಿಗೂ ನಾನು ಯಕ್ಷಗಾನಕ್ಕೇ ಸೇರೋದು ಇಷ್ಟ ಇರಲಿಲ್ಲ. ರಾತ್ರಿ ನಿದ್ದೆ ಕೆಟ್ರೆ ಆಯಸ್ಸು ಕಡಿಮೆ ಆಗ್ತದೆ ಅಂತ ಆಕೆಯ ನಂಬಿಕೆ ಆಗಿತ್ತು. ಈಗ 83 ವರ್ಷ; ಆಯಸ್ಸು ಗಟ್ಟಿಯಾಗೆ ಇದೆ. ಸ್ವಲ್ಪ ಕಾಲುನೋವು, ಮಂಡಿನೋವು ಇತ್ಯಾದಿ ಸಣ್ಣ ಪುಟ್ಟ ಶೀಕು ಅಷ್ಟೇ.

ಒಮ್ಮೆ ನಮ್ಮೂರಲ್ಲಿ ಯಕ್ಷಗಾನ ಆದಾಗ ಅರ್ಜುನನ ಪಾರ್ಟುಮಾಡುವವನು ಬರಲೇ ಇಲ್ಲ. ಮೂರು ನಾಲ್ಕು ತಾಸಲ್ಲಿ ಆಟ ಸುರು ಆಗ್ಬೆಕು. ವೇಷದ ಕೊರತೆಯಿಂದ ಆಟ ನಿಲ್ಲಿಸುವಂತಿಲ್ಲ. ನನ್ನ ಪರಿಚಯ ಇದ್ದ ಕೆಲವರು ಬಂದು ಈ ಪಾತ್ರಕ್ಕೆ ನೀನೆ ಆಗಬಹುದು ಅಂದ್ರು. ಅಳುಕು ಇತ್ತು; ಆದ್ರು ಮಾಡ್ದೆ. ಒಳ್ಳೆ ಪ್ರವೇಶ ಆಯ್ತು. ಒಳ್ಳೆ ಅಭಿಪ್ರಾಯವು ಬಂತು. ಅಲ್ಲಿಂದಲೇ ನನ್ನ ಯಕ್ಷಗಾನ ರಂಗ ಪ್ರವೇಶ ಅನಿರೀಕ್ಷೀತವಾಗಿ ಪ್ರಾರಂಭವಾಗಿದ್ದು ಪೂರ್ಣವಾಗಿ ಮುಂದುವರಿಯಿತು.

□ **ನಿಜವಾಗಿ ನಿಮ್ಮನ್ನು ಕಲಾವಿದರನ್ನಾಗಿ ರೂಪಿಸಿದ್ದು ಗುಂಡಬಾಳ ಇರಬೇಕಲ್ಲ? ಅಲ್ಲಿಯ ಅನುಭವ ಹೇಗಿತ್ತು?**

ಹೌದು ನಿಜವಾಗಿ ನನ್ನ ಯಕ್ಷಗಾನ ಬದುಕು ಪ್ರಾರಂಭಾಗಿದ್ದು ಗುಂಡಬಾಳದಿಂದ. ಅಲ್ಲಿ ಹಲವು ವರ್ಷದಿಂದ ಹರಕೆ ಆಟ ನಡಿತಾಇತ್ತು. ಬಹುತೇಕ ನಮ್ಮಲ್ಲಿಯ ನಟರು ಮೊದಲು ಬಣ್ಣ ಹಚ್ಚಿದ್ದು ಅಲ್ಲಿಯೇ. ಯಕ್ಷಗಾನ ಕಲಿಸುವ ಬೇರೆ ಕೇಂದ್ರ ಇರಲಿಲ್ಲ. ಹಾಗಾಗಿ ನೋಡಿ ನೋಡಿ ಕಲಿಯುವುದೇ ಆಗಿತ್ತು. ನಾನು ಹಾಗೆ ನೋಡಿ ಕಲಿತಿದ್ದೇ ಶಾಸ್ತ್ರೀತ ಕಲಿಕೆ ಅಲ್ಲ. ಆಗ ಸತ್ಯನಾರಾಯಣ ರಾಮ ಹೆಗಡೆ ಎನ್ನುವವರು ಬಂದು ಬಂದು ನನ್ನನ್ನು ಕರೆದುಕೊಂಡು ಹೋದ್ರು. ಮೊದಲು ಸ್ತ್ರೀ ವೇಶ ಮಾಡಲು ಹೇಳಿದರು ಆಗ ಸ್ತ್ರೀ ವೇಶ ಮಾಡುವವರೇ ಇರಲಿಲ್ಲ. ತೀರ ಕೊರತೆ ಇತ್ತು. ನಾನು ಆರ್ಥಿಕವಾಗಿ ಬಡವ ಆದ್ರು ನೋಡೊದಕ್ಕೆ ಹಾಗೆ ಕಾಣ್ತಾಇರಲಿಲ್ಲ. ಸುಂದರವಾಗಿಯೂ ಇದ್ದೇ. ನನ್ನನ್ನು ಯಾರ ಮನೆಯಲ್ಲಿ ಇಟ್ಟುಕೊಂಡು ಬೆಳಸಿದ್ರೋ ಅವರು ನನ್ನ ಊಟ ತಿಂಡಿಗೆ ಕೊರತೆ ಮಾಡಿರ್ಲಿಲ್ಲ. ಹಾಗಾಗಿ ಮೈ ಕೈ ತುಂಬಿಕೊಂಡಿದ್ದೆ.

ಅಲ್ಲಿ ಪ್ರತಾಪದ ದೌಪತಿ, ಕಿಚಕ ವದೆಯ ಸೈರಂಧ್ರಿ, ವಿಶ್ವಾಮಿತ್ರ ಮೇನಕೆಯ ಮೇನಕೆ, ಚಂದ್ರಹಾಸ ಚರಿತೆಯ ವಿಷಯೇ ಮೀನಾಕ್ಷಿ, ತಾರೆ........ ಹೀಗೆ ಹಲವು ವೇಶ ಮಾಡೊ ಅವಕಾಶ ಸಿಕ್ತು.

□ ಸ್ತ್ರೀ ವೇಷದಲ್ಲಿ ಪ್ರಸಿದ್ಧಿ ಪಡೆದರು ಯಾಕೆ ಪುರುಷ ವೇಶದ ಕಡೆ ಹೊರಳಿದ್ರಿ?

ಮೊದಲ ಪ್ರಸಂಗದಲ್ಲಿ ಸ್ತ್ರೀ ವೇಷ ಮಾಡಿದ ಮೇಲೆ ಮಧ್ಯರಾತ್ರಿ ನಂತರ ಸ್ವಲ್ಪ ಟೈಂ ಉಳಿತಿತ್ತು. ಆಗ ಯಾರಾದರೂ ಕಲಾವಿದರು ಬರದಿದ್ರೆ ಪುರುಷ ವೇಶ ಮಾಡ್ತಿದ್ದೆ. ಒಬ್ಬ ಗದಾಯುದ್ಧ ಪ್ರಸಂಗ ಇತ್ತು. ಅದು ಯಾವಾಗಲೂ ಮೂರು ಘಂಟೆ ನಂತ್ರ ಆಡುವುದು. ಈಗ ಅಂತದ್ದೆಲ್ಲ ಇಲ್ಲ. ಎಷ್ಟೊತ್ತಿಗಾದರೂ ಆಡ್ತಾರೆ.(------) ಆಗ ಭೀಮನನ್ನು ಮಾಡಬೇಕಾದವನು ಬಂದಿರಲಿಲ್ಲ ಯಜಮಾನರು ಬೀಮನ ಪಾತ್ರ ಮಾಡು ಕೌರವನ ಪಾತ್ರ ಚಿಟ್ಟಾಣಿಯವರದು. ಅಂದು ಭೀಮನ ಪಾತ್ರ ಮಾಡಿದೆ. ಅಲ್ಲಿಂದ ಸಾವಕಾಶ ಪುರುಷ ವೇಷವನ್ನೇ ಮಾಡಿದೆ. ಮೊದಮೊದಲು ಸ್ತ್ರೀ ವೇಶಕ್ಕೆ ಜನರೇ ಸಿಗುತ್ತಿರಲಿಲ್ಲ. ದೊಡ್ಡ ಕೊರತೆ ಇತ್ತು.

□ ಅಲ್ಲಿಂದಲೇ ನಿಮ್ಮ ಜೋಡಿ ಪ್ರಾರಂಭ ಆಗಿದ್ದೇ?

ಹೌದು, ನನ್ನದು ಮತ್ತು ಚಿಟ್ಟಾಣಿಯವರ ಜೋಡಿ ಪ್ರಾರಂಭವಾಗಿದ್ದು ಅಲ್ಲಿ. ಭಸ್ಮಾಸುರ ಮೋಹಿನಿ, ಕೀಚಕವಧೆ, ಗದಾಯುದ್ಧ, ಚಿತ್ರಾಕ್ಷಿಕಲ್ಯಾಣ........ ಹಾಗೆ ಹಲವು ಮೇಳಗಳಲ್ಲಿ ಕೆಲಸ ಮಾಡುವಾಗಲೂ ಒಂದು ಜನಪ್ರೀಯ ಜೋಡಿಯಾಗಿ ಜನ ಮೆಚ್ಚಿಕೊಂಡರು. ಇವರೊಂದಿಗೆ ಸತ್ಯನಾರಾಯಣ ಹೆಗಡೆ. ಕೊಂಡಾಕುಳಿ ಶಿವರಾಮ ಆಚಾರಿ, ಶ್ರೀಧರ ಶೇಟ್ಟಿ, ಗುಂಡಿಬೈಲು ಗಣೇಶ ಬಟ್ಟರು. ಹಳದೀಪುರ ಗಜಾನನ ಭಂಡಾರಿ ಮುಂತಾದವರು ಜೊತೆಗೆ ಇದ್ದರು. ಹಿಮ್ಮೇಳದಲ್ಲಿ ಪ್ರಭಾಕರ ಭಂಡಾರಿ, ಸತ್ಯನಾರಾಯಣ ಭಂಡಾರಿ...... ಮುಂತಾದವರು ಇದ್ದರು.

□ ಚೌಕಿಮನೆಗೆ ಎಲ್ಲರಕ್ಕಿಂತ ಮೊದಲೇ ಬಂದು ವೇಷಕ್ಕೆ ಕೂರುತ್ತಿದ್ದ ಬಗ್ಗೆ ಹೆಳಿದ್ದರು.

ನಮಗೆ ಯಾವಾಗಲೂ ಹಾಗೆ, ಬಣ್ಣ ಮಾಡಿಕೊಳ್ಳಲು ಹೆಚ್ಚೊತ್ತು ಬೇಕು. ಹಿಂದೆಲ್ಲ ಕಲ್ಲನ್ನು ತಳೆದು ಬಣ್ಣ ಮಾಡ್ತಿದ್ರಂತೆ. ನಾನು ಬರುವಾಗ ಸಫೇತು, ಹಳದಿ, ಕೆಂಪು ಇತ್ಯಾದಿ ಬಂದಿತ್ತು. ಹಿಂದೆ ಪೌಡರ್ ಹೊಡೆದುಕೊಳ್ಳೋ ಪದ್ಧತಿ ಇರಲಿಲ್ಲ. ಈಗ ಅವೆಲ್ಲ ಇರೋದ್ರಿಂದ ಮುಖವರ್ಣಿಕೆ ಮಾಡಿಕೊಳ್ಳೋದು ಹೆಚ್ಚು ಖುಷಿ ಕೊಡ್ತದೆ. ನನಗೆ ಹೆಚ್ಚು ಸೂಕ್ಷ್ಮವಾಗಿ ಬಣ್ಣ ಮಾಡಿಕೊಳ್ಳೊ ರೂಡಿ ಮೊದ್ಲಿಂದ. ನಾನು ಯಾವುದಕ್ಕೆ ಗಡಿಬಿಡಿ ಮಾಡಿಕೊಂಡ್ರೂ ಇದಕ್ಕೆ ಮಾಡ್ತಿರಲಿಲ್ಲ. ನನ್ನ ಬಣ್ಣಗಾರಿಕೆ ಮೆಚ್ಚಿಕೊಂಡವರಲ್ಲಿ ಕೆರೆಮನೆ ಶಿವರಾಮ ಹೆಗಡೆಯವರು ಒಬ್ಬರು. ಗುಂಡುಬಾಗದಲ್ಲಿ ಹರಕೆ ಆಟವು – ಶಿವರಾಮ ಹೆಗಡೆಯವರು ಬರ್ತಿದ್ದರು. ಗದಾಯುದ್ಧದ ಭೀಮ, ಕೌರವ, ಚಿತ್ರಸೇನ, ಕೀಚಕ ಮುಂತಾದ ವೈವಿಧ್ಯಮಯ ಪಾತ್ರ ಮಾಡ್ತಿದ್ದರು. ದಕ್ಷಿಣೋತ್ತ____ ದೊಡ್ಡ ಕಲಾ ವಇದರು ಆಮೇಲೆ ನನ್ನ ನೋಡಿ ಖುಷಿ ಆಯ್ತು. ನನಗೆ ಯಾವಾಗಲೂ ಮೇಕಪ್ ಮೇಲೆ ಬಹಳ ಹಿಡಿತ. ಮೀಸೆ ಹಚ್ಚುವುದು ಇತ್ಯಾದಿ ________ ಆದರೆ ಅವರು ಬಹಳ ದೊಡ್ಡ ಕಲಾವಿದರು. ಆದರೂ ನಾನು ಮೀಸೆ ಹಚ್ಚಿಕೊಡಬೇಕಾಗಿತ್ತು. ಹುಟ್ಟು ಮೀಸೆ ಇರದತಿತ್ತು. ಅದರ ಮೇಲೆ ಹಚ್ಚಬೇಕಾಗಿತ್ತು. ಕೊನೆ ಕೊನೆಗೆ ಅವರೇ ಹಚ್ಚಿಕೊಂಡು ನನ್ನ ಹತ್ತಿರ ಸ್ವಲ್ಪ ಮುಟ್ಟಿ ಬಿಟ್ಬಿಡು ಅಂತಿದ್ರು. ನಾನಂದ್ರೆ ಬಹಳ ಖುಷಿ. ಅಲ್ಲಿಂದ ನನಗೆ ಅವರ ಮೇಲೆ ಆಕರ್ಶಣೆ ಹೆಚ್ಚಿತು. ಇಷ್ಟು ದೊಡ್ಡ ಕಲಾವಿದರು ನನ್ನನ್ನು ಪ್ರೀತಿ ಮಾಡ್ತಾರಲ್ಲ ಅಂತ. ಭಕ್ತಿ, ಗೌರವ ಎರಡು ಇತ್ತು. ಮಾಬ್ಲ ಹೆಗಡೆಯವರು ಬರ್ತಿದ್ದರು. ಅವರು ಹಾಗೆ ಅದ್ಬುತ ಕಲಾವಿದರು. ಒಂದು ವೇಳೆ ಆದರೆ ಅಪ್ಪಿಕೊಂಡೆ ಮಾತಾಡೋದು. ಅವರು ಜಮದಗ್ನಿ ಮಾಡಿಕೊಂಡು ಹೊರಟಾಗ ರೇಣುಕೆಯನ್ನು 3ಸಲ ಕರಿತಾರೆ. ಘಳುವಳಿಕೆ ಇಲ್ಲದವಳು _____ ಹೊಕ್ಕಿಬಿಡುತ್ತಾರೆ. ಮೂರನೇಸಲ ತಾರಕಘಲ್ಲಿ ಕರೆದಾಗಲೇ ಬರಬೇಕು. ನಾನು ಅದನ್ನೇ ಮಾಡ್ತಿದ್ದೆ. ಅವರಿಗೆ ಅದು ಖುಷಿ. ನನ್ನನ್ನು ಹಲವು ಕಲಾವಿದರು ಮೆಚ್ಚಿದ್ದು ನಾನು ಅವರಿಗೆ ಒದಗಿದ್ದು ಎನ್ನುತ್ತಾರೆ. ಗುಂಡಬಾಳದಿಂದ ವೇದಾಹದ ವೃತ್ತ ವಿರಳ.

ಕೊಂಡದಕುಳಿ ಮೇಳ. ಕೆರೆಮನೆ ಇರುವಾಗಲೇ ಇಡಗುಂಜಿ ಮೇಳ ಎಂದು ಒಂದು ತಯಾರು ಮಾಡಿದ್ರು. ಅದು ಬಂದಾಯಿತು. ಕೊಂಡದ ಕುಳಿ ರಾಮ ಹೆಗಡೇರು ನಮ್ಮ ಮನೆಗೆ ಬಂದು ಕರೆದುಕೊಂಡು ಹೋದರು. ಎರಡು ವರ್ಷ ಇದ್ದೆ. ಅಲ್ಲಿಯೂ ಚಿಟ್ಟಾಣಿಯವರೇ ಶ್ರೀ ಪ್ರಭಾವ ಇದರಲ್ಲಿ ಪುರುಷ ವೇಶ. ಪ್ರಧಾನ ಸ್ತ್ರೀ ವೇಷದ ಕೊರತೆಯಿತ್ತು. ಹಿಮ್ಮೇಳ ಕೃಷ್ಣ ಕಡತೋಕ, ಜನಾರ್ಧನ ಹೆಬ್ಬಾರ ಇದ್ದರು.

ಕೆರೆಮನೆಗೆ ಕರೆದರು. ಅಲ್ಲಿ ಎರಡು ವರ್ಷ ತಿರುಗಾಟ. ಅಲ್ಲಿ ನೆಟ್ಟೂರು ಭಾಗದವರು. ನಂತರ ನರಸಿಂಹ ದಾಸರು ಬಂದ್ರು. ನಂತರ ಕೊಳಗೀ ಬೀಸ್ ಮೇಳ. ಅಲಲಿ ನಾನು, ಚಿಟ್ಟಾಣಿ, ಕೊಂಡಕುಳಿಯವರು, ಗಜಾನನ ಭಂಡಾರಿ, ಹಳದೀಪುರ ಶ್ರೀ ವೇದಿಕೆ ಇದ್ದರು. ಸುಮಕ್ಷ, ಸೈರೇಂಧ್ರಿ, ಮೇನಕೆ ಇಪಾತ್ರ ಮಾಡ್ತಿದ್ದರು. ಅಚ್ಚುಕಟ್ಟಾಗಿ ನಾಲ್ಕು ಮಾತನಾಡುವುದಿತ್ತು. ಹೀಗಿರುವಾಗ ಸುರತ್ಕಲ್ ಮೇಳದವರು ಹೇಳಿದ್ರು. ವರದರಾಜ ಪೈ, ಅನಂತರ ಕರೆದುಕೊಂಡು ಬಂದು ಬಿಡುತ್ತಿದ್ದರು. ವೇಷ ನೋಡಿ ನನಗೆ ಬರಲು ಹೇಳಿದರು.

ಮೂರನೇ ವರ್ಷ ಶೇಣಿಯವರು ಬರುವುದು ಎಂದಾಯಿತು. ಅವರು ಬರ್ತಾರೆ ಅಂದಕೂಡ್ಲೆ ನಾನು ಹೆದರಲು ಶುರು ಮಾಡಿದೆ. ಅವರ ಕೀರ್ತಿ ಕೇಳಿದ್ದೆ. ಯಾರನ್ನೂ ಮಿಕ್ಕಲು ಕೊಡುವುದಿಲ್ಲ. ಸ್ವರವೂ, ವಿದ್ವತ್ತೂ ಹಾಗೆ. ಕೌರವನನ್ನು ಅವರು ಮಾಡಿದರೆ ಅದೇಬರೆ ಕೃಷ್ಣನನ್ನು ಮಾಡಿದರೆ ಅದೇಬರೆ. ಹೀಗೆ ಎತ್ತರದ ಮಾತು. ಭಾಷೆಯ ಸಂದರ್ಭದಲ್ಲಿ ಅದು ಯಕ್ಷಗಾನಕ್ಕೆ ಬೇಕು ಅನ್ನುವುದನ್ನು ತೋರಿಸಿದರು.



ಆಗ ಮಾತು ಕಡಿಮೆ ಇತ್ತು. ಅವರ ಜೊತೆ ಪಾತ್ರ ಮಾಡೋದೋ ಅಂತ ಬೀಥಿ ಆಗ್ತಿತ್ತು. ಬಣ್ಣ ಹಚ್ಚಲು ಕುಳ್ತಿದ್ದೆ. ಶನೀಶ್ವರ, ಅವರದು ವಿಕ್ರ, ನಾನು ಶನಿ. ಅಪ್ರತಿಮ ಒಮ್ಮೆ ಮಂಕಿಯಲ್ಲಿ ಆಡಾಗಿತ್ತು. ಗೋವಿಂದ ಶಾನಭಾಗರು ಅಂತ ಮಾಡ್ಸಿದ್ರು. ಹೆಗಡೆಯವರ ವಿಕ್ರಮ, ನಾನು ಶನಿ. ಅವರು ವರದರಾಜ ಪೈ ಅವರಿಗೆ ಕೊಂಡಕುಳಿಯಲ್ಲಿ ಹೇಳಿದರು. ಅವರೇ ಫಿಕ್ಸ್, ಹೆದರಿಕೆ ಶುರು, ಇಲ್ಲಿಗೆ ಕೈತೊಳ್ಕೋಳ್ಳೋದೇನೋ ಅಂದ್ಕೊಂಡೆ. ಅವರು ಚೌಕಿಗೆ ಬಂದ್ರು. ಬರೋದೇ ಒಂದು ಗಾಂಭೀರ್ಯ. ದೊಡ್ಡ ಆಳು, ಬಣ್ಣದ ರಟ್ಟಿನ ಬಂದು ಕುಳಿತರು. ನಾನು ವೇಷ ಮಾಡ್ತಿದ್ದವನು ಎದ್ದು ನಿಂತು ಕೈ ಮುಗಿದೆ. ಅವರಿಗೆ ಖುಷಿ ಆಯ್ತು. ರಂಗ ಸ್ಥಳದ ಮೇಲೆ ನಿಮ್ಮ ಭೇಟಿ ಹೇಗಿದು?

□ ರಂಗದ ಮೇಲೆ ನಿಮ್ಮ ಅವರ ಸಂಬಂಧ ಹೇಗಿತ್ತು?

ನನ್ನ ಶನಿ ಪ್ರವೇಶ ಆಯ್ತು.

ಪುಟ 14 ಕ್ಕೆ



ಕೃಷಿ ಆದಾಯಗಳ ಇಳಿಕೆಯೇ ಮೋದಿ ಸರಕಾರದ ಧೋರಣೆಗಳ ಸಾರ

2022ರ ವೇಳೆಗೆ ಕೃಷಿ ಆದಾಯಗಳನ್ನು ಇಮ್ಮಡಿಗೊಳಿಸಬೇಕಾದರೆ, ವಾರ್ಷಿಕವಾಗಿ 14.4 ಶೇ. ಏರಿಕೆಯಾಗಬೇಕು. ಇದು ವಾಸ್ತವತೆಯಿಂದ ಗಾವುದ ದೂರದಲ್ಲಿರುವ ಸಂಗತಿ. ಏಕೆಂದರೆ ಅಕ್ಟೋಬರ್–ಡಿಸೆಂಬರ್ ತ್ರೈಮಾಸಿಕದಲ್ಲಿ ಏರಿಕೆ ದರ ಕೇವಲ 2.7%, ಅಂದರೆ ಕಳೆದ 14ವರ್ಷಗಳಲ್ಲೇ ಅತೀ ಕಡಿಮೆ. ಹೀಗಿರುವಾಗ, ಪ್ರಧಾನ ಮಂತ್ರಿಗಳು ತಮ್ಮ ಪರಮ ಕೊಡುಗೆಯೆಂಬಂತೆ ಕೊಡಮಾಡುತ್ತಿರುವ ವಾರ್ಷಿಕ 6000 ರೂ. ಅಂದರೆ ದಿನಕ್ಕೆ 17 ರೂ.ಗಳ ರೊಟ್ಟಿ ತುಣುಕು ರೈತರನ್ನು ತಣಿಸಲಾರದು. ಏಕೆಂದರೆ ಅವರು ಅದಕ್ಕಿಂತ ಎಷ್ಟೋ ಹೆಚ್ಚು ಪಟ್ಟು ಹಣವನ್ನು ಈ ಸರಕಾರದ ಕಡಿಮೆ ಬೆಲೆ ನಿಗದಿ ಮತ್ತು ಖರೀದಿ ವ್ಯವಸ್ಥೆಯ ಅಭಾವ ಧೋರಣೆಗಳಿಂದಾಗಿಯೇ



ಪ್ರಕಾಶ ಕಾರಟ್

ಕೃಷಿ ಆದಾಯವನ್ನು 2022ರ ವೇಳೆಗೆ ದ್ವಿಗುಣಗೊಳಿಸುತ್ತೇವೆನ್ನುವ ಮೋದಿ ಸರಕಾರದ ಆಶ್ವಾಸನೆ ರೈತರ ಮೇಲೊಂದು ಕ್ರೂರ ಹಾಸ್ಯದಂತೆ ಕಾಣುತ್ತದೆ. ಏಕೆಂದರೆ ರೈತರ ಅನುಭವ ತದ್ವಿರುದ್ಧವಾಗಿದೆ, ಅವರು ಕೃಷಿ ಆದಾಯಗಳು ಇಳಿಯುತ್ತಲೇ ಸಾಗಿರುವುದರಿಂದಾಗಿ ಸಂಕಟಕ್ಕೊಳಗಾಗಿದ್ದಾರೆ. ಕಳೆದ ಐದು ವರ್ಷಗಳಲ್ಲಿ ತಮ್ಮ ಆದಾಯಗಳು ಕೆಳಕ್ಕಿಳಿದಿವೆ ಎಂಬ ರೈತಾಪಿ ಜನಗಳ ಆರೋಪಗಳಿಗೆ ಈಗ ಕೇಂದ್ರೀಯ ಸಾಂಖ್ಯಿಕ ಕಚೇರಿ(ಸಿ.ಎಸ್.ಒ.)ಯಿಂದಲೂ ಸಾಕ್ಷ್ಯ ದೊರೆತಿದೆ. 2018ರ ಕೊನೆಯ ತ್ರೈಮಾಸಿಕದಲ್ಲಿ ಕೃಷಿ ಆದಾಯದ ಬೆಳವಣಿಗೆ ದರ ಕಳೆದ 14 ವರ್ಷಗಳಲ್ಲೇ ಅತಿ ಕಡಿಮೆ ಎಂದು ಸಿ.ಎಸ್.ಒ. ಅಂಕಿ–ಅಂಶಗಳು ಹೇಳುತ್ತವೆ. ಸಾಮಾನ್ಯ ಒಟ್ಟು ಕೃಷಿ ಮೌಲ್ಯವರ್ಧನೆ (ಅಂದರೆ ಒಟ್ಟು ಉತ್ಪಾದನೆಯ ಮೌಲ್ಯದಿಂದ ಅದಕ್ಕೆ ಬಳಸಿದ ಲಾಗುವಾಡುಗಳು ಮತ್ತು ಕಚ್ಚಾ ಸಾಮಗ್ರಿಗಳ ಒಟ್ಟು ಮೌಲ್ಯವನ್ನು ಕಳೆದಾಗ ಸಿಗುವ ಮೊತ್ತ) ಕೂಡ ಒಂದಂಕಿಯಲ್ಲೇ ಇದೆ. ಇದರಲ್ಲಿ ರೈತರು ಮತ್ತು ಕೃಷಿಕೂಲಿಕಾರರ ಆದಾಯಗಳೂ ಒಟ್ಟಾಗಿ ಸೇರಿವೆ. ಅಂದರೆ ಮಿಗುತೆ ಕೃಷಿ ಉತ್ಪಾದನೆಯಿದೆ ಎಂದು ಸರಕಾರ ಹೇಳಿಕೊಳ್ಳುತ್ತಿರುವಾಗಲೇ, ರೈತರ ನಿವ್ವಳ ಆದಾಯ ಅತ್ಯಂತ ಕೆಳಮಟ್ಟಕ್ಕೆ ಇಳಿದಿದೆ.

ಕೃಷಿ ಉತ್ಪಾದನೆ ಕೂಡ ಕಳೆದ ಅಕ್ಟೋಬರ್‌ನಿಂದ ಡಿಸೆಂಬರ್ ವರೆಗಿನ ತ್ರೈಮಾಸಿಕದಲ್ಲಿ ಕೇವಲ 2.7ಶೇ. ದರದಲ್ಲಿ ಹೆಚ್ಚಿದೆ. ಇದು ಕಳೆದ 11 ತ್ರೈಮಾಸಿಕಗಳಲ್ಲೇ ಅತಿ ಕಡಿಮೆ ದರ. ಕೃಷಿ ಆದಾಯಗಳಂತೂ ಇಂತಹ ಕಡಿಮೆ ದರಕ್ಕೆ ಅನುಗುಣವಾಗಿಯೂ ಬೆಳೆದಿಲ್ಲ. ಇನ್ನೂ ಗಮನಾರ್ಹ ಸಂಗತಿಯೆಂದರೆ, ಹಣದುಬ್ಬರವನ್ನು ಲೆಕ್ಕಕ್ಕೆ ತಗೊಳ್ಳದೆ ಪ್ರಸಕ್ತ ಬೆಲೆಗಳಲ್ಲಿ ಪರಿಗಣಿಸಿದರೂ ಸಿ.ಎಸ್.ಒ.ದ 2011–12 ಆಧಾರ ವರ್ಷದ ಸರಣಿಯಲ್ಲಿ ಕೇವಲ 2.04ಶೇ. ದರದಲ್ಲಿ ಏರಿದೆ. ಇಷ್ಟೊಂದು ಕಡಿಮೆ ದರ ಯಾವ ತ್ರೈಮಾಸಿಕ ಅವಧಿಯಲ್ಲೂ ಕಾಣ ಬಂದಿಲ್ಲ. ಈ ಕೊನೆಯ ತ್ರೈಮಾಸಿಕದಲ್ಲಿಯೂ ಹಿಂದಿನ ತ್ರೈಮಾಸಿಕದಲ್ಲಿ ಇದ್ದಂತೆ, ಕೃಷಿರಂಗದಲ್ಲಿ ಮೌಲ್ಯ ವರ್ಧನೆ ಹಣದುಬ್ಬರವನ್ನು ಪರಿಗಣಿಸದ ಪ್ರಸಕ್ತ ಬೆಲೆಗಳಲ್ಲಿ, ಹಣದುಬ್ಬರಕ್ಕೆ ಹೊಂದಿಸಿದ ಬೆಲೆಗಳಿಗಿಂತ ಕಡಿಮೆಯಾಗಿದೆ. ಇದಕ್ಕೆ ಕಾರಣ ರೈತರಿಗೆ ಸಿಕ್ಕ ಬೆಲೆಗಳಲ್ಲಿ ಆಗಿರುವ ಇಳಿಕೆ. ಅಂದರೆ ಅಕ್ಟೋಬರ್–ಡಿಸೆಂಬರ್ 2018ರಲ್ಲಿ ಕೃಷಿ ಉತ್ಪಾದನೆ ಅಕ್ಟೋಬರ್–ಡಿಸೆಂಬರ್ 2017ರ ಕೃಷಿ ಉತ್ಪಾದನೆಗಿಂತ 2.67ಶೇ. ಹೆಚ್ಚಿದರೂ, ಪ್ರಸಕ್ತ ಬೆಲೆಗಳಲ್ಲಿ ಈ ಏರಿಕೆ ಕೇವಲ 2.04ಶೇ. ಅಂದರೆ ಬೆಲೆಗಳು 0.61 ಶೇ.ದಷ್ಟು ಬಿದ್ದಿವೆ. ಅಂದರೆ ಕೃಷಿ ಉತ್ಪಾದನೆಯ ಮೌಲ್ಯವನ್ನು ಇಳಿಸಲಾಗುತ್ತಿದೆ.

ನೋಟುರದ್ಧತಿ, ಜಿ.ಎಸ್.ಟಿ. ಮತ್ತು ಇತರ ಮೌಲ್ಯ ಇಳಿಸುವ ಧೋರಣೆಯ ಕ್ರಮಗಳೊಂದಿಗೆ ಸರಕಾರ ಆರ್ಥಿಕ ರಂಗವನ್ನು ನುಚ್ಚುನೂರು ಮಾಡಿದೆ. ಇದರ ಫಲಿತಾಂಶವಾಗಿ ನಿರುದ್ಯೋಗದಲ್ಲಿ ಭಾರೀ ಹೆಚ್ಚಳವಾಗಿದ್ದರೆ, ಆದಾಯಗಳು ಕೆಳಕ್ಕೆ ಬಿದ್ದಿವೆ. ನೋಟುರದ್ಧತಿಯ ನಂತರ ಬೆಲೆಗಳು ಅವ್ಯಾಹತವಾಗಿ ಇಳಿಯುತ್ತ ಬಂದಿರುವುದರಿಂದಾಗಿ ನಕಾರಾತ್ಮಕ ಆದಾಯಗಳ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಗೋದಿಯ ಮೇಲಿನ ಆಮದು ಸುಂಕವನ್ನು 25ಶೇ.ದಿಂದ ಸೊನ್ನೆಗೆ ಇಳಿಸುವುದು ಮುಂತಾದ ತಪ್ಪು ಧೋರಣೆಗಳಿಂದಾಗಿ ಕನಿಷ್ಟ ಬೆಂಬಲ ಬೆಲೆಗಿಂತಲೂ ಕಡಿಮೆ ಬೆಲೆಯೊಂದಿಗೆ ಗೋದಿಯನ್ನು ರಾಶಿ ಹಾಕುವಂತಾಗಿದೆ. ಇದು ರೈತರಿಗೆ ಗಾಯದ ಮೇಲೆ ಎಳೆದ ಬರೆ.

ಕೃಷಿ ಉತ್ಪನ್ನಗಳ ಮೌಲ್ಯ ಇಳಿಕೆಗೆ ಕೆಲವು ಅಂಶಗಳು ಕಾರಣ. ಮೊದಲನೆಯದಾಗಿ, ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗ(ಸಿ.ಎ.ಸಿ.ಪಿ.) ಕನಿಷ್ಟ ಬೆಂಬಲ ಬೆಲೆ(ಎಂ.ಎಸ್.ಪಿ.)ಗಳನ್ನು ಮೂರು ವರ್ಷಗಳಷ್ಟು ಹಳೆಯ ಮಾಹಿತಿಯ ಆಧಾರದಲ್ಲಿ ಮುಂದಕ್ಕೆ ಬೆಳೆಸುವ ಮೂಲಕ ನಿಗದಿಪಡಿಸುತ್ತದೆ. ಇದರಿಂದಾಗಿ ಅದು ಪರಿಗಣಿಸುವ ಉತ್ಪಾದನಾ ವೆಚ್ಚ ನಿಜವಾದ ವೆಚ್ಚಕ್ಕಿಂತ 20ರಿಂದ 30 ಶೇ.ದಷ್ಟು ಕಡಿಮೆಯಿರುತ್ತದೆ ಎಂದು ಅಧ್ಯಯನಗಳಿಂದ ಕಂಡು ಬಂದಿದೆ. ಕಿಸಾನ್ ಸಭಾ ಮುಂತಾದ ಸಂಘಟನೆಗಳು ವೆಚ್ಚಗಳನ್ನು ಸರಿಯಾಗಿ ಲೆಕ್ಕ ಹಾಕಬೇಕು, ಸಮಗ್ರ ಉತ್ಪಾದನಾ ವೆಚ್ಚ ಸಿ2 ಎಂಬುದನ್ನು ತಗೊಂಡು ಸಿ2+50% ಸೂತ್ರದಂತೆ ಎಂ.ಎಸ್.ಪಿ.ಯನ್ನು ನಿಗದಿ ಪಡಿಸಬೇಕು ಎಂದು ಆಗ್ರಹಿಸುತ್ತ ಬಂದಿದ್ದರೂ ಅದನ್ನು ಗಮನಕ್ಕೆ ತಗೊಳ್ಳುತ್ತಿಲ್ಲ. ಸಿ.ಎ.ಸಿ.ಪಿ. ರಾಜ್ಯ ಕೃಷಿ ಇಲಾಖೆಗಳು ಕೊಡುವ ಸಿ2 ಮತ್ತು ಎ2+ಎಫ್.ಎಲ್. ವೆಚ್ಚಗಳನ್ನು ಇಳಿಸಿ ತನ್ನ ಲೆಕ್ಕಾಚಾರಗಳನ್ನು ಮಾಡುತ್ತದೆ. ಇದು ನಿಜವಾದ ವೆಚ್ಚಗಳಿಗಿಂತ 20–30ಶೇ.ದಷ್ಟು ಕಡಿಮೆಯಿರುತ್ತದೆ. ನಂತರ ಒಂದು ಸರಾಸರಿಯನ್ನು ತಗೊಳ್ಳುವಾಗ ಉತ್ಪಾದನಾ ವೆಚ್ಚಗಳು ಹೆಚ್ಚಿರುವ ರಾಜ್ಯಗಳ ರೈತಾಪಿಗಳಿಗೆ ಮತ್ತಷ್ಟು ನಷ್ಟವಾಗುತ್ತದೆ.

ಎರಡನೆಯದಾಗಿ, ಎಂ.ಎಸ್.ಪಿ.ಯನ್ನು ಹೆಚ್ಚಿಸಿದರೆ ಆಹಾರ ಬೆಲೆ ಹಣದುಬ್ಬರ ಹೆಚ್ಚುತ್ತದೆ ಎಂಬ ಕಾರಣ ಕೊಟ್ಟು ಅದನ್ನು ಕೆಳಮಟ್ಟದಲ್ಲಿ ಇಡಲಾಗುತ್ತದೆ. ಆದರೆ ಕೃಷಿ ಲಾಗುವಾಡುಗಳ ಬೆಲೆಯೇರಿಕೆಗಳ ಬಗ್ಗೆ ಯಾವುದೇ ಆತಂಕವಾಗಲೀ, ಉತ್ಪಾದನಾ ವೆಚ್ಚಗಳನ್ನು ತಗ್ಗಿಸಬಹುದಾದ ಬೆಲೆ ಹತೋಟಿಗಳ ಬಗ್ಗೆ, ತತ್ಪರಿಣಾಮವಾಗಿ ಉತ್ಪನ್ನಗಳ ಬೆಲೆಗಳನ್ನು ತಗ್ಗಿಸುವ ಬಗ್ಗೆ ಯಾವುದೇ ಮಾತು ಕೇಳಬರುವುದಿಲ್ಲ.

ಮೂರನೆಯದಾಗಿ, ಹೆಚ್ಚಿನ ಬೆಳೆಗಳಿಗೆ ಖರೀದಿ ವ್ಯವಸ್ಥೆ ಇಲ್ಲವಾದ್ದರಿಂದ ಸರಕಾರ ಪ್ರಕಟಿಸುವ ಯಾವುದೇ ಕನಿಷ್ಟ ಬೆಂಬಲ ಬೆಲೆ ಹೆಸರಿಗೆ ಮಾತ್ರ. ಭಾರತದ ಹೆಚ್ಚಿನ ಭಾಗಗಳಲ್ಲಿ ಅದು ರೈತರಿಗೆ ದಕ್ಕುವುದೇ ಇಲ್ಲ. ರೈತಾಪಿ ಜನಗಳು ಹತಾಶೆಯಿಂದ ಈ ಕಡಿಮೆ ಉತ್ಪಾದನಾ ವೆಚ್ಚವನ್ನು ತಗೊಂಡು ಲೆಕ್ಕ ಹಾಕಿದ ಕನಿಷ್ಟ ಬೆಂಬಲ ಬೆಲೆ ಕೂಡ ಸಿಗದೆ, ಅದಕ್ಕಿಂತ ಎಷ್ಟೋ ಕಡಿಮೆ ಬೆಲೆಗಳಲ್ಲಿ ಮಾರಲೇಬೇಕಾದ ಬಲವಂತಕ್ಕೆ ಒಳಗಾಗುತ್ತಾರೆ.

ಕೃಷಿ ಆದಾಯಗಳನ್ನು ಇಮ್ಮಡಿಗೊಳಿಸಬೇಕಾದರೆ, ವಾರ್ಷಿಕವಾಗಿ 14.4ಶೇ. ಏರಿಕೆಯಾಗಬೇಕು. ಇದು ವಾಸ್ತವತೆಯಿಂದ ಗಾವುದ ದೂರದಲ್ಲಿರುವ ಸಂಗತಿ. ಹೀಗಿರುವಾಗ, ಎರಡು ಎಕ್ರೆಗಳ ವರೆಗೆ ಭೂಮಿಯಿರುವ ರೈತರಿಗೆ ಪ್ರಧಾನ ಮಂತ್ರಿಗಳು ಕೊಡಮಾಡುತ್ತಿರುವ ವಾರ್ಷಿಕ 6000 ರೂ. ಅಂದರೆ ದಿನಕ್ಕೆ 17 ರೂ.ಗಳ ರೊಟ್ಟಿ ತುಣುಕು ರೈತರನ್ನು ತಣಿಸಲಾರದು. ಏಕೆಂದರೆ ಅವರು ಅದಕ್ಕಿಂತ ಎಷ್ಟೋ ಹೆಚ್ಚು ಪಟ್ಟು ಹಣವನ್ನು ಕಡಿಮೆ ಬೆಲೆ ನಿಗದಿಯಿಂದಾಗಿ ಮತ್ತು ಖರೀದಿ ವ್ಯವಸ್ಥೆಯ ಅಭಾವದಿಂದಾಗಿ ಕಳಕೊಳ್ಳುತ್ತಿದ್ದಾರೆ. ಈ ಪ್ರಶ್ನೆಯನ್ನು ಎದುರಿಸುವುದು ಕೃಷಿ ಆದಾಯಗಳಲ್ಲಿ ಸ್ಥಿರತೆ ತರಲು ಮತ್ತು ರೈತರಲ್ಲಿ ವಿಶ್ವಾಸ ಮೂಡಿಸಲು ಬಹಳ ಮುಖ್ಯವಾಗುತ್ತದೆ.



ವ್ಯಂಗ್ಯಚಿತ್ರ: ಎಸ್. ವದ್ಲಮುಡಿ

‘ಪಾದಪೂಜೆ’. ‘ಅಭಿನಂದನ್’, ‘ಡಿಸ್ಲೆಕ್ಸಿಯ’ ಮತ್ತು ಈಗ “ರಕ್ಷಣಾ ಕಡತಗಳ ಕಳವು’

16ನೇ ಲೋಕಸಭೆಯ ಕೊನೆಯ ಅಧಿವೇಶನ ಮುಗಿಯುತ್ತಿದ್ದಂತೆ ಆರಂಭವಾಗಿರುವ ಮುಂದಿನ ಸಾರ್ವತ್ರಿಕ ಚುನಾವಣೆಗಳ ಪೂರ್ವ ತಯಾರಿಯ ಭರದಲ್ಲಿ ಪ್ರಧಾನ ಮಂತ್ರಿಗಳ ಫೋಟೋಗಳಿರುವ ಜಾಹೀರಾತುಗಳು ಪತ್ರಿಕೆಗಳ ಪುಟಗಳನ್ನು, ಟಿವಿ ತೆರದೆಗಳನ್ನು ತುಂಬಿಸುತ್ತಿರುವಂತೆ, ಪ್ರದಾನಿಗಳ ನಡೆ–ನುಡಿಗಳು ದೇಶದ ವ್ಯಂಗ್ಯಚಿತ್ರಕಾರರಿಗೂ ಅಚ್ಛೇ ದಿನಗಳ ಯುಗದ ಕೊನೆಯಲ್ಲಿ ಬಹಳಷ್ಟು ಅಚ್ಛೇ ದಿನ್‌ಗಳ ಮಹಾಪೂರವನ್ನೇ ತರುತ್ತಿರುವಂತೆ ಕಾಣುತ್ತಿದೆ. ಕಳೆದ ಹತ್ತು ದಿನಗಳಲ್ಲಿ ಇಡೀ ದೇಶದ ಗಮನ ಸೆಳೆದಿರುವ ಕುಂಭ ಮೇಳದಲ್ಲಿ ಪ್ರಧಾನಮಂತ್ರಿಗಳು ನೆರವೇರಿಸಿದ 5 ಸಫಾಯಿ ಕರ್ಮಚಾರಿಗಳ ‘ಪಾದಪೂಜೆ’, ವಾಯು ಪ್ರಹಾರದ ಸಾಧನೆ, ನಂತರ ‘ಡಿಸ್ಲೆಕ್ಸಿಯ’ ಟಿಪ್ಪಣಿ ಮತ್ತೀಗ ರಫೆಲ್ ಕಡತಗಳ ‘ಕಳವು’ – ಈ ಕುರಿತ ವ್ಯಂಗ್ಯಚಿತ್ರಕಾರರ ಪ್ರತಿಕ್ರಿಯೆಗಳ ಒಂದು ಸ್ಯಾಂಪಲ್:

ಸೆಲ್ಫ್ ಅಭಿನಂದನ್ – ಗೋಕುಲ್, ಡೆಕ್ಕನ್ ಕ್ರಾನಿಕಲ್



ಇದು ನಮ್ಮ ಪದ್ಧತಿ–ಅರವಿಂದ್ ತೆಗ್ಗಿನಮಠ



ಅಚ್ಛೇ ದಿನ್‌ಗಳನ್ನು ಕದ್ದಿದ್ದಾರೆ–ಸುರೇಂದ್ರನ್, ದಿ ಹಿಂದು





ದೇಶ ಸುರಕ್ಷಿತ ಕೈಗಳಲ್ಲಿ ಮತ್ತು ಫೈಲುಗಳು...? –ಕೀರ್ತಿಶ್, ಬಿಬಿಸಿ ನ್ಯೂಸ್



ವಾಯು ಪ್ರಹಾರದಲ್ಲಿ ಸತ್ತವರು 250. ರೈತರ ಆತ್ಮಹತ್ಯೆಗಳು, ನಿರುದ್ಯೋಗದ ಸಂಖ್ಯೆ ಕೇಳಬೇಡ– ಆರ್.ಪ್ರಸಾದ್

ಭಯೋತ್ಪಾದನೆಯ ವಿರುದ್ಧ ಭಾರತದ ಐಕ್ಯ ಸಮರವನ್ನು ಬಿಜೆಪಿ, ಅದರ ಸರಕಾರದ ಮುಖಂಡರು ಚುನಾವಣಾ ಲಾಭಕ್ಕಾಗಿ ಛಿದ್ರಗೊಳಿಸುತ್ತಿದ್ದಾರೆ

– ಸಿಪಿಐ(ಎಂ) ಕೇಂದ್ರ ಸಮಿತಿ ಖಂಡನೆ

ಪುಲ್ವಾಮಾ ಭಯೋತ್ಪಾದಕ ದಾಳಿಯ ನಂತರ ಪಾಕಿಸ್ತಾನದ ಪ್ರದೇಶದ ಒಳಗೆ ಭಾರತೀಯ ವಾಯುಪಡೆಯ ವಾಯುಪ್ರಹಾರ, ಮರುದಿನ ಪಾಕಿಸ್ತಾನದ ಪ್ರತ್ಯುತ್ತರ ಮತ್ತು ತದನಂತರ ವಿಂಗ್ ಕಮಾಂಡರ್ ಅಭಿನಂದನ್ ಬಿಡುಗಡೆ–ಇವೆಲ್ಲ ಭಾರತ ತನ್ನ ರಾಜತಾಂತ್ರಿಕ ಪ್ರಯತ್ನಗಳನ್ನು ತೀವ್ರಗೊಳಿಸುವಂತೆ ಮಾಡಬೇಕು ಮತ್ತು ಪಾಕಿಸ್ತಾನ ಭಯೋತ್ಪಾದಕ ಸಂಘಟನೆಗಳನ್ನು ಹಾಗೂ ಗಡಿಯಾಚೆ ಭಯೋತ್ಪಾದಕ ಚಟುವಟಿಕೆಗಳನ್ನು ಹತ್ತಿಕ್ಕುವಂತೆ ಅದರ ಮೇಲೆ ಅಂತರ್ರಾಷ್ಟ್ರೀಯ ಒತ್ತಡಗಳನ್ನು ಹೆಚ್ಚಿಸುವಂತೆ ಮಾಡಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಭಯೋತ್ಪಾದನೆಯ ವಿರುದ್ಧ ಭಾರತ ಐಕ್ಯತೆಯಿಂದ ಎದ್ದು ನಿಂತಿತು. ಇದನ್ನು ಬಲಪಡಿಸುವ ಬದಲು, ಪುಲ್ವಾಮಾದ ಬೆಳವಣಿಗೆಗಳು ಬಿಜೆಪಿ ಮತ್ತು ಸಂಘ ಪರಿವಾರ ಸಂಕುಚಿತ ದೇಶಪ್ರೇಮವನ್ನು ಬಡಿದೆಬ್ಬಿಸಲು ಮತ್ತು ರಾಷ್ಟ್ರೋನ್ಮಾದವನ್ನು ಹರಡಲು ಉದ್ದೇಶಪೂರ್ವಕ ಪ್ರಯತ್ನಗಳನ್ನು ನಡೆಸುತ್ತಿರುವುದನ್ನು ಕಾಣುತ್ತಿದ್ದೇವೆ. ದೇಶದ ವಿವಿಧ ಭಾಗಗಳಲ್ಲಿ ಕಾಶ್ಮೀರಿಗಳ ಮೇಲೆ ಗುರಿಯಿಡುತ್ತಿರುವುದು, ಸಂವಿಧಾನದ ಕಲಮು 370, 35ಎ ಗಳನ್ನು ರದ್ದು ಪಡಿಸಬೇಕೆಂಬ ಕರೆಗಳು ಇವೆಲ್ಲವೂ ಭಯೋತ್ಪಾದನೆಯ ವಿರುದ್ಧ ಭಾರತೀಯರ ಸಮರವನ್ನು ಕಾಶ್ಮೀರಿಗಳು ಮತ್ತು ಮುಸ್ಲಿಮರ ವಿರುದ್ಧ ಸಮರಗಳಾಗಿ ತಿರುಗಿಸುತ್ತಿವೆ, ಕೋಮುಧ್ರುವೀಕರಣವನ್ನು ಆಳಗೊಳಿಸುತ್ತಿವೆ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಭಯೋತ್ಪಾದನೆಯ ವಿರುದ್ಧ ಭಾರತದ ಐಕ್ಯ ಸಮರವನ್ನು ಬಿಜೆಪಿ ಮತ್ತು ಅದರ ಸರಕಾರದ ಮುಖಂಡರು ಛಿದ್ರಗೊಳಿಸುತ್ತಿದ್ದಾರೆ ಎಂದು ಖಂಡಿಸಿದೆ.

ಮಾರ್ಚ್ 3 ಮತ್ತು 4ರಂದು ನವದೆಹಲಿಯಲ್ಲಿ ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ ಪುಲ್ವಾಮಾ ದಾಳಿ, ಕಾಶ್ಮೀರದ ಪರಿಸ್ಥಿತಿ ಮತ್ತು ದೇಶದಲ್ಲಿನ ಇತರ ಬೆಳವಣಿಗೆಗಳನ್ನು ವಿಶ್ಲೇಷಿಸಿದ ನಂತರ ಹೊರಡಿಸಿದ ಹೇಳಿಕೆಯ ಇತರ ಅಂಶಗಳು ಹೀಗಿವೆ:

ಮೋದಿಯ ಜಮ್ಮು ಮತ್ತು ಕಾಶ್ಮೀರ ಧೋರಣೆ ವಿಫಲ:

ಈ ಮೋದಿ ಸರಕಾರದ ಆಳ್ವಿಕೆಯಲ್ಲಿ, ಭಯೋತ್ಪಾದನೆಯ ಘಟನೆಗಳ ಸಂಖ್ಯೆಯಲ್ಲಿ 176% ಹೆಚ್ಚಳವಾಗಿದೆ. ಇಂತಹ ದಾಳಿಗಳಲ್ಲಿ ಹತರಾದ ಭದ್ರತಾ ಸಿಬ್ಬಂದಿ ಮತ್ತು ನಾಗರಿಕರ ಸಂಖ್ಯೆಯೂ ಏರಿದೆ. ಭದ್ರತಾ ಸಿಬ್ಬಂದಿಯ ಸಾವುಗಳ ಸಂಖ್ಯೆಯಲ್ಲಿ 93% ಹೆಚ್ಚಳ ಕಂಡು ಬಂದಿದೆ. 2014ರಿಂದ 2018ರ ನಡುವೆ ಸರಾಸರಿ ಪ್ರತಿ ತಿಂಗಳು 11 ರ ಸಂಖ್ಯೆಯಲ್ಲಿ ಭಯೋತ್ಪಾದಕರು ನುಸುಳಿದ್ದಾರೆ.

ಹೆಚ್ಚು ಅಪಾಯಕಾರಿಯಾದ ಪ್ರವೃತ್ತಿ ಎಂದರೆ, ಸ್ಥಳೀಯ ಕಾಶ್ಮೀರಿ ಯುವಜನರು ಭಯೋತ್ಪಾದಕ ಗುಂಪುಗಳನ್ನು ಸೇರಿಕೊಳ್ಳುತ್ತಿರುವ ಪ್ರಮಾಣದಲ್ಲಿ ತೀವ್ರ ಏರಿಕೆಯಾಗಿದೆ, 2013ರಲ್ಲಿ 16 ಇದ್ದದ್ದು 2018ರಲ್ಲಿ 164ಕ್ಕೆ ಏರಿದೆ. ಕಾಶ್ಮೀರಿ ಯುವಜನರಲ್ಲಿ ಪರಕೀಯ ಭಾವ ಇಷ್ಟೊಂದು ಆಳಗೊಳ್ಳಲು ಮೋದಿ ಸರಕಾರವೇ ಕಾರಣ. ಅದು ಜಮ್ಮು ಮತ್ತು ಕಾಶ್ಮೀರದಲ್ಲಿ ಸಂಬಂಧಪಟ್ಟ ಎಲ್ಲರೊಂದಿಗೆ ಸಂವಾದದ ಒಂದು ರಾಜಕೀಯ ಪ್ರಕ್ರಿಯೆಯನ್ನು ಆರಂಭಿಸುವ, ಮತ್ತು ಕಾಶ್ಮೀರಿ ಜನಗಳಲ್ಲಿ ವಿಶ್ವಾಸ ಮೂಡಿಸುವ ಕ್ರಮಗಳನ್ನು ಜಾರಿಗೊಳಿಸುವ ತನ್ನ ಆಶ್ವಾಸನೆಗಳನ್ನು ಈಡೇರಿಸದೆ ವಚನಭಂಗ ಮಾಡಿದೆ. ಇದರಿಂದಾಗಿ ಭಯೋತ್ಪಾದಕರ ಪ್ರಹಾರಗಳು ಮುಂದುವರೆದವು ಎಂಬುದು ಸ್ಪಷ್ಟ, ಸಪ್ಟಂಬರ್ 2016ರಲ್ಲಿ ಉರಿಯಲ್ಲಿ ಸೇನಾ ಘಟಕಗಳ ಮೇಲೆ ಭಯೋತ್ಪಾದಕ ದಾಳಿಗಳ ನಂತರ ಭಾರತೀಯ ವಾಯುಪಡೆ ನಡೆಸಿದ ಮಿಂಚಿನ ನಿರ್ದಿಷ್ಟ ಪ್ರಹಾರಗಳ ನಂತರವೂ ಅವು ತೀವ್ರಗೊಂಡವು.

ಈ ವಿಷಯವನ್ನು ರಾಜಕೀಯಕರಣಗೊಳಿಸುತ್ತಿರುವವರು ಮತ್ತು ತಮ್ಮ ಪಕ್ಷದ ಚುನಾವಣಾ ಲಾಭಕ್ಕಾಗಿ ಭಯೋತ್ಪಾದನೆಯ ವಿರುದ್ಧ ಭಾರತೀಯರ ಐಕ್ಯ ಹೋರಾಟವನ್ನು ಛಿದ್ರಗೊಳಿಸುತ್ತಿರುವವರು ಪ್ರಧಾನ ಮಂತ್ರಿ ಮೋದಿ ಮತ್ತು ಬಿಜೆಪಿ ಮುಖಂಡರೇ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ವಿಶ್ಲೇಷಿಸಿದೆ.

ಆರ್ಥಿಕ ಬಿಕ್ಕಟ್ಟು ಆಳಗೊಳ್ಳುತ್ತಿದೆ:

ಜಿಡಿಪಿ ಲೆಕ್ಕಾಚಾರದ ವಿಧಾನವನ್ನು ಮೋದಿ ಸರಕಾರ ಬದಲಿಸಿದ ನಂತರವೂ 2018–19ರ 7 ಶೇಕಡಾ ಜಿಡಿಪಿ ಬೆಳವಣಿಗೆ ಕಳೆದ ಐದು ವರ್ಷಗಳಲ್ಲೇ ಅತೀಕಡಿಮೆ ಮಟ್ಟಕ್ಕಿಳಿದಿದೆ. 2018 ರ ಕೊನೆಯ ತ್ರೈಮಾಸಿಕದ ಬೆಳವಣಿಗೆ ದರ ಇನ್ನೂ ಕೆಳಗೆ, 6.6ಶೇಕಡಾಕ್ಕೆ ಇಳಿದಿದೆ. ಇದರ ಅರ್ಥ, ನಮ್ಮ ಆರ್ಥಿಕ ವ್ಯವಸ್ಥೆ ಇನ್ನಷ್ಟು ಕಳೆಗುಂದುತ್ತಿದೆ, ಇದರಿಂದಾಗಿ ನಿರುದ್ಯೋಗದ ಏರಿಕೆ ಇನ್ನಷ್ಟು ತೀವ್ರಗೊಳ್ಳಲಿದೆ ಮತ್ತು ನಮ್ಮ ಬಹುಪಾಲು ಜನಗಳ ಜೀವನ ಪರಿಸ್ಥಿತಿಗಳು ಮತ್ತಷ್ಟು ಹದಗೆಡಲಿವೆ.

ಕೃಷಿ ಸಂಕಟ ಮತ್ತಷ್ಟು ಆಳಗೊಳ್ಳುತ್ತಿದೆ. 2017–18 ಮತ್ತು 2018–19ರ ನಡುವೆ ಒಟ್ಟು ಮೌಲ್ಯ ಸೇರ್ಪಡೆಯಲ್ಲಿ 46 ಶೇಕಡಾದಷ್ಟು ಬೃಹತ್ ಪ್ರಮಾಣದ ಇಳಿಕೆ ಆಗಿದೆ ಎಂಬ ಸಂಗತಿಯತ್ತವೂ ಕೇಂದ್ರ ಸಮಿತಿ ಗಮನ ಸೆಳೆದಿದೆ.

ಚಮಚಾ ಬಂಡವಾಳಶಾಹಿ:

ವಿಮಾನ ನಿಲ್ದಾಣಗಳ ಖಾಸಗೀಕರಣ: ಚುನಾವಣೆಗಳ ಮುನ್ನಾದಿನಗಳಲ್ಲಿ ಮೋದಿ ಸರಕಾರ ಐದು ಪ್ರಮುಖ ಸಾರ್ವಜನಿಕ ವಿಮಾನ ನಿಲ್ದಾಣಗಳನ್ನು ಅಡಾಣಿ ಗುಂಪಿಗೆ ವಹಿಸಿ ಕೊಟ್ಟಿದೆ. ಟೆಂಡರುಗಳಿಗೆ ತಲಾ ಪ್ರಯಾಣಿಕ ಆದಾಯವಷ್ಟೇ ಏಕಮಾತ್ರ ಪರಿಗಣನೆಯ ಅಂಶವಾಗಿದೆ. ವಿಮಾನ ನಿಲ್ದಾಣಗಳ ನಿರ್ವಹಣೆಯ ಅನುಭವದ ವಿಷಯವನ್ನು ಬದಿಗೊತ್ತಲಾಗಿದೆ. ಈ ಮೂಲಕ ವಿಮಾನ ನಿಲ್ದಾಣಗಳ ನಿರ್ವಹಣೆಯ ಏನೇನೂ ಅನುಭವವಿಲ್ಲದ ಅಡಾಣಿ ಗುಂಪಿಗೆ ಅವನ್ನು ವಹಿಸಿ ಕೊಡಲಾಗಿದೆ. ಇದು ರಫೆಲ್ ಆಫ್‌ಸೆಟ್ ವ್ಯವಹಾರಗಳು ರಕ್ಷಣಾ ಉತ್ಪಾದನೆಯ ಕ್ಷೇತ್ರದಲ್ಲಿ ಏನೇನೂ ಅನುಭವವಿಲ್ಲದ ಅನಿಲ್ ಅಂಬಾನಿಗೆ ದೊರಕಿದ ಮಾದರಿಯಲ್ಲೇ ಇದೆ.

ಖಾಸಗಿಯವರಿಗೆ ಆಧಾರ್ ಮಾಹಿತಿ ನೆಲೆಯ ಬಳಕೆಗೆ ಅವಕಾಶ: ಕೇಂದ್ರ ಸಂಪುಟ ಫೆಬ್ರುವರಿ 28ರಂದು ಆಧಾರ್ ಮಾಹಿತಿ ನೆಲೆಯನ್ನು ಖಾಸಗಿ ಕಾರ್ಪೊರೇಟ್‌ಗಳು ತಮ್ಮ ಲಾಭ ಗಳಿಕೆಗಾಗಿ ಬಳಸಲು ಅವಕಾಶ ನೀಡುವ ಸುಗ್ರೀವಾಜ್ಞೆಯನ್ನು ಮಂಜೂರು ಮಾಡಿದೆ. ಮಾಹಿತಿ ರಕ್ಷಣೆಯ ಕಾಯ್ದೆಯನ್ನು ತರದೆಯೇ ಇದನ್ನು ಮಾಡಲಾಗಿದೆ. ಈ ಕಾಯ್ದೆಯನ್ನು ತರುವ ಆಶ್ವಾಸನೆಯನ್ನು ನೀಡಲಾಗಿತ್ತು. ಆದರೆ ಅದಿನ್ನೂ ಬೆಳಕು ಕಂಡಿಲ್ಲ. ಇದೊಂದು ಸಂವಿಧಾನಿಕ ಧಕ್ಕೆಯಾಗಿದೆ. ಏಕೆಂದರೆ ರಾಜ್ಯಸಭೆ ಈ ಶಾಸನವನ್ನು ಪಾಸು ಮಾಡಿಲ್ಲ, ಲೋಕಸಭೆ ಸಾರ್ವತ್ರಿಕ ಚುನಾವಣೆಗಳು ನಡೆದ ನಂತರವೇ ಸಭೆ ಸೇರಬೇಕಾಗಿದೆ.

ಈ ಸುಗ್ರೀವಾಜ್ಞೆಗೆ ಮಂಜೂರಾತಿ ನೀಡಬಾರದು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಭಾರತದ ರಾಷ್ಟ್ರಪತಿಗಳಿಗೆ ಕರೆ ನೀಡಿದೆ.

ಸಾಮಾಜಿಕ ನ್ಯಾಯದ ಮೇಲೆ ಪ್ರಹಾರ:

ಸಾರ್ವಜನಿಕ ನಿಧಿಯಿಂದ ನಡೆಯುವ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳ ಶಿಕ್ಷಕರ ನೇಮಕಾತಿಯಲ್ಲಿ ಮೀಸಲಾತಿಗಳಿಗೆ ಒಂದು ಹೊಸ ರೋಸ್ಟರ್ ಪದ್ಧತಿಯನ್ನು ಮೋದಿ ಸರಕಾರದ ಅಧಿಸೂಚನೆ ಆರಂಭಿಸಿದೆ. ಇದರಿಂದಾಗಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ವರ್ಗಗಳ ಮತ್ತಷ್ಟು ಅಬಲೀಕರಣವಾಗುತ್ತಿದೆ. ಇದು ಸಾಮಾಜಿಕ ನ್ಯಾಯ ಮತ್ತು ಸಮಾನ ಅವಕಾಶಗಳನ್ನು ಲಭ್ಯಗೊಳಿಸಬೇಕು ಎನ್ನುವ ಸಂವಿಧಾನಿಕ ನಿರ್ದೇಶನವನ್ನು ಶಿಥಿಲಗೊಳಿಸುತ್ತದೆ.

ಇದನ್ನು ಹಿಂತೆಗೆದುಕೊಳ್ಳಬೇಕು, ಇದಕ್ಕೆ ಮೊದಲಿನ ಪರಿಸ್ಥಿತಿ ಮುಂದುವರೆಯುವಂತೆ ಮಾಡಲು ಒಂದು ಕೇಂದ್ರೀಯ ಸುಗ್ರೀವಾಜ್ಞೆಯನ್ನು ಜಾರಿ ಮಾಡಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹಿಸಿದೆ. ಈ ರೋಸ್ಟರ್ ಪದ್ಧತಿ ತಂದು ಪರಿಶಿಷ್ಟ ಜಾತಿಗಳು, ಬುಡಕಟ್ಟುಗಳು ಮತ್ತು ಒಬಿಸಿಗಳ ಅಧ್ಯಾಪಕ ಹುದ್ದೆಗಳ ಹಕ್ಕಿನಲ್ಲಿ ವಿಶ್ವಾಸಘಾತ ಮಾಡಿ ಒಂದು ವರ್ಷವಾಗುತ್ತಿರುವ ಸಂದರ್ಭದಲ್ಲಿ ಮಾರ್ಚ್ 5, 2019 ರಂದು ಹಲವು ಸಂಘಟನೆಗಳು ಪ್ರತಿಭಟನಾ ಹೋರಾಟದ ಕರೆಯನ್ನು ನೀಡಿವೆ. ಸಿಪಿಐ(ಎಂ) ಈ ಪ್ರತಿಭಟನಾ ಕಾರ್ಯಾಚರಣೆಗಳಿಗೆ ಸಂಪೂರ್ಣ ಬೆಂಬಲ ನೀಡಿದೆ.

ಆದಿವಾಸಿಗಳ ಹಕ್ಕುಗಳು:

ಮೋದಿ ಸರಕಾರ ಅರಣ್ಯ ಹಕ್ಕುಗಳ ಕಾಯ್ದೆಗೆ ಸವಾಲು ಹಾಕಿದ ಮೊಕದ್ದಮೆಯಲ್ಲಿ ಸುಪ್ರಿಂ ಕೋರ್ಟಿನಲ್ಲಿ ವಿಚಾರಣೆ ಯಾಗುತ್ತಿದ್ದಾಗ ಉದ್ದೇಶ ಪೂರ್ವಕವಾಗಿ ಗೈರು ಹಾಜರಾಗಿ ಆದಿವಾಸಿಗಳ ಹಕ್ಕುಗಳ ವಿಷಯದಲ್ಲಿ ವಿಶ್ವಾಸಘಾತ ಮಾಡಿದೆ. ಈಗ ಆದೇಶವನ್ನು ಜುಲೈ 2019ರ ವರೆಗೆ ಅಮಾನತಿನಲ್ಲಿಟ್ಟಿದ್ದರೂ, 23 ಲಕ್ಷ ಬುಡಕಟ್ಟು ಜನಗಳ ಭೂಮಿಯ ಹಕ್ಕನ್ನು ವಂಚಿಸುವ ಬೆದರಿಕೆ ಮುಂದುವರೆದಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಭಿನ್ನಚೇತನರನ್ನು ಗೇಲಿ ಮಾಡಿದ ಮೋದಿ

ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಾರ್ಚ್ 2ರಂದು ಸ್ಮಾರ್ಟ್ ಇಂಡಿಯ ಹ್ಯಾಕಥಾನ್ 2019ರಲ್ಲಿ ವಿದ್ಯಾರ್ಥಿಗಳೊಂದಿಗೆ ಒಂದು ಸಂವಾದದ ವೇಳೆಯಲ್ಲಿ ಡಿಸ್ಲೆಕ್ಸಿಯ ಇರುವ ಜನಗಳನ್ನು ಗೇಲಿ ಮಾಡಿರುವುದರ ಬಗ್ಗೆ ಕೇಂದ್ರ ಸಮಿತಿ ವ್ಯಥೆ ವ್ಯಕ್ತಪಡಿಸಿದೆ. ತನ್ನ ರಾಜಕೀಯ ಪ್ರತಿಸ್ಪರ್ಧಿಗಳನ್ನು ಕೆಟ್ಟದಾಗಿ ಚಿತ್ರಿಸುವ ಪ್ರಯತ್ನದಲ್ಲಿ ಪ್ರಧಾನ ಮಂತ್ರಿಗಳು ತಮ್ಮ ಪ್ರತಿಗಾಮಿ ಮನೋಭಾವವನ್ನು ಪ್ರದರ್ಶಿಸಿದ್ದಾರೆ. ಉನ್ನತ ಹುದ್ದೆಯಲ್ಲಿ ಇರುವವರಿಂದ ಇಂತಹ ಸಂವೇದನಾಶೂನ್ಯ ವರ್ತನೆಯನ್ನು ಒಪ್ಪಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಶಿಸ್ತು ಕ್ರಮ:

ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಹಾಗೂ ಮಹಾರಾಷ್ಟ್ರ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ನರಸಯ್ಯ ಆದಂ ಅವರನ್ನು ಮೂರು ತಿಂಗಳ ಕಾಲ ಅಮಾನತು ಮಾಡಲು ನಿರ್ಧರಿಸಲಾಗಿದೆ. ಇದು ಅವರು ಪ್ರಧಾನ ಮಂತ್ರಿಗಳು ಮತ್ತು ರಾಜ್ಯ ಮುಖ್ಯಮಂತ್ರಿಗಳ ಸಮ್ಮುಖ ಒಂದು ಸಾರ್ವಜನಿಕ ಸಭೆಯಲ್ಲಿ ಮಾಡಿದ ಭಾಷಣದ ಒಂದು ಪರಿಣಾಮವಾಗಿದೆ, ಅದು ಪಕ್ಷದ ಪ್ರತಿಷ್ಠೆಗೆ ಘಾಸಿಯುಂಟು ಮಾಡಿದೆ ಎಂದು ಕೇಂದ್ರ ಸಮಿತಿ ಹೇಳಿದೆ.



ಕೇಂದ್ರ ಸಮಿತಿಯ ಸಭೆಯ ನಂತರ ಪತ್ರಿಕಾಸಮ್ಮೇಳವನ್ನುದ್ದೇಶಿಸಿ ಮಾತಾಡುತ್ತಿರುವ ಪಕ್ಷದ ಪ್ರಧಾನ ಕಾರ್ಯದರ್ಶಿಗಳು

ಲೋಕಸಭಾ ಚುನಾವಣೆಗಳು:

ಪಕ್ಷದ ಚುನಾವಣಾ ಕಾರ್ಯತಂತ್ರವನ್ನು ಕುರಿತಂತೆ ಪಕ್ಷ ಅಂಗೀಕರಿಸಿರುವ ಹಿಂದಿನ ನಿರ್ಧಾರವನ್ನು ಕೇಂದ್ರ ಸಮಿತಿ ಪುನರುಚ್ಚರಿಸಿದೆ. ಈ ಚುನಾವಣಾ ಕಾರ್ಯತಂತ್ರ ಕೆಳಗಿನ ಮೂರು ಅಂಶಗಳ ಮೇಲೆ ನಿಂತಿದೆ:

1. ಬಿಜೆಪಿ ಮೈತ್ರಿಕೂಟವನ್ನು ಸೋಲಿಸುವುದು
2. ಲೋಕಸಭೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಬಲವನ್ನು ಹೆಚ್ಚಿಸುವುದು, ಮತ್ತು 'ಬಿಜೆಪಿ–ವಿರೋಧಿ ಮತಗಳನ್ನು ಗರಿಷ್ಟ ಪ್ರಮಾಣದಲ್ಲಿ ಕ್ರೋಡೀಕರಿಸಲು ರಾಜ್ಯ ಮಟ್ಟದ ಚುನಾವಣಾ ತಂತ್ರಗಳನ್ನು ರೂಪಿಸಲಾಗುತ್ತಿದೆ. ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಸ್ಪರ್ಧೆಯಿರುವ ರಾಜ್ಯಗಳಲ್ಲಿ ಸಿಪಿಐ(ಎಂ) ಒಂದು ಅಥವ ಎರಡು ಸ್ಥಾನಗಳಲ್ಲಿ ಸ್ಪರ್ಧಿಸುತ್ತದೆ ಮತ್ತು ಒಟ್ಟಾರೆಯಾಗಿ ಬಿಜೆಪಿಯನ್ನು ಸೋಲಿಸಲು ಪ್ರಚಾರ ನಡೆಸುತ್ತದೆ.

ತಮಿಳುನಾಡಿನಲ್ಲಿ, ಡಿಎಂಕೆ ಯೊಂದಿಗೆ ಸೀಟು ಹಂಚಿಕೆಯ ಬಗ್ಗೆ ಮಾತುಕತೆಗಳು ನಡೆಯುತ್ತಿವೆ.

ಮಹಾರಾಷ್ಟ್ರದಲ್ಲಿ, ದಿಂಡೋರಿ ಅಥವ ಪಾಲ್ಘರ್ ನಲ್ಲಿ ಸ್ಪರ್ಧಿಸುವ ಬಗ್ಗೆ ಎನ್.ಸಿ.ಪಿ. ಯೊಂದಿಗೆ ಮಾತುಕತೆಗಳು ನಡೆಯುತ್ತಿವೆ. ಈ ಎರಡೂ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಸ್ವತಂತ್ರವಾಗಿ ತಲಾ ಒಂದು ಲಕ್ಷ ಮತಗಳನ್ನು ಪಡೆಯುತ್ತಿದೆ.

ಬಿಹಾರದಲ್ಲಿ, ಸಮಸ್ತಿಪುರ ಜಿಲ್ಲೆಯ ಉಜಿಯಾರ್ಪುರದಲ್ಲಿ ಸ್ಪರ್ಧಿಸಲು ಆರ್.ಜೆ.ಡಿ. ಯೊಂದಿಗೆ ಮಾತುಕತೆಗಳು ನಡೆಯುತ್ತಿವೆ.

ಒಡಿಶಾದಲ್ಲಿ, ವಿಧಾನಸಭೆಗೂ ಜತೆಗೇ ಚುನಾವಣೆಗಳು ನಡೆಯಲಿದ್ದು, ಸಿಪಿಐ(ಎಂ) ಭುವನೇಶ್ವರ ಲೋಕಸಭಾ ಸ್ಥಾನಕ್ಕೆ ಮತ್ತು ಈಗ ಪಡೆದಿರುವ ಬೊನೈ ಸೇರಿದಂತೆ ಕೆಲವು ವಿಧಾನಸಭಾ ಸ್ಥಾನಗಳಿಗೆ ಸ್ಪರ್ಧಿಸುತ್ತದೆ. ಬಿಜೆಪಿಯನ್ನು ಸೋಲಿಸುವಂತೆ ಒಡಿಶಾದ ಜನತೆಗೆ ಕರೆ ನೀಡುತ್ತದೆ. ರಾಜ್ಯ ಸರಕಾರದ ವಿರುದ್ಧ ಸಿಪಿಐ(ಎಂ) ನಡೆಸಿರುವ ಹಲವು ಹೋರಾಟಗಳ ಹಿನ್ನೆಲೆಯಲ್ಲಿ ಇತರ ಎಡಪಕ್ಷಗಳೊಂದಿಗೆ ವಿವರಗಳನ್ನು ಚರ್ಚಿಸುತ್ತಿದೆ.

ಪಶ್ಚಿಮ ಬಂಗಾಲದಲ್ಲಿ, ಬಿಜೆಪಿ–ವಿರೋಧಿ ಮತ್ತು ಟಿಎಂಸಿ–ವಿರೋಧಿ ಮತಗಳನ್ನು ಗರಿಷ್ಟ ಪ್ರಮಾಣದಲ್ಲಿ ಕ್ರೋಡೀಕರಿಸಲು ಸಾಧ್ಯವಾಗುವಂತೆ ಸೂಕ್ತ ಕಾರ್ಯತಂತ್ರಗಳನ್ನು ಅಂಗೀಕರಿಸಬೇಕು ಎಂದು ಕೇಂದ್ರ ಸಮಿತಿ ಈ ಹಿಂದೆ ನಿರ್ಧರಿಸಿತ್ತು. ಅದರ ಪ್ರಕಾರ, ಕಾಂಗ್ರೆಸ್ ಮತ್ತು ಎಡರಂಗ ಈಗ ಹೊಂದಿರುವ ಆರು ಸ್ಥಾನಗಳಲ್ಲಿ ಪರಸ್ಪರರ ವಿರುದ್ಧ ಸ್ಪರ್ಧಿಸಬಾರದು ಎಂಬ ಪ್ರಸ್ತಾವನೆಯನ್ನು ಸಿಪಿಐ(ಎಂ) ಮುಂದಿಟ್ಟಿದೆ. ಇತರ ಸ್ಥಾನಗಳನ್ನು ಅಂತಿಮಗೊಳಿಸಲು ಮಾರ್ಚ್ 8 ರಂದು ಎಡರಂಗ ಸಭೆ ಸೇರುತ್ತಿದೆ.



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಹೋರಾಟವೊಂದೇ ಮುಂದಿರುವ ದಾರಿ

ವಿಮಲಾ .ಕೆ.ಎಸ್

ದೇಶ ಪ್ರಗತಿ ಕಾಣಬೇಕೆಂದರೆ ವಿದೇಶೀ ಬಂಡವಾಳವೊಂದೇ ದಾರಿ, ವಿದೇಶೀ ಬಂಡವಾಳ ಹರಿಯಬೇಕೆಂದರೆ ಯಾವ ಕರಾರು, ಕಟ್ಟಳೆಗಳಿಲ್ಲದ ಮುಕ್ತ ಸ್ವಾತಂತ್ರವಿರಬೇಕೆಂಬ ಲಾಭಬಡುಕರ ಎಲ್ಲ ಷರತ್ತುಗಳಿಗೆ ದೇಶದ ಹಿತವನ್ನು ಪಣಕ್ಕಿಟ್ಟು ಒಪ್ಪಿಕೊಂಡಿತು. ಅದರ ಫಲವಾಗಿ ಭಾರತ ಮಾತ್ರವಲ್ಲ ನಮ್ಮ ದೇಶದಂಥಹ ಹಲವು ದೇಶಗಳ ದುಡಿಯುವ ಜನರ ಉಸಿರು ಕಟ್ಟತೊಡಗಿತು.

ಮಾರ್ಚ 8. ಒಂದು ಐತಿಹಾಸಕ ಸಂಘರ್ಷದ ವಿಜಯದ ನೆನಪು ಮಾಡುವ ಮಹಾದಿನ. ಅಂತರ ರಾಷ್ಟ್ರೀಯ ಮಹಿಳಾದಿನ. ದುಡಿಯುವ ಮಹಿಳೆಯರ ಹಕ್ಕು ಬಾಧ್ಯತೆಗಳಿಗಾಗಿ ಪಣತೊಟ್ಟು ಹೋರಾಡಿದ ನ್ಯುಯಾರ್ಕಿನ ಸಿದ್ಧಪಡಿಸಿದ ಉಡುಪಿನ ಕಾರ್ಖಾನೆಯ ಮಹಿಳೆಯರು ಮತದಾನದ ಹಕ್ಕು ,ನಿಗದಿತ ಕೆಲಸ, ಕೆಲಸಕ್ಕೆ ತಕ್ಕ ವೇತನ, ಹೆರಿಗೆಯ ರಜೆ ಮುಂತಾದ ಬೇಡಿಕೆಯಿಟ್ಟು ಹೋರಾಟ ಮಾಡಿ ಗಳಿಸಿದ ಜಯವನ್ನು ಸ್ಮರಿಸುವ ದಿನವನ್ನಾಗಿ ಉಳಿಸಿದ್ದು 1910ರಲ್ಲಿ ಜರ್ಮನಿಯ ಕ್ಲಾರಾ ಜೆಟ್ಕಿನ್. ಹಾಗೆಯೇ ವಿಜಯೋತ್ಸವದ ಪ್ರಥಮ ಮಹಿಳಾ ದಿನದ ಸಂಭ್ರಮಾಚರಣೆ ನಡೆದಿದ್ದು 1911 ರಲ್ಲಿ. ಈ ವಿವರಗಳು ನಮ್ಮ ಯಾರ ಮನಸ್ಸಿನಿಂದ ಮರೆಯಾಗುವುದಿಲ್ಲ. ಹಾಗಿದ್ದೂ ಮಾರ್ಚ ಬಂದ ತಕ್ಷಣ ಇನ್ನೊಮ್ಮೆ ಪ್ರತಿ ವರ್ಷ ಈ ಎಲ್ಲವನ್ನೂ ಪುನರುಚ್ಚರಿಸುತ್ತೇವೆ. ಯಾಕೆಂದರೆ ಈ ದಿನ ಮಹಾದಿನ. ಹಾಗೆಂದು ಗತ ಸ್ಮರಣೆಯಲ್ಲಿ ಕಾಲ ಕಳೆಯುವ ಸಂದರ್ಭವಿಲ್ಲ.

ಅದಾಗಲೇ ಕೈಗಾರಿಕೆಗಳ ಬೆಳವಣಿಗೆಯಂಥಹ ಅಭಿವೃದ್ಧಿಗೆ ತೆರೆದುಕೊಂಡ ವಿಶ್ವದ ಕೆಲವು ರಾಷ್ಟ್ರಗಳಲ್ಲಿ ಮಹಿಳಾ ಸಮಾನತೆಯತ್ತ ಹೆಜ್ಜೆಯಾಗುವ, ದುಡಿಯುವ ಮಹಿಳೆಯರಿಗೆ ಭದ್ರತೆಯ ಬದುಕಿನ ಅವಕಾಶಕ್ಕೆ ಹೋರಾಟ ನಡೆದರೆ, ಭಾರತದಂಥಹ ದೇಶದಲ್ಲಿ ವಸಹಾತುಶಾಹಿ ಬ್ರಿಟಿಶರ ವಿರುದ್ಧ, ದೇಶದ ಸ್ವಾತಂತ್ರಕ್ಕಾಗಿ ಹೆಣ್ಣು ಗಂಡುಗಳೆಂಬ ಬೇಧವಿಲ್ಲದೇ ಹೋರಾಟ ನಡೆಸುತ್ತಿದ್ದ ಘಟ್ಟವದು. ಅಲ್ಲಿ ನಿರ್ದಿಷ್ಟ ಹೋರಾಟಗಳು ತಕ್ಷಣದ ಅಗತ್ಯವಾಗಿದ್ದರೆ ಇಲ್ಲಿ ಸಾಮೂಹಿಕ ನೆಲೆಯ ಹೋರಾಟದ ಮೂಲಕ ಪಡೆಯುವ ಸ್ವಾತಂತ್ರದ ಮೂಲಕ ಎಲ್ಲ ಅಸಮಾನತೆಗಳನ್ನೂ ನಿವಾರಿಸಿಕೊಳ್ಳುತ್ತೇವೆಂಬ ಭಾವದಿಂದ ಸ್ವಾತಂತ್ರ ಹೋರಾಟ ನಡೆಯುತ್ತಿತ್ತು. ವಿಶ್ವದ ಹಲವು ದೇಶಗಳಲ್ಲಿ ಇಂಥಹ ಹಲವು ಹೋರಾಟಗಳು ನಡೆದಿವೆ. ಮತದಾನದ ಹಕ್ಕು ಕೇವಲ ಆಸ್ತಿವಂತರಿಗೆ ಸಿಗುತ್ತಿರುವುದನ್ನು ಸರ್ವರಿಗೂ ದೊರೆಯುವಂತೆ ಮಾಡುವ, ಜನವಿರೋಧೀ ಆಳ್ವಿಕೆ ನಡೆಸುವವರ ಕಾರಣದಿಂದ ಇದ್ದ ಸಮಸ್ಯೆಗಳು, ಆಳುವವರ ನಿರ್ಲಕ್ಷ್ಯದಿಂದ ಉಂಟಾಗುತ್ತಿದ್ದ ಆಹಾರ ಕ್ಷಾಮದ ವಿರುದ್ಧ, ಹೀಗೆ ಹೋರಾಟಗಳು ನಿರಂತರವಾಗಿ ನಡೆದಿವೆ. ಹಲವು ಬದಲಾವಣೆಗಳನ್ನೂ ಕಂಡಿದ್ದೇವೆ. ಹೆಣ್ಣೆಂಬ ನಿರಾಕರಣೆಯ ಧೋರಣೆಗೆ ಪ್ರತಿಯಾಗಿ ಮಾನವ ಘನತೆಯ ಬದುಕಿಗೆ ತಾನೂ ಹಕ್ಕುದಾರಳೆಂಬ ದಾವೆಯನ್ನು ಸಕಾರಾತ್ಮಕವಾಗಿ ದಾಖಲಿಸುವಲ್ಲಿಯೂ ಅಲ್ಪಸ್ವಲ್ಪ ಯಶಸ್ಸು ಪಡೆಯಲಾಗಿದೆ. ಹಾಗೆಂದೇ ಇಂದು ಹಲವು ಕ್ಷೇತ್ರಗಳಲ್ಲಿ ಸಾಧನೆಯ ಮೆಟ್ಟಿಲುಗಳ ಮೇಲೆ ಮಹಿಳೆಯರು ನಿಂತು ವಿಜಯದ ನಗೆ ಬೀರುತ್ತಿದ್ದಾರೆ.

ಹಾಗಿರುವಾಗ ಇದುವರೆಗಿನ ಸಾಧನೆಗಳ ಜೊತೆಗೂಡಿದ ವೇದನೆಗಳನ್ನು ಗುರುತಿಸಿ ಅವುಗಳ ಕಾರಣಗಳು ಮತ್ತು ಪರಿಹಾರಕ್ಕೆ ಅಗತ್ಯವಾದ ದಾರಿಯನ್ನು ಹುಡುಕಿಕೊಳ್ಳುವ ಅಗತ್ಯವಿದೆ. ಶತಮಾನದ ಮೇಲೆ ಒಂದು ದಶಕವನ್ನು ಕಳೆದ ಆ ಹೋರಾಟದ ನೆನಪಿನಲ್ಲಿ ಹೆಜ್ಜೆ ಹಾಕುತ್ತ ಹಾಕುತ್ತ ಈ ಹೊತ್ತಿಗೆ ಎಲ್ಲ ಕ್ಷೇತ್ರಗಳಲ್ಲಿ ಸಮಾನತೆಯನ್ನು ದಾಖಲಿಸಿಬಿಡಬೇಕಿತ್ತು ಕಾಲಚಕ್ರ ಸರಿಸಮನಾಗಿ ಉರುಳಿದ್ದರೆ. ಆದರೆ ಸರಿಸಮವಾಗದೆ ವಿಷಮವೇ ಮುಂದಾದ್ದರಿಂದ ಮತ್ತೊಮ್ಮೆ ಶತಮಾನಗಳ ಹಿಂದಿನ ಘಟ್ಟಕ್ಕೆ ಕಾಲಚಕ್ರ ಹಿಮ್ಮುಖವಾಗ ತೊಡಗಿದೆ.

ಮಹಿಳಾ ಸಮಾನತೆಯ ಹಾದಿಯಲ್ಲಿ ಇಟ್ಟ ಹೆಜ್ಜೆಗಳು:

ಮಹಿಳಾ ಸಮಾನತೆಯನ್ನು ಸಾಧಿಸಬೇಕೆಂದರೆ ಅದಕ್ಕೊಂದು ಸಾಮಾಜಿಕ ನೆಲೆಯ ಹೊಸ ಹೊಸ ಹಾದಿಗಳನ್ನು ಹುಡುಕಬೇಕಾಗುತ್ತದೆ. ಅದು ಮಹಿಳೆ ಮತ್ತು ಪುರುಷರಿಬ್ಬರಿಗೂ ಸಮಾನವಾಗಿ ಅನ್ವಯವಾಗುವಂತೆ ಕಾರ್ಯೋನ್ಮುಖವಾಗಬೇಕಾಗುತ್ತದೆ. ಈ ದಿಸೆಯಲ್ಲಿ ಸ್ವತಂತ್ರ ಭಾರತದ ಮೊದಲ ಹೆಜ್ಜೆಯಾಗಿ 'ಸಮಾನತೆಯತ್ತ. ..' ಶೀರ್ಷಿಕೆಯಡಿ 74–75 ರಲ್ಲಿ ಮಹಿಳೆಯರ ಸ್ಥಿತಿ ಗತಿ ಕುರಿತು ಅಧ್ಯಯನ ನಡೆಸಿ ನೀಡಿದ ವರದಿ, ಯತ್ರ ನಾರ್ಯಸ್ತು ಪೂಜ್ಯಂತೇ ಎಂದ ದೇಶದಲ್ಲಿ ಮಹಿಳೆಯರಿಗಿದ್ದ ಸ್ಥಾನ ಮಾನಗಳಿಗೆ ಹಿಡಿದ ಕನ್ನಡಿಯಾಗಿತ್ತು. ಮಹಿಳಾ ಸಮಾನತೆಗೆ ಸೋಪಾನವಾಗಬೇಕಾಗಿದ್ದ ಸಾಮಾಜಿಕ ನೆಲೆಗಳು, ಸಾಂಸ್ಕೃತಿಕ ಆರ್ಥಿಕ, ರಾಜಕೀಯ ಕೌಟುಂಬಿಕ ವಲಯಗಳೆಲ್ಲದರಲ್ಲಿ ಕಣ್ಣಿಗೆ ರಾಚುವಂತೆ ತಾರತಮ್ಯವಿದೆ ಎಂಬುದನ್ನು ನೇರ ನಿಖರವಾಗಿ ದಾಖಲಿಸಿದ ವರದಿಯದು. ಆ ವೇಳೆಗಾಗಲೇ ವಿಶ್ವಸಂಸ್ಥೆ ಕೂಡ ಮಹಿಳಾ ವಿಷಯಗಳಿಗೆ ಅತಿ ಹೆಚ್ಚು ಪ್ರಾಮುಖ್ಯತೆ ನೀಡಿ ತನ್ನ ಸದಸ್ಯ ದೇಶಗಳಿಗೆ ಎಚ್ಚರ ಮೂಡಿಸುವ ಹಲವು ಕಾರ್ಯಕ್ರಮಗಳನ್ನು ನೀಡಲು ಶುರುಮಾಡಿತ್ತು. ಹಾಗೆಂದೇ ಗಾರ್ಮೆಂಟ್ ಕಾರ್ಖಾನೆಯ ಮಹಿಳೆಯರ ಹೋರಾಟದ ನೆನಪಿನ ಅಂತರ ರಾಷ್ಟ್ರೀಯ ಮಹಿಳಾ ದಿನ ಕೆಲವು ದೇಶಗಳಲ್ಲಿ ಮಾತ್ರ ನಡೆಯುತ್ತಿದ್ದುದನ್ನು 1975 ರಲ್ಲಿ ತನ್ನೆಲ್ಲ ಸದಸ್ಯ ರಾಷ್ಟ್ರಗಳಿಗೆ ಆಚರಿಸುವಂತೆ ಕರೆ ನೀಡಿತು. ಅದೇ ವೇಳೆಗೇ ನಮ್ಮ ದೇಶದ ಹಲವು ರಾಜ್ಯಗಳ ಮಹಿಳೆಯರ ಸ್ಥಿತಿ ಗತಿಗಳನ್ನು ಅಧ್ಯಯನ ಮಾಡಿ 'ಸಮಾನತೆಯತ್ತ . ವರದಿ ಸಲ್ಲಿಕೆಯಾಗಿದ್ದು ಒಂದಕ್ಕೊಂದು ಪೂರಕವಾಗಿಯೇ ನಡೆದ ಸಂಗತಿಗಳೆಂದು ಗುರುತಿಸಬೇಕು. ಮತ್ತು ನಮ್ಮ ದೇಶದ ಸಂದರ್ಭದಲ್ಲಿ ಸ್ವಾತಂತ್ರ ಚಳುವಳಿಯಲ್ಲಿ ಪಾಲ್ಗೊಂಡ ಹಲವಾರು ಮಾನವ ಪರ ಮನಸ್ಸುಗಳ ಸ್ಪಷ್ಟ ಚಿಂತನೆಯ ಪ್ರಭಾವವನ್ನೂ ಆ ವರದಿ ಪಡೆದಿತ್ತು. ಮುಂದಿನ ಹಲವು ವರ್ಷಗಳಲ್ಲಿ ಅದೆಷ್ಟೋ ರೀತಿಯ ಹೋರಾಟಗಳು, ಸಂವಾದ ಚರ್ಚೆಗಳು ನಡೆದವು. ಇಂದಿಗೂ ನಡೆಯುತ್ತಲೇ ಇವೆ. ಆದರೆ ಪ್ರಗತಿಯ ಹೆಸರಿನಲ್ಲಿ ಮುನ್ನಡೆದಂತೆಲ್ಲ ಅಂತರಗಳು ಕಡಿಮೆಯಾಗಬೇಕಿದ್ದುದು ವಿಪರ್ಯಾಸವೆಂಬಂತೆ ಉಲ್ಟಾ ತಿರುಗತೊಡಗಿದ ಚಕ್ರಕ್ಕೆ ಸಿಗುತ್ತಿದೆ ಈ ನೆಲ. **ಹಾಗಾದರೆ ಅಂದಿನಿಂದ ಇಂದಿಗೆ.. . ಕ್ರಮಿಸಿದ ದಾರಿ ಹೊತ್ತೊಯ್ದಿದೆ ನಮ್ಮನ್ನು ಎಲ್ಲಿಗೇ??**


90ರ ದಶಕ, ಮಹಿಳಾ ಮತ್ತು ಮಹಿಳಾ ಪರ ಪ್ರಜಾಸತ್ತಾತ್ಮಕ ಚಳುವಳಿಗಳು ಸಾರ್ಥಕ ಹಲವು ಸಂಗತಿಗಳ ಜೊತೆ ಮುನ್ನಡೆಯಲು ಹಂಬಲಿಸುತ್ತಿರುವಾಗ ಸಂಪತ್ತುದಾಹೀ, ಅತಿಕ್ರಮ ಉತ್ಸಾಹೀ ಸಾಮ್ರಾಜ್ಯಶಾಹಿ ದೇಶಗಳ ಕುತಂತ್ರ ನಮ್ಮಂಥಹ ದೇಶಗಳನ್ನು ವಶ ಪಡಿಸಿಕೊಳ್ಳುವ ಹೊಸ ದಾರಿಗಳನ್ನು ಹುಡುಕಿಕೊಳ್ಳತೊಡಗಿದವು. ಮಹಿಳಾ ಸಮಾನತೆಯ ಸ್ಪಷ್ಟ ದಾರಿಯನ್ನು ತೋರಿಸಿಕೊಟ್ಟಿದ್ದ ಸಮಾಜವಾದೀ ರಾಷ್ಟ್ರ ಸೋವಿಯತ್ ಯೂನಿಯನ್ ವಿಘಟನೆ ಯಾಗುವಂತೆ ಸಂಚು ರೂಪಿಸಿದವು. ಸಮ ಸಮಾಜ ನಿರ್ಮಾಣ ಕಲ್ಪನೆಯಲ್ಲಿ, ಸಾಮ್ರಾಜ್ಯಶಾಹಿಗಳ ಅತಿಕ್ರಮಣದ ಆಸೆಗೆ ಅಡ್ಡಿಯಾಗಿ, ಭಾರತದಂಥಹ ದೇಶಗಳ ಮಿತ್ರ ರಾಷ್ಟ್ರವಾಗಿ ಸೋವಿಯತ್ ಯೂನಿಯನ್ ನಿಂತಿತ್ತು. ಸೋವಿಯತ್ ಯುನಿಯನ್ ನ ವಿಘಟನೆಯಾದ ಒಂದು ಕಾರಣ ಮತ್ತು ದೇಶದಲ್ಲಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ಆಯ್ಕೆಯಾಗಿ ಬಂದು ಉಳ್ಳವರ ಪರವಾಗಿ ಮತ್ತು ವಿದೇಶೀ ಬಂಡವಾಳಕ್ಕೆ ನೆರವಾಗುವ ಕಾರಣದಿಂದ ಮಂಡಿಯೂರಿದ ದೇಶೀ ಸರಕಾರಗಳ ಕಾರಣದಿಂದ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳೆಂಬ ತ್ರಿಶೂಲಗಳು ಬೆಣ್ಣೆ ಸವರಿದ ಚಾಕುವಿನಂತೆ ನಯವಾಗಿ ಮಧ್ಯಮವರ್ಗದವರಲ್ಲಿ ಕೊಳ್ಳುಬಾಕತನವನ್ನು ಹೆಚ್ಚಿಸುತ್ತ ಅತಿ ಲಾಲಸೆಗೆ ಒಳಗಾಗುವಂತೆ ಆಮಿಷ ಸೃಷ್ಟಿಸಿತು. ದುಡಿಯುವ ಜನರ ಬದುಕನ್ನು ಕತ್ತರಿಸತೊಡಗಿತು.

ದೇಶ ಪ್ರಗತಿ ಕಾಣಬೇಕೆಂದರೆ ವಿದೇಶೀ ಬಂಡವಾಳವೊಂದೇ ದಾರಿ, ವಿದೇಶೀ ಬಂಡವಾಳ ಹರಿಯಬೇಕೆಂದರೆ ಯಾವ ಕರಾರು, ಕಟ್ಟಳೆಗಳಿಲ್ಲದ ಮುಕ್ತ ಸ್ವಾತಂತ್ರವಿರಬೇಕೆಂಬ ಲಾಭಬಡುಕರ ಎಲ್ಲ ಷರತ್ತುಗಳಿಗೆ ದೇಶದ ಹಿತವನ್ನು ಪಣಕ್ಕಿಟ್ಟು ಒಪ್ಪಿಕೊಂಡಿತು. ಅದರ ಫಲವಾಗಿ ಭಾರತ ಮಾತ್ರವಲ್ಲ ನಮ್ಮ ದೇಶದಂಥಹ ಹಲವು ದೇಶಗಳ ದುಡಿಯುವ ಜನರ ಉಸಿರು ಕಟ್ಟತೊಡಗಿತು.

ಈ ಎಲ್ಲ ವಿಷಮ ಬೆಳವಣಿಗೆಗೆ ಈಗ ಮೂರು ದಶಕಗಳ ವಯಸ್ಸು. ಈ ಮೂರು

ಪುಟ 11 ಕ್ಕೆ





"ಮನುವಾದ ಮುಕ್ತ ಭಾರತ'

ಸಮಾನತೆ - ಸಾಮಾಜಿಕ ನ್ಯಾಯ- ಸಂವಿಧಾನ ಆಶಯಗಳ ಪರಿಕಲ್ಪನೆಗೆ ದಾರಿ

ನಾಗರಾಜ ನಂಜುಂಡಯ್ಯ


ಇತ್ತೀಚಿನ ವರ್ಷಗಳಲ್ಲಿ ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತಾ ಆಚರಣೆಗಳು ಹೆಚ್ಚಾಗಿ ಆರ್ಥಿಕ ಮತ್ತು ಸಾಮಾಜಿಕ ಬಹಿಷ್ಕಾರದ ಮೂಲಕ ದಲಿತರನ್ನು ಹೊರಗಿಡುವಂತಹ ಆಚರಣೆ ಅನಾಗರಿಕ ಹಾಗೂ ಅಮಾನವೀಯಗಳ ಕುರಿತಂತೆ ನಮ್ಮ ದೇಶದಲ್ಲಿ ವ್ಯಾಪಕವಾಗಿ ಚರ್ಚಿಸಲಾಗುತ್ತಿದೆ. ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತಾ ಆಚರಣೆಗಳಿಗೂ, ಮನುಸ್ಮೃತಿ ಪರಿಕಲ್ಪನೆ' ಯ ಚಾತುರ್ವರ್ಣ ಸಮಾಜಕ್ಕೂ ಇರುವ ಸಂಬಂಧಗಳು ಚಾರಿತ್ರಿಕವಾಗಿ ನೈಜ ಸಂಗತಿಗಳಾಗಿವೆ. ಈ ಅಸ್ಪೃಶ್ಯತಾ ನಿಂದನೆಗೆ ತುತ್ತಾಗಿ ಐತಿಹಾಸಿಕವಾಗಿ ಶತ ಶತಮಾನಗಳಿಂದ ವಂಚಿಸಲ್ಪಟ್ಟ "ಅಸ್ಪೃಶ್ಯರು ಅಂದರೆ, ಇಂದಿನ ದಲಿತ ಸಮುದಾಯ" ವು ಆರ್ಥಿಕ ಮತ್ತು ಸಾಮಾಜಿಕವಾಗಿ ಉಳಿದ ದಲಿತೇತರರಿಗಿಂತ ತೀರ ಹಿಂದುಳಿದಿರುವುದನ್ನು ಅನೇಕ ಅಧ್ಯಯನಗಳು ಈಗಾಗಲೇ ಅಧಿಕೃತ ಅಂಕಿ ಅಂಶಗಳ ಮೂಲಕ ಸಾಬೀತು ಪಡಿಸಿವೆ.

ಭಾರತೀಯ ದಲಿತ ಅಧ್ಯಯನ ಸಂಸ್ಥೆ (ಐ.ಐ.ಡಿ.ಎಸ್) ನವ ದೆಹಲಿ, ಇದರ ಅಡಿಯಲ್ಲಿ, ಪ್ರತಿಷ್ಠಿತ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಸುಖ ದೇವ್ ಥೋರತ್ ಮತ್ತು ಯುಎಸ್‌ಎ ಪ್ರಿನ್ಸನ್ ವಿಶ್ವವಿದ್ಯಾಲಯದ ಸಂಯೋಜನೆಯೊಂದಿಗೆ, ಪ್ರೊ. ಕ್ಯಾತೇರಿನ್ ಎಸ್.ನೇವ್ಮಾನ್ ನೇತೃತ್ವದ ಸಂಶೋಧನಾ ತಂಡ ನಡೆಸಿರುವ ಸಂಶೋಧನೆ ಮತ್ತು ಸಮೀಕ್ಷೆಯ ವರದಿಗಳು ಈ ದೇಶದಲ್ಲಿ ಸುಮಾರು 30 ಕೋಟಿಗೂ ಅಧಿಕ ಜನಸಂಖ್ಯೆಯನ್ನು ಹೊಂದಿರುವ ದಲಿತ ಸಮುದಾಯದ ಶೋಚನೀಯ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಎತ್ತಿ ತೋರಿಸಿವೆ. ಈ ಸಂಶೋದನಾ ವರದಿಗಳು ಸರ್ಕಾದ ಬಳಿ ಇದ್ದು, ಸರ್ಕಾರದ ಉಗ್ರಾಣಗಳಲ್ಲಿ ದೂಳು ತಿನ್ನುತ್ತಾ ಮೂಲೆ ಗುಂಪಾಗಿವೆ. ಈ ವರದಿಗಳು ದಲಿತ ಮತ್ತು ದಲಿತೇತರರ ನಡುವಿನ ಆರ್ಥಿಕ ಅಸಮಾನತೆ ಮತ್ತು ಸಾಮಾಜಿಕ ತಾರತಮ್ಯದ ಸ್ಥಿತಿಗತಿಗಳನ್ನು ಅಂಕಿಅಂಶಗಳ ಆಧಾರದಲ್ಲಿ ಹೊರ ತಂದಿವೆ.

ಮನುಷ್ಯತ್ವ ವಿರೋಧಿಯಾದ ವರ್ಣ ಮತ್ತು ಜಾತಿ ವ್ಯವಸ್ಥೆಯು ಭಾರತೀಯ ಸಮಾಜವನ್ನು ಹೇಗೆ ಸಹಸ್ರಾರು ವರ್ಷಗಳಿಂದಲೂ ಹಿಂಸಿಸುತ್ತಲೇ ಬಂದಿದೆ ಎಂಬುದಕ್ಕೆ ನಮ್ಮ ದೇಶದ ದಲಿತ, ಆದಿವಾಸಿ-ಬುಡಕಟ್ಟು ಸಮುದಾಯದ ಶೋಚನೀಯ ಬದುಕನ್ನು ನೋಡಿದಾಗ, ನಿಜವಾಗಿ ಸ್ವತಂತ್ರ ಭಾರತ ತಲೆತಗ್ಗಿಸ ಬೇಕಾಗಿದೆ ಎನ್ನುತ್ತವೆ ಈ ಸಂಶೋಧನಾ ವರದಿಗಳು. ಈ ಆರ್ಥಿಕ ತಾರತಮ್ಯ ಮತ್ತು ಸಾಮಾಜಿಕ ಅಸಮತೋಲನವನ್ನು ನಿರ್ಮೂಲನೆ ಮಾಡಲು ಸರ್ಕಾರದ ಆಡಳಿತ ನಡೆಸುವವರಿಗೆ ಕಾನೂನುಗಳ ಅನುಷ್ಠಾನಕ್ಕೆ ದೃಢಚಿತ್ತವಾದ ಇಚ್ಛಾಶಕ್ತಿ ಇರಬೇಕು ಎನ್ನುತ್ತಾರೆ ಪ್ರೊ.ಸುಖ್ ದೇವ್ ಥೋರತ್ ಮತ್ತು ಇನ್ನಿತರ ಸಂಶೋದಕರು..

ಪ್ರಪಂಚದಲ್ಲಿ ಎಲ್ಲಿಯೂ ಇಲ್ಲದ, ಆದರೆ ನಮ್ಮ ದೇಶದಲ್ಲಿ ಮಾತ್ರ ಇನ್ನೂ ಜೀವಂತವಾಗಿರುವ ಅಮಾನವೀಯ ವ್ಯವಸ್ಥೆ ಇದಾಗಿದೆ. ಈ ವ್ಯವಸ್ಥೆಯ ಕರಾಳ ರೂಪವೇ ಈ ಅಸ್ಪೃಶ್ಯತೆ ಅಥವಾ ಜಾತಿ ತಾರತಮ್ಯ. ಇದು ಮನುಸ್ಮೃತಿ ಯ ಮೂರ್ತ ಸ್ವರೂಪವಾಗಿದೆ. ಸ್ವಾತಂತ್ರ್ಯ ಬಂದು ಏಳು ದಶಕಗಳು ತುಂಬಿದರು ಸಹಾ, ಈ ಕ್ರೂರ ವ್ಯವಸ್ಥೆ ಪ್ರಬಲವಾಗೇ ಇರುವುದು ಖೇದಕರ. ಆಳುವ ಸರ್ಕಾರಗಳು ಸ್ವಾತಂತ್ರ್ಯ ಬಂದಾಗಿನಿಂದ ಈ ಜಾತಿ ಪದ್ಧತಿಯನ್ನು ಪ್ರೋತ್ಸಾಹ ಮಾಡಿಕೊಂಡು ಬರುತ್ತಿರುವುದೇ ಅಸ್ಪೃಶ್ಯತೆ ಆಚರಣೆಗಳು ಇನ್ನು ಜೀವಂತವಾಗಿರಲು ಕಾರಣ. ಇವರೆಲ್ಲರೂ ಮನುಸ್ಮೃತಿಯ ಭಕ್ತಾದಿಗಳು ಎಂದರೆ ತಪ್ಪಾಗಲಾರದು.

ಅಸ್ಪೃಶ್ಯರು ಶಿಕ್ಷಣದ ಹಕ್ಕಿನಿಂದ, ಭೂಮಿ-ಆಸ್ತಿ ಒಡೆತನದಿಂದ, ವಸತಿ ಮತ್ತು ಉದ್ಯೋಗ ಮತ್ತು ಆರೋಗ್ಯ ಸಂರಕ್ಷಣೆಗಳಿಂದ ವಂಚಿಸಲ್ಪಟ್ಟದ್ದು, ಬಡತನ ಮತ್ತು ಹಸಿವು ಅವಮಾನಗಳನ್ನೇ ತಮ್ಮ ಬದುಕಿನುದ್ದಕ್ಕೂ ಸಹಿಸಿಕೊಂಡು ಸ್ವತಂತ್ರ ಭಾರತದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಲಕ್ಷಾಂತರ ಹಳ್ಳಿಗಳಲ್ಲಿ ಇನ್ನು ಸಾರ್ವಜನಿಕ ಬಾವಿ, ಕೆರೆ, ಸ್ಮಶಾನ, ಮತ್ತು ದೇವಸ್ಥಾನಗಳನ್ನು ದಲಿತರು ಸ್ಪರ್ಶಿಸುವಂತಿಲ್ಲ. ದೇಶದಾದ್ಯಂತ ಸಾಮಾಜಿಕ ಬಹಿಷ್ಕಾರ, ದಲಿತ ಗುಡಿಸಲುಗಳಿಗೆ ಬೆಂಕಿ, ಸಜೀವ ದಹನ, ದಲಿತ



ಹೆಣ್ಣುಗಳನ್ನು- ಮಕ್ಕಳನ್ನು ಬಿಡದೆ ಬೆತ್ತಲೆ ಮೆರವಣಿಗೆ ಹಾಗೂ ಅವರ ಮೇಲೆ ಅತ್ಯಾಚಾರಗಳು, ಜೀವಂತ ದೇವದಾಸಿ ಪದ್ಧತಿ ಇತ್ಯಾದಿಯಾಗಿ ದಲಿತರನ್ನು ಜಾತಿ ಅಸ್ಪೃಶ್ಯತೆ ಮತ್ತು ತಾರತಮ್ಯಗಳ ಮೂಲಕ ದಮನ ಮಾಡುತ್ತಿರುವುದು, ಪ್ರತಿ ನಿತ್ಯದ ಜಗಜ್ಜಾಹಿರ ಸುದ್ದಿಗಳಾಗಿರುವುದು ತಿಳಿದ ಸಂಗತಿಗಳಾಗಿವೆ.

ಭಾರತದಲ್ಲಿ ಅಸ್ಪೃಶ್ಯತಾ ಆಚರಣೆ ಕಾನೂನಿನ ಪ್ರಕಾರ ನಿಷೇಧಿಸಲಾದ ಪದ್ಧತಿ. ಆದರೆ ಕಾನೂನಿನ ಕಣ್ಣೆದುರಿನಲ್ಲೇ ದಲಿತರ ಮೇಲೆ ದೌರ್ಜನ್ಯ ಗಳು ನಡೆಯುತ್ತಲೇ ಇವೆ. 2017 ರ ಎನ್.ಸಿ.ಆರ್. ಬಿ. ವರದಿಯ ಪ್ರಕಾರ, ಅಖಿಲ ಭಾರತ ಮಟ್ಟದಲ್ಲಿ 2014 ರಲ್ಲಿ ಒಟ್ಟು 40,401 ದೌರ್ಜನ್ಯ ಪ್ರಕರಣಗಳು ದಾಖಲಾಗಿದ್ದು, 2015 ರಲ್ಲಿ 38,670 ಪ್ರಕರಣಗಳು ನಡೆದಿವೆ. ಅಂದರೆ, ಶೇ.4.3 ರಷ್ಟು ದೌರ್ಜನ್ಯಗಳು ಕಡಿಮೆಯಾಗಿವೆ. ಆದರೆ, 2016 ಮತ್ತು 2017 ರಲ್ಲಿ ಕ್ರಮವಾಗಿ 40,801 ಮತ್ತು 41,208 ದೌರ್ಜನ್ಯ ಪ್ರಕರಣಗಳು ನಡೆದು ಶೇ.5.5 ರಷ್ಟು ಹೆಚ್ಚಾಗಿದ್ದು ಹಿಂಸೆ, ಅತ್ಯಾಚಾರಗಳು ಗರಿಷ್ಠ ಪ್ರಮಾಣದಲ್ಲಿ ನಡೆದಿವೆ. ಇತ್ತೀಚಿನ ವರ್ಷಗಳಲ್ಲಿ ದಲಿತ ಕುಟುಂಬದವರು ಅಂತರ ಜಾತಿಯ ವಿವಾಹವಾದರೆ, ಮರ್ಯಾದೆ ಹತ್ಯೆಯ ಹೆಸರಿನಲ್ಲಿ ಅಮಾನವೀಯವಾಗಿ ಕೊಲ್ಲಲ್ಪಟ್ಟ ಪ್ರಕರಣಗಳು ಹೇರಳವಾಗಿ ನಡೆದಿವೆ.

ದೌರ್ಜನ್ಯ ಪ್ರಕರಣಗಳು ಹೆಚ್ಚಾಗಿ ಬಿಜೆಪಿ ಆಳ್ವಿಕೆಯ ರಾಜ್ಯಗಳಾದ ಉತ್ತರ ಪ್ರದೇಶ, ರಾಜಸ್ತಾನ, ಮಧ್ಯ ಪ್ರದೇಶ, ಗುಜರಾತ್, ಮಹಾರಾಷ್ಟ್ರ ಹಾಗೂ ಬಿಹಾರ್, ಛತ್ತೀಸ್‌ಗರ್ ನಲ್ಲಿ ದಾಖಲಾಗಿವೆ. ಹಾಗೆಯೇ, ದಕ್ಷಿಣ ಭಾರತದ ತಮಿಳುನಾಡು, ಆಂದ್ರಪ್ರದೇಶ, ತೆಲಂಗಾಣ ಮತ್ತು ಕರ್ನಾಟಕ ರಾಜ್ಯಗಳು ಅನಂತರದ ಸ್ಥಾನ ಗಳನ್ನು ಪಡೆದಿವೆ. ಕೇರಳ, ಪಶ್ಚಿಮ ಬಂಗಾಳ ದಲ್ಲಿ ಕಡಿಮೆ ಪ್ರಮಾಣದಲ್ಲಿ ಪ್ರಕರಣಗಳು ನಡೆದಿವೆ. ಕಳೆದ ಐದು ವರ್ಷಗಳಲ್ಲಿ ಕರ್ನಾಟಕದಲ್ಲಿ 10 ಸಾವಿರಕ್ಕೂ ಹೆಚ್ಚು ದೌರ್ಜನ್ಯ ಪ್ರಕರಣಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲೆ ನಡೆದಿರುವುದು ದಾಖಲಾಗಿದ್ದು, ಶಿಕ್ಷೆಯ ಪ್ರಮಾಣ ಮಾತ್ರ ತೀರ ಕಡಿಮೆಯಾಗಿವೆ.

ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಸಂವಿಧಾನ ಬದ್ದವಾಗಿ ಬಂದ ಮೀಸಲಾತಿಯನ್ನು ಒಂದು ಕಡೆ ಮನುವಾದಿ ಸಂಘ ಪರಿವಾರದವರು ವಿರೋಧ ಮಾಡುತ್ತಿದ್ದು, ಮತ್ತೊಂದೆಡೆ, ಆರ್ಥಿಕ ವಾಗಿ ಹಿಂದುಳಿದವರಿಗೂ ಉದ್ಯೋಗ ಮತ್ತು ಶಿಕ್ಷಣದಲ್ಲಿ ಈ ಮೀಸಲಾತಿಯನ್ನು ನೀಡಲಾಗುತ್ತಿದೆ. ಸಾಮಾಜಿಕ ಹಿನ್ನೆಲೆಯಲ್ಲಿ ಸಂವಿಧಾನ ಬದ್ಧವಾಗಿ ದಲಿತರಿಗೆ-ಬುಡಕಟ್ಟು ಸಮುದಾಯಕ್ಕೆ ಲಭ್ಯವಿರುವ ಮೀಸಲಾತಿಯನ್ನು ಕಿತ್ತು ಹಾಕುವುದೇ ಇದರ ಹಿಂದಿರುವ ಮೇಲ್ಜಾತಿಯ ಮನುವಾದಿಗಳ ರಾಜಕೀಯ ಹುನ್ನಾರ. ಇದನ್ನು ಹೆಚ್ಚು ಜಾಗರೂಕವಾಗಿ ಹಿಮ್ಮೆಟ್ಟಿಸ ಬೇಕಾಗಿದೆ.

ಶ್ರೇಣೀಕರಣ ಸಮಾಜವನ್ನು ಪ್ರತಿಪಾದಿಸುವ "ಮನುಸ್ಮೃತಿ ಅಥವಾ ಮನುವಾದವು" ಚಾತುರ್ವರ್ಣ ಪದ್ಧತಿಯಲ್ಲಿ ಮೇಲಿನ ತುದಿಯಲ್ಲಿರುವ ವೈದಿಕ ಪರಂಪರೆ ಅಂದರೆ ಬ್ರಾಹ್ಮಣ ಶಾಹಿ ಹಿತಾಸಕ್ತಿ ಕಾಪಾಡಲು, ಮಹಾ ಭಾರತ-ರಾಮಾಯಣ ಎಂಬ ಪುರಾಣ ಕಾವ್ಯಗಳ ನಂಬಿಕೆಯ ಹೆಸರಿನಲ್ಲಿ ಪ್ರತಿಪಾದಿಸಿದ "ಅಸ್ಪೃಶ್ಯತಾ ಆಚರಣೆಗಳ ಪದ್ಧತಿ" ಇದೀಗ ವೈದಿಕ ಸಮುದಾಯಕ್ಕೆ ಮಾತ್ರ ಸೀಮಿತವಾಗಿರದೆ, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಕೂಡಾ ಆಚರಣೆಗೆ ತರುತ್ತಿರುವುದು, ಈ ದೇಶದ ದುರಂತವಾಗಿದೆ.

ಪ್ರಸ್ತುತ ಅಸ್ಪೃಶ್ಯತಾ ತಾರತಮ್ಯಗಳು ಹಲವು ದಶಕಗಳ ಹಿಂದಿನಂತೆ ಇಲ್ಲದಿರಬಹುದು. ಅದು ತನ್ನ ಸ್ವರೂಪವನ್ನು ಬದಲಾಯಿಸಿ ಕೊಂಡಿದೆ. ಅಸ್ಪೃಶ್ಯತೆ ಆಚರಣೆ ಈಗ ಅವ್ಯಕ್ತ ಸ್ವರೂಪದಲ್ಲಿದೆ. ಹಿಂದಿಗಿಂತ ಹೆಚ್ಚು ಸೂಕ್ಷ್ಮವಾಗಿದೆ. ಈಗಲೂ ಗ್ರಾಮಗಳಲ್ಲಿ, ಊರ ಆಚೆಯ ಮಗ್ಗುಲಲ್ಲಿ, ದಲಿತರ ಕೇರಿಗಳಿವೆ. ದಲಿತರಿಗೆ ದೇವಾಲಯ ಪ್ರವೇಶವಿಲ್ಲ. ನಗರಗಳಲ್ಲಿ ದಲಿತರು ಹೆಚ್ಚಾಗಿ ಸ್ಲಂಗಳು, ಜೊಪಡಿಗಳು, ರೈಲ್ವೆ ಹಳಿಗಳ ಪಕ್ಕ, ಹಾಗೂ ಬಸ್ಸ್ ಸ್ಟ್ಯಾಂಡ್ ಗಳೆ ಇವರ ವಾಸಸ್ಥಳಗಳು, ನಗರಗಳಲ್ಲಿ ವಾಸ ಮಾಡಲು ಬಾಡಿಗೆ ಮನೆ ಸಿಗುವುದಿಲ್ಲ. ದಲಿತ ಮಹಿಳೆಯರು ಬಿಸಿ ಊಟ ತಯಾರಿಸಿದರೆ ಮೇಲ್ಜಾತಿಯ ವಿದ್ಯಾರ್ಥಿಗಳು ಶಾಲೆಗಳಲ್ಲಿ ಊಟ ಮಾಡುವುದಿಲ್ಲ. ಇವರು ಕೇವಲ ಪಾತ್ರೆ ತೊಳೆಯುವ ಕೆಲಸಕ್ಕೆ ಸೀಮಿತ. ಸ್ಥಳೀಯ ಪಂಚಾಯತಿ ಸರ್ಕಾರಿ ಸ್ಥಾನ ಗಳಲ್ಲಿ ಹೆಸರಿಗೆ ಮಾತ್ರ ಅಧ್ಯಕ್ಷ, ಉಪಾಧ್ಯಕ್ಷರು ಅಷ್ಟೆ, ಉಳಿದಂತೆ ಕಸ ಗುಡಿಸುವುದು, ಮುಸುರೆ ತಿಕ್ಕುವುದು, ಶೌಚಾಲಯ ತೊಳೆಯುವುದು. ಹೀಗೆ ಸೂಕ್ಷ್ಮವಾಗಿ ನೋಡಿದರೆ ಗ್ರಾಮಗಳಲ್ಲಿ, ನಗರ ಪ್ರದೇಶಗಳಲ್ಲಿ, ಕಚೇರಿಗಳಲ್ಲಿ ಅಸ್ಪೃಶ್ಯತಾ ಆಚರಣೆಗಳು ಬೂದಿ ಮುಚ್ಚಿದ ಕೆಂಡದಂತೆ ಗೌಪ್ಯ ಸ್ವರೂಪದಲ್ಲಿ ರುದ್ರ ತಾಂಡವವಾಡುತ್ತಿವೆ.

ಇವೆಕ್ಕೆಲ್ಲಾ ಮೂಲ ಕಾರಣ ಭಾರತದಲ್ಲಿ ಸಂಪ್ರದಾಯ ಮತ್ತು ಮೂಡ ನಂಬಿಕೆಯ ಹೆಸರಿನಲ್ಲಿರುವ ಜೀವಂತವಾಗಿರುವ ಸಾಮಾಜಿಕ ಅಸಮಾನತೆ ಮತ್ತು ಅಸ್ಪೃಶ್ಯತಾ ತಾರತಮ್ಯಗಳು. ವೈಜ್ಞಾನಿಕತೆಗೆ ವಿರೋಧಿಯಾದ ಒಂದು ಮುದಿ ಗೂಬೆ ಯಂತಿರುವ "ವೈದಿಕ ಸಂಸ್ಕೃತಿ" ಅದರ ಶಾಸನಬದ್ಧ ರೂಪವೇ ಮನು ಸ್ಮೃತಿ. ಇದು ಜಾತಿಯನ್ನೇ ತನ್ನ ಹೃದಯವನ್ನು ಮಾಡಿಕೊಂಡಿರುವ ಬ್ರಹ್ಮ ಕೃತಿ ಎಂದು ಅಬ್ಬರಿಸುತ್ತಾರೆ. ಇದಕ್ಕೆ ಧರ್ಮದ ನಂಬಿಕೆಯ ಲೇಪನವನ್ನು ಮೇಲ್ಲೋಟಕ್ಕೆ ಹಚ್ಚಲಾಗಿದೆ. ಇದರ ಘೋಷಿತ ಉದ್ದೇಶ ಬ್ರಾಹ್ಮಣಶಾಹಿ ಹಿತಾಸಕ್ತಿಯನ್ನು ಕಾಪಾಡುವುದು. ಇದರ ಅಘೋಷಿತ ಉದ್ದೇಶ ಅಸ್ಪೃಶ್ಯತೆ ಯನ್ನು ಪೋಷಣೆ ಮಾಡುವುದು. ಸ್ತ್ರೀಯರು, ದಲಿತರನ್ನು ಸಂಪೂರ್ಣವಾಗಿ ದಮನ ಮತ್ತು ಶೋಷಣೆ ಮಾಡುವುದೆ ಇದರ ಮೂಲ ಉದ್ದೇಶ. ಇವರೆ ಭಾರತದಲ್ಲಿ ಕೋಮು ದ್ವೇಷದ ದಳ್ಳುರಿಯನ್ನು ಹಚ್ಚುವವರು. ನಾಝೀಸಂ ಮತ್ತು ಪ್ಯಾಸಿಸಂನ ನಗ್ನ ಬೆಂಬಲಿಗರು.

ಇವರು ಭಾರತೀಯರನ್ನು ಒಗ್ಗೂಡಿಸುವ ಬದಲು, ಶ್ರೇಷ್ಠ-ಕನಿಷ್ಠ, ಮೇಲು-ಕೀಳು, ಕಪ್ಪು-ಬಿಳುಪು, ಪರಿಶುದ್ಧ-ಅಶುದ್ಧ, ಪವಿತ್ರ-ಅಪವಿತ್ರ, ಮಡಿವಂತ-ಕೊಳಕು - ನಾಥ-ಹೀಗೆ ಸಮಾಜವನ್ನು ಛಿದ್ರಗೊಳಿಸುವುದು ಈ ಮನು ಸ್ಮೃತಿ ಯ ಮೂಲ ಗುರಿಯಾಗಿದೆ.

ಡಾ। ಅಂಬೇಡ್ಕರ್ ರವರು, 1928 ರಲ್ಲಿಯೇ "ವಿಷಮತೆಯ ಮನುಸ್ಮೃತಿ" ಯನ್ನು ಸುಟ್ಟು ಹಾಕಿದರು. ಭಾರತ ಸ್ವತಂತ್ರ ವಾದ ನಂತರ "ಸಮಾನತೆ ಮತ್ತು ಸಾಮಾಜಿಕ ನ್ಯಾಯ" ಅಡಿಪಾಯದ ಸಂವಿಧಾನವನ್ನು ನೀಡಿದರು. ಆದ್ದರಿಂದಲೇ ಸಂವಿಧಾನದ ಪ್ರತಿಗಳನ್ನು ಈ ಮನುವಾದಿಗಳು ಸುಡುತ್ತಿದ್ದಾರೆ. ಅವರ ಪ್ರತಿಮೆಗಳನ್ನು ಕೆಡುವುವವರಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ನಾವು ಅಧಿಕಾರಕ್ಕೆ ಬಂದಿರುವುದೇ ಸಂವಿಧಾನವನ್ನು ಬದಲಾಯಿಸಲು ಎಂಬಿತ್ಯಾದಿ ಯಾಗಿ ಬೊಗಳುತ್ತಿದ್ದಾರೆ. ಇವರ ಆಡಳಿತದ ಅವಧಿಯಲ್ಲಿ, ಗೋವು ಸಂರಕ್ಷಣಾ ಹೆಸರಿನಲ್ಲಿ, ದಲಿತರ ಮೇಲೆ ಅಸ್ಪೃಶ್ಯತಾ ಜಾತಿ ತಾರತಮ್ಯಗಳ ದೌರ್ಜನ್ಯ ಗಳು ಹೆಚ್ಚಾಗಿ ನಡೆದಿವೆ. ಇತ್ತೀಚಿನ ಉದಾಹರಣೆ ಗಳೆಂದರೆ, ಊನಾದಲಿ ದಲಿತರ ಮೇಲೆ ನಡೆದ ದೌರ್ಜನ್ಯ, ಮೀಸಲಾತಿಯ ವಿರುದ್ಧದ ಹೋರಾಟಗಳು, ದಲಿತ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೆಮುಲಾನ ಆತ್ಮಹತ್ಯೆಗೆ, ಮುಂಬಯಿ ನಗರದಲ್ಲಿದ್ದ ಐತಿಹಾಸಿಕ ಅಂಬೇಡ್ಕರ್ ಭವನದ ಧ್ವಂಸ, ಪುಣೆ ಫಿಲ್ಮ್ ಸಂಸ್ಥೆಯಲ್ಲಿ ಮತ್ತು ಚೆನ್ನೈನಲ್ಲಿನ ಅಂಬೇಡ್ಕರ್- ಪೆರಿಯಾರ್ ವಿಶ್ವವಿದ್ಯಾಲಯದಲ್ಲಿ ದಲಿತ ವಿದ್ಯಾರ್ಥಿಗಳ ಮೇಲೆ ದಾಳಿ, ಜೆ.ಎನ್. ಯು, ವಿದ್ಯಾರ್ಥಿಗಳ ಮೇಲೆ ದೇಶ ದ್ರೋಹದ ಪ್ರಕರಣಗಳು, ಬೀಮ ಕೊರೆಂಗಾವ್ ವಿಜಯೋತ್ಸವ ಮೇಲೆ ದಾಳಿ, ದಲಿತ ವಿದ್ಯಾರ್ಥಿನಿ ದಾನಮ್ಮಳ ಮೇಲೆ ಅತ್ಯಾಚಾರ ಮತ್ತು ಕೊಲೆ, ಹರಿಯಾಣದಲ್ಲಿ ದಲಿತ ಕಂದಮ್ಮಗಳನ್ನು ಸುಟ್ಟು ಭಸ್ಮ ಮಾಡಿದ್ದು, ದೌರ್ಜನ್ಯ ತಡೆ ಕಾಯಿದೆಯನ್ನು ದುರ್ಬಲ ಗೊಳಿಸಿದ್ದು, ಇದನ್ನು ಪ್ರತಿ ಭಟಿಸಿದ ದಲಿತ ಹೋರಾಟಗಾರರ ಮೇಲೆ ಗುಂಡು ಹಾರಿಸಿ ಅನೇಕರನ್ನು ಕೊಂದದ್ದು ಇವರ ಆಡಳಿತವಿದ್ದ ಸರ್ಕಾರಗಳೇ ಆಗಿದ್ದು,➔

ಮತ್ತು ಬಡ್ತಿ ಮೀಸಲಾತಿ ಹಿಂಪಡೆದಂತಹ ಸುಪ್ರೀಂ ಕೋರ್ಟ್ ತೀರ್ಪು ಗಳ ಹಿಂದಿನ ರೂವಾರಿಗಳು ಈ ಮನುವಾದಿಗಳೇ ಆಗಿದ್ದರು ಎಂಬುದನ್ನು ಮರೆಯ ಬಾರದು.

ಇತ್ತೀಚೆಗೆ ದಲಿತ ಬುದ್ದಿಜೀವಿ ಮತ್ತು ಪ್ರಗತಿ ಪರ ಚಿಂತಕರು ಹಾಗೂ ಅಂಬೇಡ್ಕರ್ ರ ಕುಟುಂಬ ಸಂಬಂಧಿ ಪ್ರೊ. ಆನಂದ್ ತೇಲ್ತುಂಬ್ಡೆ ಯವರ ಬಂಧನ ಹೀಗೆ – ನೂರಾರು ದಲಿತ ವಿರೋಧಿ ಧೋರಣೆಗಳ ಬಿಜಿಪಿ ಆಡಳಿತ "ಮನು ವಾದ" ಪ್ರೇರಣೆಯನ್ನು ಅಳವಡಿಸಿಕೊಂಡು ಜಾರಿಗೊಳಿಸುತ್ತಿದೆ. ತಮ್ಮ ವಿರುದ್ಧ ಮಾತನಾಡುವವರನ್ನು ಅಸಹಿಂಷ್ಣುತೆಯಿಂದ ದೇಶ ದ್ರೋಹಿಗಳೆಂದು ಬಂಧಿಸಿ ಕಿರುಕುಳ ಕೊಡುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹಲ್ಲೆ ನಡೆಸಲಾಗುತ್ತಿದೆ. ಮಹಾತ್ಮ ಗಾಂಧೀಜಿ ಯನ್ನು ಕೊಂದವರನ್ನು ಆರಾದಿಸುವುದು, ನರೇಂದ್ರ ದಾಬೋಲ್ಕರ್, ಪನ್ಸಾರೆ, ಎಂ.ಎಂ.ಕಲ್ಬುರ್ಗಿ ಹಾಗೂ ಪತ್ರೆಕರ್ತೆ ಗೌರಿ ಲಂಕೇಶ್ ಕೊಲ್ಲಲ್ಪಟ್ಟಾಗ ವಿಜೃಂಭಣೆ ಆಚರಿಸಿದ ಶಕ್ತಿಗಳ ಬಗ್ಗೆ ಪ್ರಧಾನಿ ಮೌನವ್ರತ ಆಚರಿಸಿದ್ದು, ಇವರ ರಾಜಕೀಯ ಗುರು ಗಳಾದ ಆರ್.ಎಸ್.ಎಸ್. ಮತ್ತು ಸಂಘ ಪರಿವಾರದ ಕಾರ್ಯ ಸೂಚಿಯನ್ನು ಮತ್ತು "ಹಿಂದುತ್ವ" ರಾಷ್ಟ್ರೀಯತೆಯನ್ನು ಹೇರುವುದು, ದೇಶಭಕ್ತಿ ಎಂದರೆ ಭಾರತ್ ಮಾತಾಕೀ ಜೈ ಘೋಷಣೆಯನ್ನು ಕೂಗದೆ ಇರುವವರನ್ನು" ಮಾಬ್ ಲಿಂಚಿಂಗ್" ಮಾಡುವುದನ್ನು ಕಳೆದ ಐದು ವರ್ಷಗಳ ಇವರ ಆಡಳಿತದ ಅವಧಿಯಲ್ಲಿ ಕಂಡಿದ್ದೇವೆ.

ಬನ್ನಿ, ಭಾರತದಲ್ಲಿ ವ್ಯಾಪಿಸಿರುವ ಮನುವಾದಿ, ಈ ನಕಲಿ ದೇಶ ಭಕ್ತರ ಬಗ್ಗೆ ಜಾಗೃತಿ ಮೂಡಿಸೋಣ. ಅಸ್ಪೃಶ್ಯತೆ ಯನ್ನು ಆಚರಿಸುತ್ತಲೇ, ಸ್ತ್ರೀ ಯರಿಗೆ ಸಮಾನತೆಯನ್ನು ನಿರಾಕರಿಸಿ ಶಬರಿ ಮಲೆ ದೇವಸ್ಥಾನ ಪ್ರವೇಶಕ್ಕೆ ತಡೆ ಒಡ್ಡುತ್ತಿರುವ, ಬಡತನ, ಹಸಿವು ದಾರಿದ್ರ್ಯ, ನಿರುದ್ಯೋಗ, ಇಂತಹ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಗಮನಕೊಡದೆ 'ದೇಶಸೇವೆ' ಮಾಡುತ್ತೇವೆ ಎಂಬ ಅಬ್ಬರದ ನಕಲಿ ದೇಶಭಕ್ತರಾದ ಮನು ವಾದಿಗಳ ಬಗ್ಗೆ ಎಲ್ಲೆಡೆ ಅರಿವು ಮೂಡಿಸೋಣ. ಭಾರತವನ್ನು ಇಂತಹ ನಕಲಿ ದೇಶಭಕ್ತರಿಂದ ಮುಕ್ತ ಗೊಳಿಸೋಣ. ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿ ಗಳನ್ನು ಒಂದು ಗೂಡಿಸಿ, ಸಮತೆಯ ನಾಡಿನ ಉದಯಕ್ಕೆ ಮುಂದಾಗೋಣ.

ದೇಶದ ಐಕ್ಯತೆ ಮತ್ತು ಸಮಗ್ರತೆ"ಗೆ ಹಾಗೂ ನಮ್ಮ ಸಂವಿಧಾನದ ಆಶಯಗಳಾದ, ಪ್ರಜಾಪ್ರಭುತ್ವ, ಸಮಾನತೆ, ಸೋದರತ್ವ, ಸಾಮಾಜಿಕ ನ್ಯಾಯ ಹಾಗೂ ಜಾತ್ಯಾತಿತತೆ ಸ್ವರೂಪದ ಅಡಿಪಾಯ ಗಳಿಗೆ ಹಿಂದೆಂದಿಗಿಂತಲೂ ಹೆಚ್ಚು ಅಪಾಯ ಬಂದೊದಗಿದೆ.

ತೀರದುಃಖದ_ಸುದ್ದಿ



ತುಮಕೂರು ಜಿಲ್ಲೆಯ ಕೊರಟಗೆರೆ ಯ ನಮ್ಮಪ್ರೀತಿಯ ಸಂಗಾತಿ ನೌಶಾದ್ ಇನ್ನಿಲ್ಲ ಎನ್ನುವ ಆಘಾತಕಾರಿ ಹಾಗೂ ನಂಬಲಸಾಧ್ಯವಾದ ಸುದ್ದಿಯನ್ನು ಸಂಗಾತಿ ಮೀನಾಕ್ಷಿ ಸುಂದರಂ ಈಗಷ್ಟೇ ನೀಡಿದರು. ರೈತ ಸಂಘ ಹಾಗೂ ಸಿಪಿಎಂ ನಾಯಕರಾಗಿ ನೌಶಾದ್ ಕೊರಟಗೆರೆ ಯಲ್ಲಿ ಜನಪರ ಚಳವಳಿಗಳನ್ನು ಮುನ್ನಡೆಸುತ್ತಿದ್ದ ಸಂಗಾತಿಯಾಗಿದ್ದರು 13 ವರ್ಷದ ಮಗಳು ಹಾಗೂ ಪತ್ನಿ ಹಾಗೂ ಅಪಾರ ಬಂಧುಗಳು ಹಾಗೂ ಸಂಗಾತಿಗಳನ್ನು ನೌಶಾದ್ ಆಗಲಿದ್ದಾರೆ.

ಆಗಲಿದ ಸಂಗಾತಿಗೆ ದುಡಿಯುವ ವರ್ಗದ ಕ್ರಾಂತಿಕಾರಿ ಶ್ರದ್ಧಾಂಜಲಿ...

ಮೀನಾಕ್ಷೀ ಸುಂದರಂ ನಾನು ಈಗ ತುಮಕೂರಿನತ್ತ ಪಯಣ ಆರಂಭಿಸಿದ್ದೇವೆ. ●

ಈ ನಿಟ್ಟಿನಲ್ಲಿ "ದಲಿತ ಶೋಷಣ್ ಮುಕ್ತಿ ಮಂಚ್" ನೀಡಿರುವ ಕರೆಯ ಮೇರೆಗೆ ಮನುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಮುಂದಾಗೋಣ. ಮುಂಬರುವ ಮೇ 2019 ಲೋಕ ಸಭಾ ಚುನಾವಣೆಯ ಮಹಾ ಸಮರದಲ್ಲಿ, ಈ ಮನುವಾದಿ ಶಕ್ತಿಗಳನ್ನು ಸೋಲಿಸೋಣ. ಸಂವಿಧಾನ ಆಶಯಗಳಾದ ಜಾತ್ಯಾತೀತ–ಪ್ರಜಾಪ್ರಭುತ್ವ–ಗಣತಂತ್ರ ಭಾರತವನ್ನು ರಕ್ಷಿಸೋಣ. ●

ಹೋರಾಟವೊಂದೇ ಮುಂದಿರುವ ದಾರಿ........ ಪುಟ 9 ರಿಂದ

ದಶಕಗಳಲ್ಲಿ ಝಗಮಗಿಸುವ ವೈಭವೋಪೇತ ಮಾಲ್‌ಗಳು, ಥಳ ಥಳ ಹೊಳೆಯುವ ರಸ್ತೆಗಳು, ಮಿರಿ ಮಿರಿ ಮಿಂಚುವಕಾರುಗಳು, ಐಷಾರಾಮೀ ಹೋಟೆಲುಗಳು, ವಿಧ ವಿಧವಾದ ಗೃಹೋಪಯೋಗಿ ಸರಕುಗಳು, ಪ್ರತಿ ದಿನ ಹೊಸತೊಂದು ಬಗೆಯ ಉಡುಗೆ ತೊಡುಗೆ, ಕಣ್ ಮನ ಸೆಳೆಯುವ ಹಲವು ಅಲಂಕಾರಿಕ ಸಾಧನಗಳು ಒಂದಕ್ಕೆರಡು ನೀಡುವ ಆಮಿಷಗಳು ಹೀಗೆ ಕೊಳ್ಳುಬಾಕತನವನ್ನು ಜನರಿಗೆ ಅಂಟಿಸಲಾಯಿತು. ಅವೆಲ್ಲದರ ವಿಪರೀತ ಪರಿಣಾಮ ಈಗ ಕಣ್ಣಿಗೆ ರಾಚುತ್ತಿದೆ. ಥಳಥಳಿಸುವ ಮಾಲ್‌ಗಳಲ್ಲಿ ಬಹಳ ಜನರಿಗೆ ಉದ್ಯೋಗವಿದೆ ಎಂಬ ಅಭಿಪ್ರಾಯವನ್ನೂ ಮೂಡಿಸಲಾಗುತ್ತಿದೆ. ಹಾಗೆಯೇ ವಿದೇಶೀ ಬಂಡವಾಳಿಗರು ಪ್ರಾರಂಭಿಸಿದ ಬಹು ರಾಷ್ಟ್ರೀಯ ಕಂಪನಿಗಳು ಉತ್ತಮ ವೇತನ, ಅತ್ಯುತ್ತಮ ಸೌಲಭ್ಯ ಹಾಗೂ ಸುಂದರ ಬದುಕಿಗೆ ನೆರವಾಗುವ ಉದ್ಯೋಗಗಳ ಮೂಲಕ ಜನರಿಗೆ ಸಹಾಯವಾಗುತ್ತದೆ ಎಂಬಂತೆ ಬಿಂಬಿಸಲಾಯಿತು. ಆದರೆ ನಿಜವಾಸ್ತವದತ್ತ ಕಣ್ಣು ಹಾಯಿಸಿದರೆ ಸಿಗುವ ಉದಾಹರಣೆಗಳು . .

ಜಪಾನ್ ದೇಶದ ಕಂಪನಿಗಳ ಜೊತೆ ಭಾರತದ ಕಂಪನಿಗಳೂ ಸೇರಿ ನಡೆಸುತ್ತಿರುವ ಬಹುಕೋಟಿ ಬಂಡವಾಳದ ಟಿ.ಆರ್.ಎನ್ ಎಂ. ಹೆಸರಿನ ಕಂಪೆನಿ ಬೆಂಗಳೂರಿನ ಹೊರವಲಯದಲ್ಲಿದೆ. ಬಹುಪಾಲು ಐ.ಟಿ.ಐ, ಡಿಪ್ಲೊಮಾ ಮಾಡಿದ ಯುವಕ ಯುವತಿಯರು ಕೆಲಸ ಮಾಡುತ್ತಾರೆ. ಅವರೆಲ್ಲರೂ ರಾಜ್ಯದ ವಿವಿಧ ಜಿಲ್ಲೆಗಳ ಬಡ,ಮಧ್ಯಮ ವರ್ಗದ ಕುಟುಂಬದಿಂದ ಬಂದ ಹೆಣ್ಣುಮಕ್ಕಳು. ಹೆಸರಿಗೆ ಜಪಾನ್ ದೇಶದ ಕಂಪನಿ. ಅತ್ಯಂತ ಮುಂದುವರೆದ ರಾಷ್ಟ್ರ ತನ್ನ ನೆಲದಲ್ಲಿ. ಆದರೆ ಪರದೇಶದಲ್ಲಿ ಹೂಡಿದ ಬಂಡವಾಳಕ್ಕೆ ದುಡಿದು ತನಗೆ ಲಾಭ ಗಳಿಸಿ ಕೊಡುತ್ತಿರುವ ಕಾರ್ಮಿಕರಿಗೆ ಕನಿಷ್ಟ ಕೂಲಿಯೂ ಕೊಡದೆ, ಕನಿಷ್ಟ ಸೌಲಭ್ಯಗಳನ್ನೂ ನೀಡದೆ ಸತಾಯಿಸುವುದರಲ್ಲಿ ಯಾವ ಪ್ರಗತಿಪರತೆಯೂ ಕಾಣುತ್ತಿಲ್ಲ. ಗರ್ಭಿಣಿ ಕಾರ್ಮಿಕಳೂ ಕೂಡ ಪೂರಾ ಪೂರಾ ಎಂಟು ತಾಸು ಕ್ಷಣಗಳ ಲೆಖ್ಖಾಚಾರದಲ್ಲಿ ನಿಂತೇ ಕೆಲಸ ಮಾಡುವ ಒತ್ತಡ. ಮಾಸಿಕ ಋತುಸ್ರಾವದ ಸಮಯದಲ್ಲಿಯೂ ಕೂಡ ಹೆಣ್ಣು ಮಕ್ಕಳಿಗೆ ಕನಿಷ್ಟ ವ್ಯವಸ್ಥೆಗಳಿಲ್ಲ. ದೇಹದ ಬಾಧೆಯದು. ಋತುಸ್ರಾವ ಮುಟ್ಟಿನ ಆ ದಿನಗಳಲ್ಲಿ ಯಾವ ಹೊತ್ತಿಗೂ ಸಂಭವಿಸಬಹುದು. ಅಕಸ್ಮಾತ್ ಕೆಲಸದ ಮಧ್ಯೆ ತುರ್ತು ಬಂತೆಂದರೆ ಸೂಪರ್‌ವೈಸರ್ ಗಳಿಂದ ನೀನೇಕೆ ಈಗಲೇ ಆದಿ ಎಂದೂ ಕೇಳಿಸಿಕೊಳ್ಳುವ ಕರ್ಮವಂತೆ!! ನಂಬುತ್ತೀರಾ? ಹಾಗೆ ಕೇಳಿಯೂ ಐದೋ ಹತ್ತೋ ನಿಮಿಷದ ನಂತರವಷ್ಟೇ ಹೋಗುವ ಅವಕಾಶ ಸಿಗಬಹುದು!. ಕೆಲವೊಮ್ಮೆ ತೀರಾ ಅಗತ್ಯದಿಂದಾಗಿ ಜತೆ ಕಾರ್ಮಿಕರ ಸಹಕಾರದಿಂದ ಆಚೆ ಹೋದರೆ ಕ್ಷಮಾಪಣೆಯ ಪತ್ರ ಬರೆಯಿಸಿಕೊಂಡ ಉದಾಹರಣೆಗಳಿವೆ. ಬಾಯಾರಿಕೆಗೆ ನೀರು ಕುಡಿಯಲು ಪ್ರತಿ ಬೆಲ್ಟ್ ಬಳಿ ಇರುವ ಕರೆಘಂಟೆ ಬಾರಿಸಿ ಮೇಲ್ವಿಚಾರಕರು ಬಂದು ಅನುಮತಿ ಕೊಟ್ಟರಷ್ಟೇ ನೀರು ಕುಡಿಯುವ ಭಾಗ್ಯ. ಪ್ರತಿ ದಿನ ಮೂತ್ರ ವಿಸರ್ಜನೆ, ಬಾಯಾರಿಕೆಗಳಿಗೆ ವ್ಯಯಿಸಿದ ಅವಧಿ ಕ್ಷಣಗಳ ಲೆಖ್ಖದಲ್ಲಿ ಗಣಿಸಲ್ಪಡುತ್ತದೆ. ವಾರೆವ್ಹಾ ..ಪ್ರಗತಿಯೇ ಪ್ರಗತಿ.

ಆಟೋ ಮೊಬೈಲ್ ಬಿಡಿಬಾಗಗಳನ್ನು ಜೋಡಣೆ ಮಾಡುವ ಈ ಕಾರ್ಮಿಕರು ಅನುಭವಿಸುವ ನರಕ ಅಂದಿನ ಗಾರ್ಮೆಂಟ್ ಕಾರ್ಮಿಕರು ಅನುಭವಿಸಿದ ನರಕ ಎರಡೂ ಒಂದೇ ಎನ್ನುವಂತಿದೆ. ಕಿರಿದಾದ ಸಾಲುಗಳಲ್ಲಿ ನಿಂತು ಕೆಲಸ ಮಾಡುವ ಇವರು ನಾಲ್ಕು ಜನರ ಜಾಗದಲ್ಲಿ ಕುರಿಮಂದೆಯಂತೆ ಆರು ಎಂಟು ಜನ ನಿಂತು ಅತಿ ಸೂಕ್ಷ್ಮವಾದ ಬಿಡಿಬಾಗಗಳನ್ನು ಜೋಡಿಸಬೇಕು. ಹಾಗೆ ಮಾಡುವಾಗ ಕೂಡ ಯುವಕ ಯುವತಿಯರಿಗೆ ಪ್ರತ್ಯೇಕ ವ್ಯವಸ್ಥೆ ಇಲ್ಲ. ಒಬ್ಬರ ಜೊತೆ ಮತ್ತೊಬ್ಬರನ್ನು ತುರುಕಿ ಇಟ್ಟ ಕುರಿಮಂದೆಯ ಹಾಗೆ ನಿಂತು ಅತಿ ಸೂಕ್ಷ್ಮದ ಕೆಲ ನಿರ್ವಹಿಸಬೇಕು. ಹಲವು ರೀತಿಯ ಮುಜುಗರಗಳನ್ನು ಎದುರಿಸಬೇಕು. ಆರಂಭದಲ್ಲಿ ದೇಹತೂಕಕ್ಕೂ ಕೂಡ ಅಘೋಷಿತ ನಿಯಮವಿತ್ತು. ಹೆಣ್ಣು ಮಕ್ಕಳೂ ಕೂಡ ತುಮಕೂರಿನಲ್ಲಿಯೇ ವಾಸಿಸಬೇಕು ಎನ್ನುವ ಅಲಿಖಿತ ಶಾಸನವೂ ಇದೆ. ಕನಿಷ್ಟ ವೇತನವೂ ಇಲ್ಲದೇ,ಅಮಾನವೀಯ ದುಡಿಮೆಯ ಈ ಸ್ಥಿತಿಯಿಂದ ಹೊರಬರಲು ಕಂಡ ಉಪಾಯ ಅಂದು ನಮ್ಮ ಅಕ್ಕಂದಿರು ತೋರಿಸಿಕೊಟ್ಟ ಸಂಘಟನೆಯ ದಾರಿ. ಸಂಘ ಕಟ್ಟುವ ಸುಳಿವು ಸಿಕ್ಕ ಕೂಡಲೇ ಶುರುವಾಯಿತು ಕೆಲಸದಿಂದ ವಜಾ, ಮಾನಸಿಕ ಕಿರುಕುಳ ಕೊಟ್ಟು ತಾವೇ ಬಿಟ್ಟು ಹೋಗುವಂತೆ ಒತ್ತಡ ಹೀಗೆ. ಕೆಲಸ ಕಳೆದುಕೊಂಡವರ ಪರವಾಗಿ ಅವರೂ ಸೇರಿದಂತೆ ಹೋರಾಟ ನಡೆದರೆ 'ಆ'ರಕ್ಷಕರು ರಕ್ಷಣೆಗೆ ಬಂದಿದ್ದು ಜಪಾನೀ ಸಂಯೋಜಿತ ಮಾಲಿಕರ ಪರವಾಗಿ. ಹೆಣ್ಣುಮಕ್ಕಳ ಮೈಮೇಲೆ ಕೈ ಹಾಕಿ ಬಟ್ಟೆ ಹರಿಯುವ ವರೆಗೆ ಪುರುಷ ಪೋಲೀಸರು ದುರ್ವರ್ತನೆ ತೋರುತ್ತಾರೆ. ದೇಶದ ಸಂವಿಧಾನ ಕೊಟ್ಟ ಸಂಘ ಕಟ್ಟುವ ಹಕ್ಕನ್ನು ನಿರಾಕರಿಸಿ ಕಾನೂನು ಬಾಹಿರವಾಗಿ ಕೆಲಸದಿಂದ ತೆಗೆದುಹಾಕಿರುವುದನ್ನು ಪ್ರತಿಭಟಿಸಿ ಶಾಂತಿಯುತ ಹೋರಾಟ ನಡೆಸಲು ಹಾಕಿಕೊಂಡಿದ್ದ ಟೆಂಟ್ ನ್ನು ಬುಲ್ಡೋಜರ್ ತಂದು ಕಿತ್ತು ಹಾಕಿ ಪ್ರತಿಬಂಧಕಾಜ್ಞೆ ತರಲಾಗುತ್ತದೆ. ಈಗ ಹೊರಹಾಕಲ್ಪಟ್ಟ ಮಹಿಳೆಯರು ಕೈಯಲ್ಲೊಂದು ಕೊಡೆ ಹಿಡಿದು ಬೆಳಗಿನಿಂದ ಸಂಜೆಯವರೆಗೂ ಕಾದು ಕಾವಲಿಯಂತೆ ಸುಡುವ ಡಾಂಬರು ರಸ್ತೆಯ ಮೇಲೆ ನಿಂತಿರುತ್ತಾರೆ. ಕಂಪನಿಯ ಗೇಟಿನಲ್ಲಿ ಪೋಲೀಸರು ಮಾಲೀಕರ ರಕ್ಷಣೆಗೆ ಕಾವಲು ಕಾಯುತ್ತಾರೆ. ಆಳರಸರ ದೃಷ್ಟಿಗೆ ಇದು ಬೀಳುವುದಿಲ್ಲ, ಯಾಕೆಂದರೆ ಎಲ್ಲರೂ ಆಗಾಗ ಮ ಹಿಳೆಯರ ಪರವಾಗಿ ಕಣ್ಣೀರು ಹಾಕುತ್ತಾರಲ್ಲ ಹಾಗಾಗಿ ದೃಷ್ಟಿ ಸ್ವಲ್ಪ ಮಂಜಾಗಿಯೇ ಇರುತ್ತದೆ ಇಂಥಹ ಸಂಗತಿಗಳಿಗೆ.

ಇದು ಒಂದು ಕಂಪನಿಯ ಕಥೆಯಷ್ಟೇ. ಈ ಕಾಲಘಟ್ಟದಲ್ಲಿ ದುಡಿಯುವ ವರ್ಗ ಎದುರಿಸುತ್ತಿರುವ ಸಮಸ್ಯೆಗಳ ಮಹಾಪೂರದಲ್ಲಿ ಮಹಿಳೆಯರು ಕೊಚ್ಚಿ ಹೋಗುತ್ತಿದ್ದಾರೆ. ಗಾಯಕ್ಕೆ ಉಪ್ಪು ಸವರಿದಂತೆ ಚೌಕಿದಾರರಾಗಿ ಬಂದವರು ಮಜ 'ಬೂತು' ಪೋಷಾಕಿನಲ್ಲಿ ಮತ್ತೈದು ವರ್ಷಗಳಿಗೆ ಆಯ್ಕೆಯಾಗಿ ಬರಲು ಮತ್ತೇರಿಸಿಕೊಂಡು ಚೀರಾಡುತ್ತ ಕೂಗಾಡುತ್ತ, ವಿಶೇಷ ಮಕ್ಕಳೆಂದೂ ನೋಡದೇ ಗೇಲಿ ಮಾಡುತ್ತ, ದೇಶದ ಯುವಕರ ತಲೆಗೆ ಧರ್ಮದ, ಮತಾಂಧತೆಯ ಅಫೀಮು ತುಂಬಿಸಿ ಬೋಘರಾಕ್ ಹೇಳಿಸಿಕೊಳ್ಳುತ್ತ ಅಂತರಿಕ್ಷದಲ್ಲಿಯೇ ತೇಲಾಡಿಕೊಂಡು ಕಾಲ ಕಳೆಯುತ್ತಾರೆ. ವರ್ಷಕ್ಕೆ ಎರಡು ಕೋಟಿ ಉದ್ಯೋಗ ನೀಡುವ ಭರವಸೆಗೆ ಪ್ರತಿಯಾಗಿ ನಮ್ಮ ನಿರುದ್ಯೋಗಿ ಯುವಜನರಿಗೆ ಪಕೋಡ ಮಾರುವ ಸಲಹೆ ನೀಡುತ್ತಾರೆ. ರಾಮನ ಭಜನೆ ಕಲಿಸಿ ದೇವಾಲಯಕ್ಕಾಗಿ ಪ್ರಲಾಪಿಸುವಂತೆ ಸೂಚನೆ ನೀಡುತ್ತಾರೆ. ಮತ್ತು ಇನ್ನೈದು ವರ್ಷಕ್ಕೆ ಮತ್ತೊಂದು ಜನಾದೇಶ ಪಡೆಯಲು ಸುಂಟರಗಾಳಿಯಂತೆ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ನಾವೇ ಕಟ್ಟಿದ ತೆರಿಗೆ ಹಣವನ್ನು ಯಾವುದೇ ಎಗ್ಗು ಸಿಗ್ಗಿಲ್ಲದೇ ಧಾಂ ಧೂಂ ಎಂದು ಧೂಳೆಬ್ಬಿಸಿ ಮೆರೆಯುತ್ತಾರೆ. ಅಲ್ಲಿ ಮೂಲೆಯಲ್ಲಿ ಯೋಧ ಗುರುವಿನ ಹೆಂಡತಿ,ಅಮ್ಮ ಅಪ್ಪ ಮೌನವಾಗಿ ನಂದಿದ ತಮ್ಮ ಮನೆಯ ಬೆಳಕನ್ನು ನೆನೆದು ಕಣ್ಣೀರು ಹಾಕುತ್ತಾರೆ. ಭಕ್ತರು ವೀರಾವೇಷದ ದೇಶಪ್ರೇಮದ ಸ್ಟೇಟಸ್ ಹಾಕಿಕೊಂಡು ಸಾಮಾಜಿಕ ಮಾಧ್ಯಮದಲ್ಲಿಯೇ ಯುದ್ಧ ಮಾಡಿ ಮುಗಿಸುತ್ತಾರೆ.

ಕಾಲಚಕ್ರ ಹಿಮ್ಮುಖವಾಗಿ ತಿರುಗುತ್ತಿದೆ. ತಿರುಗುತ್ತ ತಿರುಗುತ್ತ ಹೋಗಿ ಸೇರಬೇಕು ಆ ವೀರ ಸಂಗಾತಿಗಳ ಸಮರಧೀರ ಹೋರಾಟದತ್ತ. ಬಂಡವಾಳದ, ಅತಿ ಆಸೆಯ ಲಾಭಕೋರತನಕ್ಕೆ, ಅದಕ್ಕೆ ನೀರೆರೆದು ಪೋಷಿಸುವ ಕೋಮುವಾದಕ್ಕೆ ಸವಾಲೆಸೆದು ಸೋಲಿಸಿ ನಾವು ಜಯಶೀಲರಾಗುವುದೇ ಮಾರ್ಚ 8 ನ್ನು ಚಿರಸ್ಥಾಯಿಯಾಗಿ ಉಳಿಸಿದ ಆ ನಮ್ಮ ತಾಯಂದಿರಿಗೆ ನಾವು ನೀಡುವ ಗೌರವ. ಅದೇ ನಮ್ಮ ಗುರಿ. ಏಳಿ ಎದ್ದೇಳಿ ಗುರಿ ಮುಟ್ಟುವ ವರಗೆ ನಿಲ್ಲದಿರಿ. ●

"ರಕ್ಷಣಾ ಇಲಾಖೆಯ ದಸ್ತಾವೇಜುಗಳನ್ನು ಕಾಯ್ದುಕೊಳ್ಳಲಾರದ ಸರಕಾರ ದೇಶವನ್ನು ರಕ್ಷಿಸಬಲ್ಲುದೇ?"

ಇದೀಗ ಪ್ರತಿಪಕ್ಷಗಳ ಮುಖಂಡರು ಮಾತ್ರವಲ್ಲ, ಹಲವರು ಕೇಳುತ್ತಿರುವ ಪ್ರಶ್ನೆ.

ದೇಶದ ಸರ್ವೋಚ್ಚ ನ್ಯಾಯಾಲಯ ರಫೇಲ್ ವ್ಯವಹಾರವನ್ನು ಕುರಿತ ತನ್ನ ತೀರ್ಪಿನ ಮರು ಪರಾಮರ್ಶೆ ನಡೆಸಬೇಕು ಎಂದು ಕೋರಿರುವ ಅರ್ಜಿಗಳ ವಿಚಾರಣೆಯನ್ನು ಮಾರ್ಚ್ 6 ರಂದು ಕೈಗೆತ್ತಿಕೊಂಡಾಗ ಅವನ್ನು ವಜಾ ಮಾಡಬೇಕು ಎಂದು ಕೋರುತ್ತ ದೇಶದ ಅಟಾರ್ನಿ ಜನರಲ್, ಅಂದರೆ ಕೇಂದ್ರ ಸರಕಾರವನ್ನು ಪ್ರತಿನಿಧಿಸುವ ಸರ್ವೋಚ್ಚ ನ್ಯಾಯಾಧಿಕಾರಿಗಳು, ಇದಕ್ಕೆ ಕೊಟ್ಟ ಕಾರಣ ರಫೇಲ್ ವ್ಯವಹಾರ ಕುರಿತ ದಸ್ತಾವೇಜುಗಳ ಕಳ್ಳತನ ಮಾಡಲಾಗಿದೆ, ಈ ಮರು ಪರಾಮರ್ಶೆ ಅರ್ಜಿಗಳು ಅಂತಹ ಕಳುವಾದ ದಸ್ತಾವೇಜುಗಳನ್ನು ಆಧರಿಸಿವೆ, ಇಲ್ಲಿ ಅಧಿಕೃತ ರಹಸ್ಯಗಳ ಕಾಯ್ದೆಯ ಉಲ್ಲಂಘನೆಯಾಗಿದ್ದು ಸರಕಾರ ಸಂಬಂಧಪಟ್ಟವರ ಮೇಲೆ ಕ್ರಿಮಿನಲ್ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಯೋಚಿಸುತ್ತಿದೆ, ಆದ್ದರಿಂದ ನ್ಯಾಯಾಲಯ ಇಂತವರ ಅರ್ಜಿಗಳನ್ನು ವಜಾ ಮಾಡಬೇಕು ಎಂದು.

ಈ ವ್ಯವಹಾರದಲ್ಲಿ ಒಂದೊಂದಾಗಿ ಬಯಲಾಗುತ್ತಿರುವ ಸಂಗತಿಗಳಿಂದ ಸರಕಾರಕ್ಕೆ ಆಗುವ ಮುಜುಗರವನ್ನು ನಿವಾರಿಸಲು ಈ ತರ್ಕವೇ ಅತ್ಯುತ್ತಮ ಎಂದು ಬಹುಶಃ ಸರಕಾರವನ್ನು ಪ್ರತಿನಿಧಿಸುವ ಈ ಸರ್ವೋಚ್ಚ ನ್ಯಾಯವಾದಿಗಳಿಗೆ ಅನಿಸಿರಬೇಕು. ಆದರೆ ಅದರ ತದ್ವಿರುದ್ಧ ಪರಿಣಾಮ ಆಗುತ್ತಿರುವಂತೆ ಕಾಣುತ್ತದೆ.

ನ್ಯಾಯಾಲಯದಲ್ಲೇ ನ್ಯಾಯಪೀಠದಲ್ಲಿದ್ದ ನ್ಯಾಯ ಮೂರ್ತಿಗಳೇ ಈ ತರ್ಕವನ್ನು ಪ್ರಶ್ನಿಸಿದರು.

ನ್ಯಾಯಾಲಯದ ಹೊರಗಂತೂ ಇಂತಹ ಅಭೂತಪೂರ್ವ ತರ್ಕದ ಪರಿಣಾಮವಾಗಿಯೇ ಸರಕಾರದ ಮುಜುಗರ ಕಡಿಮೆಯಾಗುವ ಬದಲು ಅದು ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತಿರುವಂತೆ ಕಾಣುತ್ತಿದೆ. ಬಾಲಕೋಟ್‌ನ ವಾಯು ಪ್ರಹಾರ ರಫೇಲನ್ನು ಮುಚ್ಚಿ ಹಾಕಬಹುದೆಂಬ ಹಲವರ ಭೀತಿಯನ್ನೂ ಹೋಗಲಾಡಿಸುವಂತೆ ಕಾಣುತ್ತಿದೆ.

"ಈಗ ಮೋದಿ ಸರಕಾರವೇ ರಫೇಲ್ ದಸ್ತಾವೇಜುಗಳು 'ಕಳವಾಗಿವೆ' ಎಂದು ಒಪ್ಪಿಕೊಂಡಿದೆ. ಇಂತಹ ಸರಕಾರಕ್ಕೆ ದೇಶದ ಭದ್ರತೆಯನ್ನು ಒಪ್ಪಿಸಲು ಸಾಧ್ಯವೇ? ಆದರೆ ಈ ಮೂಲಕ ಅವರು ಈ ದಸ್ತಾವೇಜುಗಳನ್ನು ದೃಢಪಡಿಸಿದ್ದಕ್ಕೆ ಧನ್ಯವಾದಗಳು. ಮೋದಿಯವರ ವಿರುದ್ಧ ಎಫ್‌ಐಆರ್ ಹಾಕದಿರಲು ಈಗ ಸಾಧ್ಯವಿಲ್ಲ" ಎಂದು ಈ ಬಗ್ಗೆ ಟ್ವೀಟ್ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್

"ಸುಪ್ರಿಂ ಕೋರ್ಟಿನಲ್ಲಿನ ಕಲಾಪಗಳು ರಫೇಲ್ ವ್ಯವಹಾರದಲ್ಲಿ ಅಗಾಧ ಭ್ರಷ್ಟಾಚಾರ ಇದೆ ಎಂದು ನಮಗೆ ಹೇಳುತ್ತಿವೆ. ಮತ್ತು ಮೋದಿ ಸರಕಾರ ಪತ್ರಕರ್ತರನ್ನು ಬೆದರಿಸಿ ಹೇಗಾದರೂ ಇದನ್ನು ಮುಚ್ಚಿ ಹಾಕಲು ಒದ್ದಾಡುತ್ತಿದೆ. ಇದೀಗ ಸಾರ್ವಜನಿಕ ಸೇವೆ ಮತ್ತು ಖಾಸಗಿ ಭ್ರಷಾಚಾರದ ನಡುವಿನ ಸಮರ" ಎಂದೂ ಅವರು ಹೇಳಿದ್ದಾರೆ.

ರಫೆಲ್ ಯುದ್ಧ ವಿಮಾನಗಳು ಪಾಕಿಸ್ತಾನದ ಎಫ್-16 ವಿಮಾನಗಳನ್ನು ಎದುರಿಸಲು ತುರ್ತಾಗಿ ಬೇಕಾಗಿತ್ತು ಎನ್ನುವಾಗ ಸರಕಾರೀ ನ್ಯಾಯವಾದಿಗಳು, ಬಹುಶ: ಈ ವ್ಯವಹಾರಲ್ಲಿ ಇರಬಹುದಾದ 'ಅವ್ಯವಹಾರ'ಗಳನ್ನು ಉಪೇಕ್ಷಿಸಬೇಕು ಎಂದು ಸೂಚಿಸುತ್ತಿದ್ದರೋ ಏನೋ . ಈ ಬಗ್ಗೆ ಟಿಪ್ಪಣಿ ಮಾಡುತ್ತ ಯೆಚುರಿಯವರು "ಅಟಾರ್ನಿ ಜನರಲ್ ಮೋದಿ ಸರಕಾರದ 'ಪರವಾಗಿ ಮಾತಾಡುತ್ತಿದ್ದಾರೆ. ಹಾಗಿದ್ದರೆ, ಭಾರತೀಯ ವಾಯು ಪಡೆ ಸದ್ಯಕ್ಕೆ ಭಾರತವನ್ನು ರಕ್ಷಿಸುವಲ್ಲಿ ಅಮರ್ಥವಾಗಿದೆ ಎಂಬುದು ಮೋದಿ ಸರಕರದ ನಿಲುವು ಎಂದಂತಾಯಿತು. ಇದು ಭಾರತೀಯ ವಾಯು ಪಡೆಯ ಮುಖ್ಯಸ್ಥರ ಹೇಳಿಕೆಗೆ ತದ್ವಿರುದ್ಧವಾಗಿದೆ. ಈ ಸರಕಾರ ಏಕೆ ಸತತವಾಗಿ ನಮ್ಮ ಧೀರ ಸೈನಿಕರ ಬಗ್ಗೆ ಅಪನಂಬಿಕೆ ತೋರಿಸುತ್ತಿದೆ ಮತ್ತು ಅವಮಾನ ಮಾಡುತ್ತಿದೆ?" ಎಂದು ಪ್ರಶ್ನಿಸಿದ್ದಾರೆ.

"ರ್ನಿ ಜನರಲ್ ಕಡತಗಳು ಕಳವಾಗಿವೆ ಎಂದು ಸರ್ವೋಚ್ಚ ನ್ಯಾಯಾಲಯಕ್ಕೆ ಹೇಳುತ್ತಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ . ಚೌಕೀದಾರ ಕಡತಗಳನ್ನು ರಕ್ಷಿಸಲೂ ಅಸಮರ್ಥರೇ? ತಮಗೆ ಬೇಕಾದಾಗ ಅವರು ಮೂಲಗಳನ್ನು ಪ್ರಶ್ನಿಸಬಾರದು ಎನ್ನುತ್ತಾರೆ. ನೀವು ಸಂದೇಶವಾಹಕರ ಮೇಲೆ ದಾಳಿ ಮಾಡುತ್ತಿದ್ದೀರ, ಸಂದೇಶದ ಬಗ್ಗ ಏನು ಹೇಳುತ್ತೀರ? ಪ್ರಧಾನ ಮಂತ್ರಿಗಳು ಈ ಬಗ್ಗೆ ಸಾರ್ವಜನಿಕವಾಗಿ ಸ್ಪಂದಿಸುತ್ತಿಲ್ಲವೇಕೆ?" ಎಂದು ಸಿಪಿಐ ನ ಹಿರಿಯ ಮುಖಂಡ ಡಿ.ರಾಜ ಪ್ರಶ್ನಿಸಿದ್ದಾರೆ.

ಸರಕಾರಕ್ಕೆ, ಅದರಿಂದಾಗಿ ಅಟಾರ್ನಿ ಜನರಲ್‌ರವರಿಗೆ ತೀವ್ರ ಮುಜುಗರ ಉಂಟು ಮಾಡಿರುವ ತನಿಖಾ ವರದಿಗಳನ್ನು ಪ್ರಕಟಿಸಿದ 'ದಿ ಹಿಂದು' ಪತ್ರಿಕಾ ಗುಂಪಿನ ಅಧ್ಯಕ್ಷರೂ, ಖ್ಯಾತ ಪತ್ರಕರ್ತರೂ ಆಗಿರುವ ಎನ್. ರಾಮ್ ಅಟಾರ್ನಿ ಜನರಲ್ ಹೇಳಿರುವ 'ಕಳವು' ಮತ್ತು ಅಧಿಕೃತ ರಹಸ್ಯ ಕಾಯ್ದೆಯ ಉಲ್ಲಂಘನೆಯ ಕ್ರಿಮಿನಲ್ ಅಪರಾಧ ಎಂಬ ಮಾತುಗಳ ಬಲವಾಗಿ ಪ್ರತಿಕ್ರಿಯಿಸುತ್ತ "ನಾವು ಈ ದಸ್ತಾವೇಜುಗಳನ್ನು ರಕ್ಷಣಾ ಮಂತ್ರಾಲಯದಿಂದ ಕದ್ದಿಲ್ಲ. ನಾವು ಅದನ್ನು ಗುಪ್ತ ಮೂಲಗಳ ಮೂಲಕ ಪಡೆದಿದ್ದೇವೆ. ಆ ಮೂಲ ಯಾವುದು ಎಂದು ನಾನಾಗಲೀ, ನಾವಾಗಲೀ ಪ್ರಕಟಪಡಿಸುವಂತೆ ಬಲವಂತ ಮಾಡಲು ಈ ಭೂಮಿಯ ಮೇಲೆ ಯಾರಿಗೂ ಸಾಧ್ಯವಿಲ್ಲ. ಯಾಕಂದರೆ ನಾವು ಮಾತು ಕೊಟ್ಟಿದ್ದೇವೆ" ಎಂದು ಹೇಳಿದ್ದಾರೆ. "ಎರಡನೆಯದಾಗಿ, ನಾವು ಈ ಮಾಹಿತಿಗಳನ್ನು ತನಿಖಾ ಪತ್ರಕಾರಿತೆಯ ಮೂಲಕ ಸಾರ್ವಜನಿಕ ಹಿತದೃಷ್ಟಿಯಿಂದ, ಸಂಸತ್ತಿನಲ್ಲಿ ಮತ್ತೆ ಮತ್ತೆ ಕೇಳಿದರೂ ನಿರಾಕರಿಸಿದ ಅಥವ ಮುಚ್ಚಿಟ್ಟ ಮಹತ್ವದ ಮಾಹಿತಿಗಳನ್ನು ಪಡೆದಿದ್ದೇವೆ. ಮೂರನೆಯದಾಗಿ, ನಾವು 'ದಸ್ತಾವೇಜುಗಳನ್ನು ಕದ್ದಿದ್ದೇವೆ' ಎಂಬ ಆರೋಪದ ಅನಪೇಕ್ಷಿತ ಪರಿಣಾಮವೆಂದರೆ, ಸರಕಾರವೇ ಈ ಮಾಹಿತಿಯ ಸಾಚಾತನವನ್ನು ದೃಢಪಡಿಸಿದಂತಾಗಿದೆ; ಇದೇ ನಿಜವಾದ ಸಂಗತಿ, ನಿಜವಾದ ವ್ಯವಹಾರ ಎಂಬುದಕ್ಕೆ ಇನ್ನೇನೂ ಸಾಕ್ಷ್ಯ ಬೇಕಿಲ್ಲ" ಎಂದು ಹೇಳಿರುವ ಅವರು "ನಾವು ಸಂವಿಧಾನದ ಕಲಮು 19(1)ಎ ಅಡಿಯಲ್ಲಿ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲ ಭೂತ ಹಕ್ಕುಗಳ ಅಡಿಯಲ್ಲಿ, ಮತ್ತು ಮಾಹಿತಿ ಹಕ್ಕಿನ ಕಾಯ್ದೆಯ 8(1) (1) ಮತ್ತು 8(2)ರ ಅಡಿಯಲ್ಲಿ ಸಂಪೂರ್ಣವಾಗಿ ರಕ್ಷಣೆ ಹೊಂದಿದ್ದೇವೆ" ಎಂದು ಈ ಸರಕಾರದ ಸರ್ವೋಚ್ಚ ನ್ಯಾಯಪಂಡಿತನ ಗಮನಕ್ಕೆ ತಂದಿದ್ದಾರೆ.

ಈ ಸರಕಾರ ಯಾವ ಕಾಯ್ದೆಯ ಅಡಿಯಲ್ಲಿ ಕ್ರಿಮಿನಲ್ ಕ್ರಮವನ್ನು ಕೈಗೊಳ್ಳುವ ಯೋಚನೆ ಮಡುತ್ತಿದೆಯೋ, ಆ 1923ರ ಅಧಿಕೃತ ರಹಸ್ಯಗಳ ಕಾಯ್ದೆಯನ್ನು ಸ್ವತಂತ್ರ ಭಾರತದಲ್ಲಿ ಬಳಸಿರುವುದು ಬಹಳ ಅಪರೂಪ, ಈ ವಸಾಹತುಶಾಹೀ ಆಳ್ವಿಕೆಯ ಪ್ರಜಾಪ್ರಭುತ್ವ-ವಿರೋಧಿ ದುಷ್ಟ ಶಾಸನವನ್ನೇ ರದ್ದು ಮಾಡಬೇಕಿದೆ ಎಂದು ರಾಮ್ ಹೇಳಿದ್ದಾರೆ.

'ದಿವ್ಯಾಂಗ'ರು ಎಂದ ಪ್ರಧಾನಿಗಳಿಂದಲೇ ಅಗೌರವಪೂರ್ಣ, ಸಂವೇದನಾಶೂನ್ಯ ಟಿಪ್ಪಣಿ- ರಾಷ್ಟ್ರೀಯ ವಿಕಲಾಂಗರ ಹಕ್ಕುಗಳ ವೇದಿಕೆ ಖಂಡನೆ


ಪ್ರಧಾನ ಮಂತ್ರಿಗಳು ರೂರ್ಕಿಯ ಐ.ಐ.ಟಿ.ಏರ್ಪಡಿಸಿದ್ದ ವಿದ್ಯಾರ್ಥಿಗಳೊಂದಿನ ಒಂದು ಸಂವಾದದ ಸಂದರ್ಭದಲ್ಲಿ ಅಗೌರವಕಾರೀ ಮತ್ತು ಸಂವೇದನಾಶೂನ್ಯ ಟಿಪ್ಪಣಿಗಳನ್ನು ಮಾಡಿದ್ದಾರೆ, ಇದನ್ನು ಖಂಡಿಸುತ್ತ, ಈ ಬಗ್ಗೆ ಅವರು ಕ್ಷಮೆಯನ್ನಾದರೂ ಕೋರಬೇಕಾಗಿದೆ ಎಂದು ರಾಷ್ಟ್ರೀಯ ವಿಕಲಾಂಗರ' ಹಕ್ಕುಗಳ ವೇದಿಕೆ(ಎನ್.ಪಿ.ಆರ್.ಡಿ.) ಹೇಳಿದೆ.

ಮಾರ್ಚ್ 2ರಂದು ರೂರ್ಕಿಯಲ್ಲಿ ಐ.ಐ.ಟಿ.(ಭಾರತೀಯ ತಂತ್ರಜ್ಞಾನ ಸಂಸ್ಥೆ) 'ಸ್ಮಾರ್ಟ್ ಇಂಡಿಯ ಹ್ಯಾಕಥಾನ್ 2019 ಎಂಬ ಸಮಾರಂಭದಲ್ಲಿ ಪ್ರಧಾನ ಮಂತ್ರಿಗಳೊಂದಿಗೆ ವಿದ್ಯಾರ್ಥಿಗಳ ಸಂವಾದವನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ವಿದ್ಯಾರ್ಥಿಯೊಬ್ಬರು ಕೇಳಿದ ಪ್ರಶ್ನೆಯನ್ನು ಉತ್ತರಿಸುವ ಬದಲು, ಅದನ್ನು ತಮ್ಮ ರಾಜಕೀಯ ಪ್ರತಿಸ್ಪರ್ಧಿಗಳನ್ನು ಗೇಲಿ ಮಾಡಲು ಬಳಸಿಕೊಳ್ಳುವ ಭರದಲ್ಲಿ ಡಿಸ್ಲೆಕ್ಸಿಅ(ಪದಕುರುಡುತನ) ಎಂಬ ವಿಕಲತೆಯಿರುವ ಎಲ್ಲರನ್ನೂ ಕೆಟ್ಟದಾಗಿ ಚಿತ್ರಿಸುವಂತಹ ಟಿಪ್ಪಣಿಯನ್ನು ಮಾಡಿದರು. ಒಂದು ಉನ್ನತ ಹುದ್ದೆಯನ್ನು ಅಲಂಕರಿಸುವ ವ್ಯಕ್ತಿಯೊಬ್ಬರಿಂದ ಇಂತಹ ಟಿಪ್ಪಣಿ ಇನ್ನಷ್ಟು ಅಕ್ಷಮ್ಯ ಎಂದು ಎನ್.ಪಿ.ಆರ್.ಡಿ. ಹೇಳಿದೆ.

ಅಲ್ಲದೆ ಈ ಹಿಂದೆ ಅಂಗವಿಕಲತೆಯನ್ನು ದೈವತ್ವದೊಂದಿಗೆ ಸಮೀಕರಿಸುತ್ತ 'ದಿವ್ಯಾಂಗ' ಎಂಬ ಒಂದು ಪದವನ್ನೇ ಸೃಷ್ಟಿಸಿದ್ದ ಒಬ್ಬ ವ್ಯಕ್ತಿಯಿಂದಲೇ ಇಂತಹ ಟಿಪ್ಪಣಿ ಬಂದಿರುವುದು ಅತ್ಯಂತ ಜುಗುಪ್ಸೆ ಉಂಟುಮಾಡುವ ಸಂಗತಿ. 2014ರ ಲೋಕಸಭಾ ಚುನಾವಣಾ ಪ್ರಚಾರದ ಸಮಯದಲ್ಲೂ ನರೇಂದ್ರ ಮೋದಿಯವರು ತಮ್ಮ ಪ್ರತಿಸ್ಪರ್ಧಿಗಳನ್ನು ಹೀಗಳೆಯಲು ಕುರುಡ, ಕಿವುಡ, ಕುಂಟ ಮುಂತಾದ ಪದಗಳನ್ನು ಬಳಸಿದ್ದರು. ಇದು ಸಂಪೂರ್ಣ ಪ್ರತಿಗಾಮಿ ಮನೋಭಾವವನ್ನು ಬಿಂಬಿಸುತ್ತದೆ ಎಂದು ಎನ್.ಪಿ.ಆರ್.ಡಿ. ಖೇದ ವ್ಯಕ್ತಪಡಿಸಿದೆ.

ಅವರ ಕೆಲವು ರಾಜಕೀಯ ಪ್ರತಿಸ್ಪರ್ಧಿಗಳೂ ಇಂತಹುದೇ ಪ್ರವೃತ್ತಿಯನ್ನು ಪ್ರದರ್ಶಿಸಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿಯವರು ಪ್ರಧಾನ ಮಂತ್ರಿಗಳನ್ನು 'ಸ್ಕಿಟ್ಸಫ್ರೆನಿಕ್'(ಛಿದ್ರಮನಸ್ಕ) ಎಂದು ಕರೆದು ಬಹಳ ಸಮಯವೇನೂ ಆಗಿಲ್ಲ. ಇನ್ನೂ ಹಲವಾರು ರಾಜಕೀಯ ಮುಖಂಡರುಗಳು ಇಂತಹುದೇ ಪ್ರವೃತ್ತಿಯನ್ನು ಪ್ರದರ್ಶಿಸಿದ್ದಾರೆ ಎಂದೂ ಎನ್.ಪಿ.ಆರ್.ಡಿ. ಗಮನಿಸಿದೆ.

ಪ್ರಧಾನ ಮಂತ್ರಿಗಳು ಯಾವುದೇ ಸಂದರ್ಭದಲ್ಲೂ ಇಂತಹ ಟಿಪ್ಪಣಿಯನ್ನು ಮಾಡಬಾರದಾಗಿತ್ತು. ಇದು ವಿಕಲತೆಗಳಿರುವ ವ್ಯಕ್ತಿಗಳ ಹಕ್ಕುಗಳ ಕಾಯ್ದೆ, 2016 ರ ಬಗ್ಗೆ ತುಸುವಾದರೂ ಗೌರವ ಇಲ್ಲದಿರುವುದನ್ನೂ ಪ್ರದರ್ಶಿಸಿದೆ. ಏಕೆಂದರೆ ಈ ಕಾಯ್ದೆಯ ಅಡಿಯಲ್ಲಿ ಇಂತಹ ಟಿಪ್ಪಣಿ ಒಂದು ಅಪರಾಧವೆನಿಸುತ್ತದೆ. ಪ್ರಧಾನ ಮಂತ್ರಿಗಳು ಈಗ ಮಾಡಬಹುದಾದ ಕನಿಷ್ಟ ಸಂಗತಿಯೆಂದರೆ ತಮ್ಮ ಟಿಪ್ಪಣಿಗಳಿಗಾಗಿ ಕ್ಷಮೆಯನ್ನಾದರೂ ಕೋರುವುದು ಎಂದು ಎನ್.ಪಿ.ಆರ್.ಡಿ. ಹೇಳಿದೆ.





ಇದೇ ತಮ್ಮ ಸಂಸ್ಕಾರವೇ?-ವ್ಯಾಪಕ ಟೀಕೆ:

ಮೇಲೆ ಹೇಳಿದ ಸಂವಾದದಲ್ಲಿ ದೆಹ್ರಾದೂನಿನ 'ಪೆಟ್ರೋಲಿಯಂ ಮತ್ತು ಊರ್ಜಾ ಅಧ್ಯಯನಗಳ ವಿಶ್ವವಿದ್ಯಾಲಯ'(ಯುಪಿಇಎಸ್)ದ ವಿದ್ಯಾರ್ಥಿನಿಯೊಬ್ಬರು ತಮ್ಮ ಒಂದು ಪ್ರಾಜೆಕ್ಟ್ ಬಗ್ಗೆ ಹೇಳುತ್ತ ಇದು ಡಿಸ್ಲೆಕ್ಸಿಅ ಬಾಧೆಯಿರುವ ಮಕ್ಕಳು ಕಲಿಕೆಯ ಸಮಸ್ಯೆಗಳನ್ನು ಎದುರಿಸುತ್ತಿದ್ದರೂ ಅವರು ಸೃಜನಶೀಲರಾಗಿರುತ್ತಾರೆ ಎಂಬ ವಿಚಾರದ ಮೇಲೆ ಆಧರಿಸಿದೆ ಎಂದರು. ಆಗ ಪ್ರಧಾನಿಗಳು ಆ ಪ್ರಾಜೆಕ್ಟ್ ಬಗ್ಗೆ ಕೇಳುವ ಗೋಜಿಗೇ ಹೋಗದೆ, ವ್ಯಂಗ್ಯವಾಗಿ ಇದು 40-50ವರ್ಷದ ಮಕ್ಕಳಿಗೂ ನೆರವಾಗುತ್ತದೆಯೇ ಎಂದು ನಗೆಯಾಡಿದರು. ವಿದ್ಯಾರ್ಥಿನಿ ಹೌದು ಎಂದರು. ಪ್ರಧಾನಿಗಳು ಅಲ್ಲಿಗೇ ನಿಲ್ಲದೆ "ಹಾಗಿದ್ದರೆ ಇಂತಹ ಮಕ್ಕಳ ತಾಯಂದಿರಿಗೂ ಬಹಳ: ಸಂತೋಷವಾಗುತ್ತದೆ" ಎಂದು ಮತ್ತೆ ನಗೆಯಾಡಿದರು.

ನೆರೆದಿದ್ದ ವಿದ್ಯಾರ್ಥಿಗಳು ಚಪ್ಪಾಳೆ ಕುಟ್ಟಿದರು. ಆದರೆ ಇದಕ್ಕೆ ಸಾಮಾಜಿಕ ಮಾಧ್ಯಮಗಳಲ್ಲಿ ಚಪ್ಪಾಳೆಗಳಿಗಿಂತ ಹೆಚ್ಚಾಗಿ ಜುಗುಪ್ಸೆಯೇ ವ್ಯಕ್ತವಾಗಿದೆ.

ಇದರಲ್ಲಿ ವ್ಯಂಗ್ಯವಾಡುವಂತದ್ದೇನಿದೆ ಎಂದು ಒಬ್ಬರು ಕೇಳಿದರೆ, **ಅತ್ಯಂತ ದೊಡ್ಡ ಪ್ರಜಾಪ್ರಭುತ್ವದ ಪ್ರಧಾನ ಮಂತ್ರಿಗಳಿಂದ ಇಂತಹ ಮಾತು ನಾಚಿಕೆಗೇಡಿನ ಸಂಗತಿ** ಎಂದು ಇನ್ನೊಬ್ಬರು ಹೇಳಿದ್ದಾರೆ. **ತನ್ನ ರಾಜಕೀಯ ಪ್ರತಿಸ್ಪರ್ಧಿಯನ್ನು ಟೀಕೆಗೆ ಗುರಿಪಡಿಸಲು ಡಿಸ್ಲೆಕ್ಸಿಯಾ ಬಾಧಿತರ ಬಗ್ಗೆ ಗೇಲಿ ಮಾಡುವ ಮಟ್ಟಕ್ಕೆ ಒಬ್ಬ ಪ್ರಧಾನಿ ಇಳಿದಿರುವುದು ಸಂವೇದನಾಶೂನ್ಯತೆಯನ್ನು ಮತ್ತು ನಾಚಿಕೆಗೇಡಿತನವನ್ನು ಅತ್ಯಂತ ಕೆಳ ಮಟ್ಟಕ್ಕೆ ಇಳಿಸಿದೆ** ಎಂದು ಮತ್ತೊಬ್ಬರು ಖೇದ ವ್ಯಕ್ತಪಡಿಸಿದ್ದಾರೆ.


ಅವರ ಇಂತಹ ಸಂವೇದನಾಶೂನ್ಯ ಗೇಲಿಗೆ ಚಪ್ಪಾಳೆ ತಟ್ಟಿದ ನಮ್ಮ ದೇಶದ ಭವಿಷ್ಯದ ಎಂಜಿನಿಯರುಗಳಾದರೂ ಎಂತವರು ಎಂದು ದೇಶದಲ್ಲಿ ಈಗ ಹರಡಲಾಗುತ್ತಿರುವ ಮನೋಭಾವದ ಬಗ್ಗೆ ಇನ್ನು ಕೆಲವರು ವೇದನೆ ವ್ಯಕ್ತಪಡಿಸಿದ್ದಾರೆ.

" ಅತ್ಯಂತ ನಾಚಿಕಗೇಡು ಮತ್ತು ವೇದನಾಕಾರಿ. ನಮ್ಮಲ್ಲಿ ಕೆಲವರಿಗೆ ಡಿಸ್ಲೆಕ್ಸಿಅ ಸಮಸ್ಯೆಯಿರುವ ಸಂಬಂಧಿಗಳು, ಗೆಳೆಯರು, ಮಕ್ಕಳು, ಪಾಲಕರು ಇದ್ದಾರೆ. ಎಪ್ಪತ್ತು ವರ್ಷಗಳಲ್ಲಿ ಮೊದಲ ಬಾರಿಗೆ ಇಷ್ಟೊಂದು ಒರಟಾದ ವ್ಯಕ್ತಿ ಪ್ರಧಾನ ಮಂತ್ರಿಯ ಪೀಠವನ್ನು ಅಲಂಕರಿಸಿದ್ದಾರೆ. ಇದೇ ತಮ್ಮ ಸಂಸ್ಕಾರವೇ, ಮೋದಿಯವರೇ" ಎಂದು ರಿಟ್ವೀಟ್ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ ಯೆಚುರಿ ಬರೆದಿದ್ದಾರೆ.



ವ್ಯಂಗ್ಯಚಿತ್ರ : ಸತೀಶ್ ಆಚಾರ್ಯ

ನಿರುದ್ಯೋಗ ನವ-ಉದಾರವಾದದ ಅನಿವಾರ್ಯ ಫಲಿತಾಂಶ



ದೇಶ ಈಗ ಅಭೂತಪೂರ್ವ ಪ್ರಮಾಣದ ನಿರುದ್ಯೋಗ ಬಿಕ್ಕಟ್ಟನ್ನು ಕಾಣುತ್ತಿದೆ. ನಿಜ, ಮೋದಿಯ ನೋಟುರದ್ಧತಿಯೆಂಬ ಇತ್ತೀಚಿನ ವರ್ಷಗಳ ಅತ್ಯಂತ ದೊಡ್ಡ ಅವಿವೇಕಿಶೂರತ್ವದ ಪಾಲು ಇದರಲ್ಲಿ ಇದೆ. ಆದರೆ ಇದು ನಿರುದ್ಯೋಗ ಸಮಸ್ಯೆ ಎಂಬುದು ಅದಾಗಲೇ ಬಹಳ ಸಮಯದಿಂದ ಬೆಳೆಯುತ್ತಲಿತ್ತು ಎಂಬ ಸಂಗತಿಗೆ ನಮ್ಮನ್ನು ಕುರುಡಾಗಿಸಬಾರದು. ನವ-ಉದಾರವಾದದ ಈ ಅನಿವಾರ್ಯ ಫಲಿತಾಂಶವು ನವ-ಉದಾರವಾದದ ಬಿಕ್ಕಟ್ಟಿನಿಂದ ಉಲ್ಬಣಗೊಳ್ಳುವಂತದ್ದು.

ಪ್ರೊ.ಪ್ರಭಾತ್ ಪಟ್ನಾಯಕ್

ನಿರುದ್ಯೋಗದ ಚರ್ಚೆ ಬಂದಾಗಲೆಲ್ಲ ಎದುರಾಗುವ ಒಂದು ಸಾಮಾನ್ಯ ಅಭಿಪ್ರಾಯವೆಂದರೆ, ಅದನ್ನು ನಿಭಾಯಿಸಲು ಈಗಿರುವುದಕ್ಕಿಂತಲೂ ಹೆಚ್ಚಿನ ದರದಲ್ಲಿ ಜಿ.ಡಿ.ಪಿ. ಏರಬೇಕು ಎಂಬುದು. ಹೀಗೆ ಹೇಳುವಾಗ ಮುಖ್ಯ ಅಂಶವನ್ನು ಸಂಪೂರ್ಣವಾಗಿ ಮರೆಯಲಾಗುತ್ತದೆ. ನಿರುದ್ಯೋಗ ಎಂಬುದು ಒಂದು ನಿರ್ದಿಷ್ಟ ಸಾಮಾಜಿಕ ಸಂಬಂಧಗಳ ಅಭಿವ್ಯಕ್ತಿ; ಆ ಸಾಮಾಜಿಕ ಸಂಬಂಧಗಳ ಒಳಗೆ ಜಿ.ಡಿ.ಪಿ. ಬೆಳವಣಿಗೆ ದರ ಎಷ್ಟೇ ಏರಿದರೂ ನಿರುದ್ಯೋಗ ಹೆಚ್ಚುತ್ತಲೇ ಇರುತ್ತದೆ. ನಿಜ, ಆರ್ಥಿಕ ಕುಸಿತದ ಸಂದರ್ಭದಲ್ಲಿ, ಜಿ.ಡಿ.ಪಿ. ಏರಿಕೆ ದರ ನಿಧಾನಗೊಂಡಾಗ ನಿರುದ್ಯೋಗ ಇನ್ನಷ್ಟು ವೇಗವಾಗಿ ಹೆಚ್ಚುತ್ತದೆ; ಅದರೆ ಆ ಸಾಮಾಜಿಕ ಸಂಬಂಧಗಳು, ಅಂದರೆ ನವ-ಉದಾರವಾದಿ ಬಂಡವಾಳಶಾಹಿಯ ಅಡಿಯಲ್ಲಿನ ಸಾಮಾಜಿಕ ಸಂಬಂಧಗಳು ಇರುವ ವರೆಗೂ ನಿರುದ್ಯೋಗ ಬೆಳೆಯುತ್ತಲೇ ಹೋಗುತ್ತದೆ.

ಇದಕ್ಕೆ ಕಾರಣ ಸರಳ. ನವ-ಉದಾರವಾದ ರೈತ ಕೃಷಿಯೂ ಸೇರಿದಂತೆ ಎಲ್ಲ ಪುಟ್ಟ ಉತ್ಪಾದನೆಗಳನ್ನು ಹಿಂಡಿ ಹಾಕುವುದರಿಂದಾಗಿ, ಕೃಷಿ ಉತ್ಪಾದನೆಯಲ್ಲಿ ರೈತ ಕೃಷಿಯೇ ಪ್ರಬಲವಾಗಿರುವ ಒಂದು ಆರ್ಥಿಕ ವ್ಯವಸ್ಥೆಯಲ್ಲಿ ನವ-ಉದಾರವಾದದ ಅಡಿಯಲ್ಲಿ ತಲಾ ಆಹಾರಧಾನ್ಯಗಳ ಉತ್ಪಾದನೆ ಸುಮಾರಾಗಿ ಹೆಚ್ಚುವುದೇ ಇಲ್ಲ. ಆದರೆ ಇದರಲ್ಲಿ ಶ್ರೀಮಂತ ವಿಭಾಗಗಳು ಬಳಸುವ ಸಂಸ್ಕರಿತ ಆಹಾರ ಮತ್ತು ಪ್ರಾಣಿಜನ್ಯ ಉತ್ಪನ್ನಗಳಲ್ಲಿ ಮೇವುಗಳಾಗಿ ಹೋಗುವ ಆಹಾರಧಾನ್ಯಗಳ ಪಾಲು ಹೆಚ್ಚುತ್ತಲೇ ಇರುತ್ತದೆ. ಇದರಿಂದಾಗಿ ದುಡಿಯುವ ಜನಸಮೂಹಗಳಿಗೆ ಉಳಿಯುವ ತಲಾ ಆಹಾರಧಾನ್ಯಗಳ ಪ್ರಮಾಣ ಇಳಿಯುತ್ತ ಹೋಗುತ್ತದೆ. ಇನ್ನೊಂದೆಡೆಯಲ್ಲಿ ಹಣದುಬ್ಬರ ಎಂದರೆ ಹಣಕಾಸು ಬಂಡವಾಳ ಒಂದು ಅನಿಷ್ಟ ಎಂದೇ ಬಗೆಯುತ್ತದೆ, ಏಕೆಂದರೆ ಆಗ ಅದರ ಹಣಕಾಸು ಆಸ್ತಿಗಳ ನಿಜ ಮೌಲ್ಯಗಳು ಇಳಿಯುತ್ತವೆ. ಆದ್ದರಿಂದ ಹಣದುಬ್ಬರ ಆಗದಂತೆ ಮಾಡಬೇಕಾದರೆ, ದುಡಿಯುವ ಜನಗಳ ತಲಾ ಆಹಾರ ಧಾನ್ಯಗಳ ಬಳಕೆಯನ್ನು ಇನ್ನಷ್ಟು ತಗ್ಗಿಸಬೇಕು. ಇದು ಸಾಧ್ಯವಾಗಬೇಕಾದರೆ ಕ್ರಮೇಣ ಉದ್ಯೋಗ ದರವನ್ನು ಅಥವ ಕೂಲಿ ದರಗಳನ್ನು ಅಥವ ಇವೆರಡನ್ನೂ ಇಳಿಸಬೇಕು(ನಿಜವಾದ ಅರ್ಥದಲ್ಲಿ, ಉದ್ಯೋಗ ಎಂದರೆ ಕೆಲಸದ ಮೂಲಕ ಒಂದು ನಿರ್ದಿಷ್ಟ ಮಟ್ಟದ ನಿಜ ಆದಾಯದ ಗಳಿಕೆ ಎಂದೇ ಪರಿಗಣಿಸ ಬೇಕಾಗಿರುವುದರಿಂದ ವಾಸ್ತವವಾಗಿ ಉದ್ಯೋಗ ದರ ಮತ್ತು ಕೂಲಿದರ ಇವೆರಡರ ನಡುವೆ ವ್ಯತ್ಯಾಸವೇನೂ ಇಲ್ಲ).

ಉದ್ಯೋಗದ ಬೆಳವಣಿಗೆ ಎಂದರೆ ಉತ್ಪಾದನೆಯ ಬೆಳವಣಿಗೆ ಮತ್ತು ಶ್ರಮದ ಉತ್ಪಾದಕತೆಯ ಬೆಳವಣಿಗೆಯ ನಡುವಿನ ವ್ಯತ್ಯಾಸ. ನವ-ಉದಾರವಾದದ ಅಡಿಯಲ್ಲಿ, ಶ್ರಮದ ಉತ್ಪಾದಕತೆಯ ಹೆಚ್ಚಳ ಎಷ್ಟು ಹೆಚ್ಚಾಗಿರುತ್ತದೆಂದರೆ ಉತ್ಪಾದನೆಯು ತ್ವರಿತವಾಗಿ ಹೆಚ್ಚಿದರೂ ಉದ್ಯೋಗದಲ್ಲಿ ಏರಿಕೆ ಮಾತ್ರ ಸೀಮಿತವಾಗಿಯೇ ಉಳಿಯುತ್ತದೆ. ಇದು ಆಹಾರಧಾನ್ಯಗಳ ಬೇಡಿಕೆ ಹೆಚ್ಚಿ ಹಣದುಬ್ಬರ ಉಂಟಾಗದಂತೆ ತಡೆಯುವುದನ್ನು ಸಾಧ್ಯವಾಗಿಸುವ ಒಂದು ಅವಶ್ಯಕ ವ್ಯವಸ್ಥೆ ಕೂಡಾ ಆಗಿದೆ. ಆದರೆ ಇದರ ಅರ್ಥ ನಿರುದ್ಯೋಗದ ಹೆಚ್ಚಳದ ದರವು, ಉತ್ಪಾದನೆಯ ದರ ಮತ್ತು ಶ್ರಮದ ಉತ್ಪಾದಕತೆಯ ದರದ ವ್ಯತ್ಯಾಸದಿಂದ ಉಂಟಾಗುವ ಒಂದು ಆಕಸ್ಮಿಕವಷ್ಟೇ ಎಂದು ಭಾವಿಸುವುದು ತಪ್ಪಾಗುತ್ತದೆ. ನಿರುದ್ಯೋಗ ದರ ಹೆಚ್ಚುತ್ತಾ ಹೋಗುವುದು ನವ-ಉದಾರವಾದದ ಅಡಿಯಲ್ಲಿ ಒಂದು ಆಕಸ್ಮಿಕ ವಿದ್ಯಮಾನವಲ್ಲ, ಅದು ಅದರೊಳಗೇ ಅಡಕವಾಗಿರುವ ಪ್ರವೃತ್ತಿಯಾಗಿದೆ.

ಭಾರತದಲ್ಲಿನ ಅನುಭವ ಇದನ್ನು ದೃಢಪಡಿಸುತ್ತದೆ. ನಿಜ, ನಿರುದ್ಯೋಗದ ಪರಿಸ್ಥಿತಿ ಈಗಂತೂ ಬಹಳ ಗಂಭೀರವಾಗಿದೆ. ಆದರೆ ಮೋದಿ ಸರಕಾರ ಬರುವ ಮೊದಲೂ ನಿರುದ್ಯೋಗದ ದರಲ್ಲಿ ಏರಿಕೆ ಇತ್ತು. ವ್ಯಂಗ್ಯವೆಂದರೆ, 'ನಿಯಂತ್ರಿತ' ಆರ್ಥಿಕ ವ್ಯವಸ್ಥೆಯ ಅಡಿಯಲ್ಲಿ ಜಿ.ಡಿ.ಪಿ. ವೃದ್ಧಿ ದರ 3.5 ರಿಂದ 4 ಶೇ. ಇದ್ದಾಗ, ಉದ್ಯೋಗ ವೃದ್ಧಿಯ ದರ ವಾರ್ಷಿಕ 2ಶೇ.ದಷ್ಟಿತ್ತು. ನವ-ಉದಾರವಾದದ ಅಡಿಯಲ್ಲಿ ಉತ್ಪಾದನೆಯಲ್ಲಿ ವೃದ್ಧಿಯ ದರ 7ರಿಂದ 8 ಶೇ. ಕ್ಕೇರಿದರೆ ಉದ್ಯೋಗ ವೃದ್ಧಿಯ ದರ ಅರ್ಧಕ್ಕೆ, ಅಂದರೆ ವಾರ್ಷಿಕ 1ಶೇ.ಕ್ಕೆ ಇಳಿಯಿತು.

ನಿರ್ದಿಷ್ಟವಾಗಿ, 1972-93 ರವಧಿಯಲ್ಲಿ ಉದ್ಯೋಗದಲ್ಲಿ ವೃದ್ಧಿಯ ವಾರ್ಷಿಕ ದರ 1.6ಶೇ. ಇದ್ದರೆ, 1993-2015ರಲ್ಲಿ, ಅಂದರೆ ಮೋದಿ ಸರಕಾರ ಬರುವ ವರೆಗಿನ ಅವಧಿಯಲ್ಲಿ ಅದು 1.1 ಶೇ. ಕ್ಕೆ ಇಳಿದಿತ್ತು. ಇದು ದುಡಿಮೆಗಾರರ ಸಂಖ್ಯೆಯಲ್ಲಿ ಏರಿಕೆಯ ಪ್ರಮಾಣಕ್ಕಿಂತ ಬಹಳ ಕಡಿಮೆ ಮಟ್ಟ. ಅಂದರೆ ಮೋದಿ ಅಧಿಕಾರಕ್ಕೆ ಬರುವ ಮೊದಲೂ, ನವ-ಉದಾರವಾದಿ ಕಾರ್ಯತಂತ್ರದಿಂದಾಗಿ ನಿರುದ್ಯೋಗದ ಪರಿಸ್ಥಿತಿ ಹದಗೆಡುತ್ತ ಬರುತ್ತಿತ್ತು.

ಆದರೆ, ನಿರುದ್ಯೋಗವನ್ನು ತೊಡೆದು ಹಾಕುವ ಆಶ್ವಾಸನೆಯೊಂದಿಗೆ ಅಧಿಕಾರಕ್ಕೆ ಬಂದ ಮೋದಿ ಸರಕಾರದ ಆಳ್ವಿಕೆಯ ವರ್ಷಗಳಲ್ಲಿ ಪರಿಸ್ಥಿತಿ ಮತ್ತಷ್ಟು ಕೆಟ್ಟು ಹೋಗಿದೆ. ಎಷ್ಟೊಂದು ಕೆಟ್ಟು ಹೋಗಿದೆಯೆಂದರೆ, ಮೋದಿ ಸರಕಾರ 2017-18ರ ರಾಷ್ಟ್ರೀಯ ಮಾದರಿ ಸರ್ವೆ(ಎನ್.ಎಸ್.ಎಸ್.)ಯಲ್ಲಿ ಪಡೆದ ನಿರುದ್ಯೋಗದ ಮಾಹಿತಿಗಳನ್ನು ದಬಾಯಿಸಿದೆ. ಆದರೆ ಸ್ವಲ್ಪ ಮಾಹಿತಿ ಹೊರಬಂದಿದೆ, ಜನವರಿ 31, 2019ರ 'ಬಿಸಿನೆಸ್ ಸ್ಟಾಂಡರ್ಡ್' ಪತ್ರಿಕೆಯಲ್ಲಿ ಅದು ಕಾಣಿಸಿಕೊಂಡಿದೆ. ಇಂದಿನ ಪರಿಸ್ಥಿತಿ ಎಷ್ಟು ಗಂಭೀರಗೊಂಡಿದೆ ಎಂಬುದರ ಒಂದು ಚಿತ್ರ ಇದರಿಂದ ಸಿಗುತ್ತದೆ.

ಭಾರತದಲ್ಲಿ ನಿರುದ್ಯೋಗ ದರ ದೇಶದಲ್ಲಿನ ನಿರುದ್ಯೋಗದ ಪರಿಸ್ಥಿತಿಯನ್ನು ಸಾಕಷ್ಟು ಪ್ರಮಾಣದಲ್ಲಿ ಬಿಂಬಿಸುವುದಿಲ್ಲ. ಏಕೆಂದರೆ, ಬಹುಪಾಲು ಜನಗಳಿಗೆ ಪೂರ್ಣವಾದ ಉದ್ಯೋಗವಿರುವುದಿಲ್ಲ, ಅಪೂರ್ಣ ಉದ್ಯೋಗವಷ್ಟೇ ಸಿಕ್ಕಿರುತ್ತದೆ. ಇಲ್ಲಿ ಕೆಲವರು ಕೆಲಸ ಮಾಡುತ್ತಾರೆ, ಇನ್ನು ಕೆಲವರು ಕೆಲಸಮಾಡುತ್ತಿಲ್ಲ ಎಂದಿರುವುದಿಲ್ಲ, ಉದ್ಯೋಗದ ಪಡಿತರವಿದೆ, ಅಂದರೆ, ಅಸಂಖ್ಯ ಮಂದಿಯ ನಡುವೆ ಇರುವ ಉದ್ಯೋಗಗಳ ಹಂಚಿಕೆಯಾಗುತ್ತದೆ. ಆದ್ದರಿಂದಲೇ ತೀವ್ರ ನಿರುದ್ಯೋಗವಿರುವ ಈ ದೇಶದಲ್ಲೂ ಬಹಿರಂಗ ನಿರುದ್ಯೋಗ ದರ ಸಾಮಾನ್ಯವಾಗಿ 2ಶೇ. ದ ಆಸುಪಾಸಿನಲ್ಲೇ ಇತ್ತು. ಆದರೆ ಈಗ ಎನ್. ಎಸ್.ಎಸ್. ಅಂಕಿ-ಅಂಶಗಳ ಪ್ರಕಾರ ಬಹಿರಂಗ ನಿರುದ್ಯೋಗ ದರ ಒಂದು ದಶಕದ ಹಿಂದೆ ಇದ್ದ 2ಶೇ.ದಿಂದ 2017-18ರಲ್ಲಿ 6.1ಶೇ.ಕ್ಕೇ ಏರಿದೆ. ಈ ವಿಪರೀತ ಏರಿಕೆ ಯುವಜನರ ನಡುವೆ ಇನ್ನಷ್ಟು ತೀಕ್ಷ್ಣವಾಗಿದೆ. ಯುವಜನರು, ಅಂದರೆ 15ರಿಂದ 29 ವರ್ಷ ವಯೋಗುಂಪಿನಲ್ಲಿ ನಿರುದ್ಯೋಗ ದರ ಎನ್. ಎಸ್.ಎಸ್.ನ ನಾಲ್ಕು ದೊಡ್ಡ ಸರ್ವೆಗಳಲ್ಲಿ, ಅಂದರೆ 2004-05, 2009-19, 2011-12 ಮತ್ತು 2017-18ರಲ್ಲಿ ಹೀಗಿದೆ:

ಗಮನಾರ್ಹ ಸಂಗತಿಯೆಂದರೆ , ಹಿಂದಿನ ವರ್ಷಗಳಿಗೆ, ಅದರಲ್ಲೂ 2011-12 ಕ್ಕೆ ಹೋಲಿಸಿದಾಗಲೂ 2017-18ರಲ್ಲಿ ಆಗಿರುವ ತೀವ್ರ ಏರಿಕೆ. ಮೋದಿ ಸರಕಾರ 2017-18ರ ಉದ್ಯೋಗ-ನಿರುದ್ಯೋಗ ಕುರಿತಾದ ಎನ್.ಎಸ್. ಎಸ್. ಸರ್ವೆಯನ್ನು ಏಕೆ ದಬಾಯಿಸಿದೆ ಎಂಬುದೀಗ ಸ್ಪಷ್ಟವಾಗುತ್ತದೆ.

ದೇಶದಲ್ಲಿ ಇಂದಿರುವ ನಿರುದ್ಯೋಗ ಪರಿಸ್ಥಿತಿ ಕಳೆದ 45 ವರ್ಷಗಳಿಗೆ ಹೋಲಿಸಿದರೆ ಬಹಳ ಕೆಟ್ಟದೇನೂ ಆಗಿಲ್ಲ ಎಂದು ಕೆಲವರು ವಾದಿಸುತ್ತಾರೆ. ಅವರ ವಾದದಲ್ಲಿ ಒಂದು ಹುರುಳಿದೆ. ಆದರೆ 45 ವರ್ಷಗಳ ಹಿಂದೆ ದೇಶ ದ್ವಿವಿಧ ಹೊಡೆತಕ್ಕೆ ಒಳಗಾಗಿತ್ತು- ಒಂದು ಕೆಟ್ಟ ಫಸಲಿನ ಪರಿಸ್ಥಿತಿ, ಅದರ ಜೊತೆಗೆ ಮೊದಲ ತೈಲ ಆಘಾತ. ಇವೆರಡು ಸೇರಿ ಹಣದುಬ್ಬರದ ದರವನ್ನು 30ಶೇ.ಕ್ಕೆ ತಳ್ಳಿದ್ದವು. ಇಂದು ಅಂತಹ ಬಾಹ್ಯ ಆಘಾತಗಳೇನೂ ಇಲ್ಲ. ಹಾಗಿದ್ದರೆ, ಇದ್ದಕ್ಕಿದಂತೆ ನಿರುದ್ಯೋಗ ದರದಲ್ಲಿನ ಈ ನೆಗೆತವನ್ನು ವಿವರಿಸುವುದು ಹೇಗೆ?

ಖಂಡಿತವಾಗಿಯೂ ಈ ವಿವರಣೆಯ ಒಂದು ಭಾಗವೆಂದರೆ, ವಿಶ್ವ ಬಂಡವಾಳಶಾಹಿ ಆರ್ಥಿಕದ ಬಿಕ್ಕಟ್ಟು-ಇದು ಭಾರತವನ್ನು ಸ್ವಲ್ಪ ತಡವಾಗಿ ತಟ್ಟಿದೆ, ಜಿ.ಡಿ.ಪಿ. ವೃದ್ಧಿ ದರ ನಿಧಾನಗೊಳ್ಳುವದರಲ್ಲೂ ಇದು ವ್ಯಕ್ತಗೊಂಡಿದೆ. ಈ ನಿಧಾನಗತಿಯ ಪರಿಣಾಮಗಳು ಅಮೆರಿಕಾ ಸಂಯುಕ್ತ ಸಂಸ್ಥಾನ ಅನುಸರಿಸುತ್ತಿರುವ ಸ್ವಂರಂಕ್ಷಣೆಯ ಧೋರಣೆಯಿಂದಾಗಿ ಉಲ್ಬಣಗೊಂಡಿವೆ. ಮುಖ್ಯವಾಗಿ ಆ ದೇಶದಿಂದ ಹೊರಗುತ್ತಿಗೆಯ ಮೂಲಕ ಹುಲುಸಾದ ವೃದ್ಧಿ ದಾಖಲಿಸಿದ ಸೇವಾವಲಯವನ್ನು ಅಮೆರಿಕಾದ ಈ ಧೋರಣೆ ತಟ್ಟಿದೆ. ಇಂತಹ ಸ್ವಯಂರಕ್ಷಣೆಯ ಧೋರಣೆಯನ್ನು ಟ್ರಂಪ್ ವಿಸ್ತರಿಸಿದ್ದರೂ, ಇದು ಆತನ ಮೊದಲೇ ಆರಂಭವಾಗಿತ್ತು. ಒಬಾಮ ಕಾಲದಲ್ಲೇ ಹೊರಗುತ್ತಿಗೆ ಚಟುವಟಿಕೆಗಳ ಕಂಪನಿಗಳ ಮೇಲೆ ಹೆಚ್ಚಿನ ಭಾರೀ ತೆರಿಗೆಗಳನ್ನು ಹಾಕುವುದರೊಂದಿಗೆ ಇದು ಕಾಣಿಸಿಕೊಂಡಿತ್ತು.

ಆದರೆ, ಮೋದಿ ಸರಕಾರಕ್ಕೆ ನಿರ್ದಿಷ್ಟವಾಗಿ ಮುಜುಗರ ಉಂಟುಮಾಡಿರುವ 2017-18ರ ಭಾರೀ ಪ್ರಮಾಣದಲ್ಲಿ ನಿರುದ್ಯೋಗದ ಏರಿಕೆಗೆ ಅತ್ಯಂತ ಬಲಿಷ್ಠ ಮತ್ತು ಸ್ಪಷ್ಟವಾಗಿ ಕಾಣುವ ಕಾರಣವೆಂದರೆ ನೋಟು ರದ್ಧತಿಯ ಕ್ರಮ. ನೋಟುರದ್ಧತಿ ರೈತ ಕೃಷಿಯೂ ಸೇರಿದಂತೆ ಪುಟ್ಟ ಉತ್ಪಾದನೆ ರಂಗಕ್ಕೆ ಬಲವಾದ ಏಟು ಹಾಕಿದೆ. ದೊಡ್ಡ ಸಂಖ್ಯೆಯಲ್ಲಿ ರೈತರು ದರಿದ್ರರಾದದ್ದು ತಮ್ಮ ಜೇಬುಗಳಲ್ಲಿ ಇದ್ದ ನೋಟುಗಳು ರಾತ್ರಿ ಹಗಲಾಗುವಷ್ಟರಲ್ಲಿ ನಿಷ್ಪ್ರಯೋಜಕವಾದ್ದರಿಂದ, ಕೃಷಿ ಲಾಗುವಾಡುಗಳನ್ನು ಖರೀದಿಸಲು ಸಾಲಗಳಿಗೆ ಮೊರೆ ಹೋಗಲೇ ಬೇಕಾಗಿ ಬಂದಿದ್ದುದರಷ್ಟೇ ಅಲ್ಲ, ಅವರ ಉತ್ಪನ್ನಗಳನ್ನು ಖರೀದಿಸುವ ಮಾರುಕಟ್ಟೆಯಲ್ಲಿ ಯೂ ನಗದಿನ ಅಭಾವದಿಂದಾಗಿ 'ಹತಾಶ' ಮಾರಾಟಗಳಿಂದಲೂ ಕೂಡ.; ಅಷ್ಟೇ ಅಲಲ್, ಇತರ ಪುಟ್ಟ ಉತ್ಪಾದಕರೂ ಇಂತಹುದೇ ಪರಿಸ್ಥಿತಿಗಳನ್ನು ಎದುರಿಸಬೇಕಾಗಿ ಬಂತು. ಈ ವಲಯದಲ್ಲಿ ಕೆಲಸ ಮಾಡುವ ಕಾರ್ಮಿಕರೂ ಅದನ್ನು ಎದುರಿಸಬೇಕಾಗಿ ಬಂತು. ಇದು ದೇಶದ ಒಟ್ಟು ದುಡಿಮೆಗಾರರಲ್ಲಿ ಮುಕ್ಕಾಲು ಪಾಲು ಮಂದಿಗೆ ಉದ್ಯೋಗ ಕೊಟ್ಟಿರುವ ವಲಯ.

ಇಂತಹ ಕಾರ್ಮಿಕರ ಸಂಕಷ್ಟಗಳನ್ನು ಕುರಿತಂತೆ ಬಹಳಷ್ಟು ಅಧ್ಯಯನಗಳು ಸಿಗುತ್ತವೆ. ಕಟ್ಟಡ ನಿರ್ಮಾಣ ವಯಲಯದಲ್ಲಿನ ವಲಸೆ ಕಾರ್ಮಿಕರಿಗೆ ನಗದಿನ ಕೊರತೆಯಿಂದಾಗಿ ಇದ್ದಕ್ಕಿದ್ದಂತೆ ಸಂಬಳಗಳೇ ಸಿಗದಂತಾಯಿತು. ಹಲವೆಡೆಗಳಲ್ಲಿ ಈ ವಲಯದಲ್ಲಿ ಚಟುವಟಿಕೆಗಳು ಸ್ಥಗಿತಗೊಂಡುದರಿಂದ ಕೆಲಸಗಾರರು ತಮ್ಮ ಊರುಗಳಿಗೆ ಹಿಂದಿರುಗಬೇಕಾಗಿ ಬಂತು.

ನೋಟುರದ್ಧತಿ ಇತ್ತೀಚಿನ ವರ್ಷಗಳ ಅತ್ಯಂತ ದೊಡ್ಡ ಹುಚ್ಚುಸಾಹಸವಾಗಿದೆ. ಅದು ಚಟುವಟಿಕೆಗಳು ಕುಸಿಯುವಂತೆ ಮಾಡಿ, ಆ ಸಮಯದಲ್ಲಿ ನಿರುದ್ಯೋಗ ನೆಗೆಯುವಂತೆ ಮಾಡಿದ್ದಷ್ಟೇ ಅಲ್ಲ, ಅದರ ದುಷ್ಪರಿಣಾಮಗಳು ಹಲವು ವಲಯಗಳಲ್ಲಿ ಈಗಲೂ ಮುಂದುವರೆದಿದೆ, ಏಕೆಂದರೆ ನಗದಿನ ಕೊರತೆಯಿಂದಾಗಿ ಉಂಟಾದ ಸಾಲದ ಹೊರೆ ಒಂದು ಶಾಶ್ವತ ವಾರಸನ್ನು ಬಿಟ್ಟು ಹೋಗಿದೆ.

ಆದರೆ ಮೋದಿಯ ಈ ಅವಿವೇಕಿಶೂರತ್ವ, ನಿರುದ್ಯೋಗ ಸಮಸ್ಯೆ ಎಂಬುದು ಅದಾಗಲೇ ಬಹಳ ಸಮಯದಿಂದ ಬೆಳೆಯುತ್ತಲಿತ್ತು ಎಂಬ ಸಂಗತಿಗೆ ನಮ್ಮನ್ನು ಕುರುಡಾಗಿಸಬಾರದು. ಅದು ನವ-ಉದಾರವಾದದ ಅನಿವಾರ್ಯ ಫಲಿತಾಂಶ; ಮತ್ತು ನವ-ಉದಾರವಾದದ ಬಿಕ್ಕಟ್ಟಿನಿಂದ ಉಲ್ಬಣಗೊಳ್ಳುವಂತದ್ದು. ನಿಜ ಹೇಳಬೇಕೆಂದರೆ, ಶಿಮ್ಲಾ ಲೇಬರ್ ಬ್ಯೂರೋಗ ನಿರುದ್ಯೋಗ ದರ (ಇದನ್ನು ಎನ್.ಎಸ್.ಎಸ್. ಫಲಿತಾಂಶಗಳೊಂದಿಗೆ ಹೋಲಿಸಲಾಗುವುದಿಲ್ಲ) ನಿರುದ್ಯೋಗದ ಏರಿಕೆಯನ್ನು ಈ ರೀತಿ ತೋರಿಸುತ್ತದೆ: 2011ರಲ್ಲಿ 3.8ಶೇ., 2012ರಲ್ಲಿ 4.7ಶೇ., 2013ರಲ್ಲಿ 4.9ಶೇ., ಮತ್ತು 2015ರಲ್ಲಿ 5ಶೇ. ನಿರುದ್ಯೋಗದ ಈ ಏರುಪ್ರವೃತ್ತಿಯ ಮೇಲೆ ನೋಟುರದ್ಧತಿಯ ಮತ್ತೊಂದು ಹೇರಿಕೆಯಾಗಿರುವಾಗ, ದೇಶ ಈಗ ಅಭೂತಪೂರ್ವ ಪ್ರಮಾಣದ ನಿರುದ್ಯೋಗ ಬಿಕ್ಕಟ್ಟನ್ನು ಕಾಣುತ್ತಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ●

	2004-05	2009-10	2011-12	2017-18
ಗ್ರಾಮೀಣ ಯುವಕರು	2.9	4.7	5.0	17.4
ಗ್ರಾಮೀಣ ಯುವತಿಯರು	4.2	4.6	4.8	13.6
ನಗರಗಳ ಯುವಕರು	8.3	7.5	8.1	18.7
ನಗರಗಳ ಯುವತಿಯರು	14.9	14.3	13.1	27.2

ಫೆಬ್ರುವರಿ 2019ರಲ್ಲಿ ನಿರುದ್ಯೋಗ ದರ 7.2% ಕ್ಕೆ ನೆಗೆದಿದೆ

ಮಾರ್ಚ್ 5 ರಂದು ಸಿ.ಎಂ.ಐ.ಇ.(ಭಾರತೀಯ ಆರ್ಥಿಕದ ಮೇಲ್ವಿಚಾರಣೆ ಕೇಂದ್ರ) ಪ್ರಕಟಿಸಿರುವ ಮಾಹಿತಿ ಪ್ರಕಾರ ಫೆಬ್ರುವರಿ 2019ರಲ್ಲಿ ನಿರುದ್ಯೋಗ ದರ 7.2%ಕ್ಕೆ ನೆಗೆದಿದೆ. ಕಳೆದ ಫೆಬ್ರುವರಿಯಲ್ಲಿ ಇದು 5.9% ಇತ್ತು. ದುಡಿಮೆಯಲ್ಲಿ ತೊಡಗಿರುವವರ ಸಂಖ್ಯೆ ಫೆಬ್ರುವರಿ 2018ರಲ್ಲಿ 40.6 ಕೋಟಿ ಇದ್ದದ್ದು ಈ ಫೆಬ್ರುವರಿಯಲ್ಲಿ 40 ಕೋಟಿಗೆ ಇಳಿದಿದೆ.

ಈ ಮಾಹಿತಿ ಹತ್ತಾರು ಸಾವಿರ ಕುಟುಂಬಗಳ ಸರ್ವೆಯ ಆಧಾರದಲ್ಲಿ ಕಲೆ ಹಾಕುವಂತದ್ದಾಗಿದ್ದು, ಈ ಮೋದಿ ಕಾಲದಲ್ಲಂತೂ ಎಲ್ಲ ಸರಕಾರೀ ಮಾಹಿತಿಗಳಗಿಂತ ಹೆಚ್ಚು ವಿಶ್ವಾಸಾರ್ಹ ಎಂದು ಹಲವು ಆರ್ಥಿಕ ತಜ್ಞರು ಪರಿಗಣಿಸುತ್ತಿದ್ದಾರೆ.

ಕಾಳಿಂಗ ನಾವುಡರು ತೀರಿ ಹೋದಾಗಲೇ........ ಪುಟ 6 ರಿಂದ

ಶನಿ ಪ್ರವೇಶ ಆಗಬೇಕಾದರೆ ಪಕ್ಕದಲ್ಲಿ ಲೈಟ್ ಮಾಡುವವರ ಹತ್ತಿರದಿಂದ ನೋಡಿ ಖುಷಿಯಿಂದ ಹೋಗಿ ಕುಳಿತುಕೊಂಡರು. ಯಾವಾಗಲೂ ಅವರು ಸರಿಕಾಣದ್ದನ್ನು ಸಟ್ಟನೆ ಹೇಳುವುದಿದೆ. ಮಾಬ್ಲ ಹೆಗಡೆಯವರೂ ಹಾಗೆ. ಮೇಳದ ಯಜವಾದರಾದ ವರದರಾಜ ಪೈ ಅವರಿಗೆ "ವರದಣ್ಣ ಇವರ ವೇಷ ಪಾಸು" ಎಂದರಂತೆ. ನಾನು ಪ್ರವೇಶ ಮುಗಿಸಿ ಒಳಗೆ ಬಂದೆ. ಅವರು ಅಲ್ಲಿ ನನ್ನ ಬಗ್ಗೆ ಮಾತನಾಡುತ್ತಿದ್ದರು. ಬೆಳಿಗೆ ಅವರಲ್ಲಿ ಹೋಗಿ ಏನಾದ್ರೂ ಹೇಳಬೇಕು, ತಪ್ಪಿದ್ದಿದ್ರೆ ಎಂದೆ. ಅದಕ್ಕವರು ಅದು ಈಗ ಹಾಗೆ ಇರಲಿ ಮತ್ತು ಅದು ನಾಲ್ಕು ಆದಾಗ ಹೇಳ್ತೇನೆ ನಾನು. ಇದು ಇಷ್ಟಕ್ಕೆ ನಿಲ್ಲೋದಿಲ್ಲ. ಒಂದು ಔಂಡ್ ಆಗಿ ಇನ್ನೊಂದು ರೌಂಡಿಗೂ ಅದು ಆಗ್ತದ್ದೇನ. ಅದರ ಬಗ್ಗೆ ಯೋಚನೆ ಮಾಡಬೇಡ. ನೀನು ಅಳುಕ ಬೇಕಾದ ಅಗತ್ಯವೇ ಇಲ್ಲ. ಅದೇ ಸ್ಫೂರ್ತಿಯಿಂದ ನಡೆ. ವರ್ಷಕೂಡ ಹಲವರು ಚೌಕಿಗೆ ಬಂದು ಜಲವಳ್ಳಿಯವರಿದ್ದಾರಾ? ಎಂದು ಕೇಳುವಷ್ಟು ಜನರ ವಿಶ್ವಾಸಗಳಿಸಿದೆ. ಉಳಿದ ಕಲಾವಿದರು ಆಗ ಸ್ವಲ್ಪ ಬೇಸರ ಮಾಡಿಕೊಂಡಿದ್ದಿದೆ. ಆಗ ಶೇಣಿಯವರು ಅವರ ಶ್ರಮಕ್ಕೆ ಅವರಿಗೆ ಪ್ರತಿಫಲಸಿಕ್ಕಿದೆ. ನೀವ್ಯಾಕೆ ಹೊಟ್ಟೆಕಿಚ್ಚು ಮಾಡ್ತೀರಿ ಎಂದು ಕೇಳುತ್ತಿದ್ದರು.

ಆ ಮೇಳದಲ್ಲಿ ಒಳ್ಳೊಳ್ಳೆ ಕಲಾವಿದರಿದ್ದರು. ಬಣ್ಣದ ಮಾಲಿಂಗ್ ರಘುರಾಮ ಭಾಗವತರು ಮುಂತದವರಿದ್ದರು. ಇವರೆಲ್ಲಾ ನನ್ನನ್ನು ಬೆಂಬಲಿಸಿದರು. ನಾನಾದರೂ ಮಾತಾಡ್ತಿರಲಿಲ್ಲ, ಜಗಳಕ್ಕೂ ಹೋಗ್ತಿರಲಿಲ್ಲ. ನಾನು ಅಲ್ಲಿಗೆ ಹೊಸಬ ಮತ್ತು ಯಾವಾಗಲೂ ಜಗಳಕ್ಕೆ ಹೋಗ್ತಿರಲಿಲ್ಲ. ಮುಂದಿನ ನಿಮ್ಮ ನಡೆ ಸಾಲಿಗ್ರಾಮದ ಕಡೆಗೆ.

ಆಗ ಸಾಲಿಗ್ರಾಮ ಮೇಳ ಸ್ವಲ್ಪ ಡಲ್ ಆಗಿತ್ತು. ದೇವರು ಹೆಗಡೆಯವರ ಸ್ವರ ಒಡ್ಡೋಗಿತ್ತು. ಕುಮಟಾ ಗೋವಿಂದ ನಾಯ್ಕ ಅವರ ಶಕಾರ ಮಾಡ್ತಿದ್ದ. ಅದು ಅವನ ಫೇಮಸ್ ಪಾರ್ಟು. ನನ್ನ ಶನಿ ಇದ್ದ ಹಾಗೆ. ಆದ್ರೆ ಮೇಳಕ್ಕೆ ದುಡ್ಡು ಆಗ್ಲೇ ಇಲ್ಲ.

□ ತೆಂಕಿನ ಮೇಳದ ಸವಾಲನ್ನು ಹೇಗೆ ಸ್ವೀಕರಿಸಿದಿರಿ?

ನನಗೆ ತೆಂಕಿನ ಮೇಳಕ್ಕೆ ಹೋಗಿರುವುದರಿಂದ ರಗಳೆ ಅನ್ನಿಸಲಿಲ್ಲ. ಯಾಕೆಂದರೆ ಅವರೆಲ್ಲ ನನಗೆ ಬೇಗ ಹೊಂದಿಕೊಂಡರು. ನನಗೆ ಲಯದ ಜ್ಞಾನ ಮೊದಲೇ ಇರೋದ್ರಿಂದ ತೊಂದರೆ ಅನ್ನಿಸಲಿಲ್ಲ. ಕಷ್ಟವೂ ಆಗ್ಲಿಲ್ಲ.

□ ನಿನಗೆ ಹೆಸರು ತಂದು ಕೊಟ್ಟ ಪಾತ್ರಗಳೆಲ್ಲ ಖಳ ಪಾತ್ರಗಳು. ಅದರಲ್ಲಿ ನಿಮಗೆ ಇಷ್ಟವಾದ ಪಾತ್ರ ಯಾವುದು? ನಿಮ್ಮ ಸಾಮರ್ಥ್ಯವನ್ನು ಸಮರ್ಥವಾಗಿ ನಿಭಾಯಿಸಿದ್ದೇನೆ ಎಂಬ ವಿಶ್ವಾಸ ಇರುವ ಪಾತ್ರ?

ನಾನು ಚಿತ್ರಾಕ್ಷಿ ಕಲ್ಯಾಣದಲ್ಲಿ ರಕ್ತಜಂಗಾಸುರನ ವೇಷ ಮಾಡ್ತಿದ್ದೆ. ಅದನ್ನು ಕಡತೋಕ ಕೃಷ್ಣ ಭಾಗವತರು ಆಯ್ಕೆ ಮಾಡಿ ಕೊಟ್ಟಿದ್ರು. ಚಿಟ್ಟಾಣಿಯವರ ರುದ್ರ ಕೋಪ ಅದು ಜನ ಮೆಚ್ಚುಗೆ ಪಡೆದರು. ನಂತರ ರಾವಣ, ದುಷ್ಟಬುದ್ಧಿ, ಶನೀಶ್ವರ, ವಟುಭೀಮ, ಕಂಸ, ಇವೆಲ್ಲ ಇಷ್ಟದ ಪಾತ್ರ. ಅದೆಲ್ಲಕ್ಕಿಂತ ಹೆಸರು ತಂದಿದ್ದು ಶನಿ ಪಾತ್ರ. ದಕ್ಷಿಣದಲ್ಲಿ ಮಾತ್ರವಲ್ಲ, ಚಿಕ್ಕಮಗಳೂರು, ಮೂಡಗೆರೆ, ಮಡಿಕೇರಿ ಆಕಡೆಗೆ ಪ್ರದರ್ಶನ ಆಗ್ತಿತ್ತು. ಕಾಫಿ ಎಸ್ಟೇಟಿನ ಮೆನೇಜರರೆಲ್ಲಾ ದೊಡ್ಡ ದೊಡ್ಡ ಶ್ರೀಮಂತರು. ಅವರು ಕುಟುಂಬ ಸಮೇತ ಆಟಕ್ಕೆ ಬರೋರು. ಬೆಳಗ್ಗೆ ಶನೇಶ್ವರನ ವೇಷ ತೆಗೆಯೋದಕ್ಕೆ ಕೊಡ್ತಿರಲಿಲ್ಲ. ಬಂದು ಪಾದಗಾಣಿಕೆ ಮಾಡಿ, ಮನೆ ಮಂದಿ ಎಲ್ಲಾ ಕೈ ಮುಗಿದು ಹೋಗ್ತಿದ್ದರು. 300–400–500ರೂ ನನಗೆ ಕಾಣಿಕೆ ಕೊಡ್ತಿದ್ದರು. ಇವನ್ನೆಲ್ಲಾ ಶೇಣಿಯವರು, ಕಸ್ತೂರಿ ಮಾಸ್ತಿ ಪೈ ಅವರು ನಿಬ್ಬೆರಗಾಫಿ ನೋಡ್ತಿದ್ದರು. ಒಬ್ಬ ಕಲಾವಿದ ಪಾತ್ರ ಮಾಡ್ತಾನೆ ಅಂತ ಟಿಕೇಟ್ ತಕೊಂಡು ಬರೋರು. ಆದರೆ ರಾತ್ರಿ ಆಟ ನೋಡಿ ನೋಡಿ ಬೆಳಿಗ್ಗೆ ಹೋಗುವಾಗ ಇಷ್ಟೊಂದು ಭವುಕರಾಗಿ ಪಾದಕ್ಕೆ ದುಡ್ಡು ಹಾಕಿ ಹೋಗೋದು ಎಂಥಾ ಆಶ್ಚರ್ಯ ಮಾರಾಯ ಎನ್ನುತ್ತಿದ್ದರು. ಶೇಣಿಯವರು ಯಕ್ಷಗಾನ ಮತ್ತು ನಾನು ಎನ್ನುವ ಅವರ ಪುಸ್ತಕದಲ್ಲಿ ನನ್ನಬಗ್ಗೆ ಬರೆದಿದ್ದಾರೆ. ಶನೀಶ್ವರನ ಬಗ್ಗೆ ಬರೆದಿದ್ದಾರೆ. ಬದುಕು ಸಾರ್ಥಕ ಅನ್ನಿಸಿತು.

□ ನಿಮ್ಮ ಮತ್ತು ಕಾಳಿಂಗ ನಾವುಡರ ಸಂಬಂಧದ ಬಗ್ಗೆ ಹೇಳಿ.

ಸಾಲಿಗ್ರಾಮ ಮೇಳಕ್ಕೆ ಬಂದ ಮೇಲೆ ಭಾಗವತರ ಕೊರತೆ ಆಯ್ತು. ಆಗೆಲ್ಲಾ ಕಾಳಿಂಗ ನಾವುಡರು, ನಾವು ಎಲ್ಲ ಬೆಂಗಳೂರಲ್ಲಿ ಒಟ್ಟಾಗಿ ಇರ್ತಿದ್ದೆವು. ನಾನು ಹಿಂದೆ ಗುಂಡಬಾಳ ಮತ್ತು ಕೊಳಗಿಬೀಸ್ ಮೇಳದಲ್ಲಿ ಇರುವಾಗ ಅವರ ತಂದೆಯವರು ನಮ್ಮ ಮೇಳಕ್ಕೆ ಬಂದಿದ್ರು. ರಾಮಚಂದ್ರನಾವುಡರು ಅಂತ ಆಗ ಈ ಮಾಣಿ ನಮ್ಮ ವಿಧ್ಯಾದರನಷ್ಟು ದೊಡ್ಡವ ಆಗಲೇ ಅಪ್ಪ ಭಾಮಿನಿ ವಾರ್ಧಕ್ಯ ಹೇಳಿ ಎಲ್ಲಿ ಮುಗಿಸ್ತಾನೋ ಅಲ್ಲಿಂದ ಮುಂದಿನ ಸಾಲಿಗೆ ಬಾಯಾಕ್ತಿದ್ದ ಅಷ್ಟು ಸಣ್ಣ ಹುಡುಗ ನಮ್ಮನ್ನೆಲ್ಲಾ ಪ್ರೀತಿಯಿಂದ ನೋಡ್ತಿದ್ದರು. ನಮ್ಮ ತೊಡೆಯ ಮೇಲೆಲ್ಲಾ ಕೂತ್ಕೊತ್ತಾ ಇದ್ದ. ನಮ್ಮೊಂದಿಗೆ ಮಲಗ್ತಿದ್ದ. ತಂದೆ ಒಟ್ಟಿಗೆ ಒಡಾಡ್ತ ಇದ್ದ. ಈ ಬಾಂದವ್ಯ ಮೊದಲಿನಿಂದ ಇತ್ತು. ಬಂದಿವನ ಅವರ ಹತ್ತಿರ ಹೋಗಿ ನಿಮಗೆ ನಿಜವಾಗಿ ಭಾಗವತರಾಗಿ ವೊಡಾಡುವ ಯೋಗ್ಯತೆ ಬಂದಿದೆ. ಸಾಲಿಗ್ರಾಮ ಮೇಳಕ್ಕೆ ಒಳ್ಳೆ ಭಾಗವತರು ಬೇಕು. ನೀವು ಬರೋದಾದ್ರೆ ಯೋಗ್ಯ ಗೌರವದೊಂದಿಗೆ ಅಲ್ಲಿಗೆ ಅಲ್ಲಿಗೆ ಬರಮಾಡಿಕೊಳ್ಳುವ ಕೆಲಸ ಮಾಡ್ತೆ. ಹೇಗೂ ನಿಮ್ಮ ತಂದೆಯವರು, ನಂದು, ನಿತ್ಯದ ಒಡನಾಟ ಮೊದ್ಲಿಂದಲೂ ಇದೆ ಅಂದೆ. ಯಾಕೆ ಹೆಗ್ಡೇರು ನೇರ ನನ್ನನ್ನ ಕೇಳದೆ ಬೇರೆಯವರ ಹತ್ತಿರ ಹೇಳಿ ಕಳಿಸ್ತಾರೆ ಅನ್ನೋ ಅರ್ಥದಲ್ಲಿ ಮಾತನಾಡಿದರು. ನಾನೂ ಉತ್ತರ ಕೊಟ್ಟೆ. ಯಾಕೆಂದರೆ ಸೋಮನಾಥ ಹೆಗಡೆಯವರು ಅಂದ್ರೆ ದ.ಕ ದ ಮೇಳದ ಸಾವ್ಕಾರರ ಸಾಲಿನಲ್ಲಿ ಒಳ್ಳೆಯವರು, ಗಂಭಿರ ಜನ. ನಿಮ್ಮ ವಯಸ್ಸಿಗೂ ಅವರ ವಯಸ್ಸಿಗೂ ತುಂಬಾ ವ್ಯತ್ಯಾಸ ಇದೆ. ಒಂದು ವೇಳೆ ನೀವು ಬರೋದಿಲ್ಲ ಅಂದ್ರೆ ಅವರ ಗೌರವಕ್ಕೆ ಕೊರತೆ ಅಲ್ವ ಅದಕ್ಕಾಗಿ ಆ ಮೇಳದ ಎರಡನೇ ವೇಷಧಾರಿ ನಾನು ನನ್ನನ್ನು ಕೇಳಿಸಿದ್ದಾರೆ. ನೀವು ಏನು ಹೇಳ್ತಿರೀ ಎಂದು ಕೇಳಿದೆ 'ಆಯ್ತು' ಎಂದರು. ಆಗ ಉಡುಪಿ ರಾಜಾಂಗಣದಲ್ಲಿ ಒಂದು ಆಟ ಇತ್ತು. ಕಾರ್ತಿವಿರ್ಯಾರ್ಜುನ ಆಗಿನ ಕಾಲದಲ್ಲಿ 100 ರೂ ಟಿಕೇಟ್. ಆಗ ಜಲವಳ್ಳಿಯವರಿಗೆ, ಶಂಭು ಹೆಗಡೆಯವರಿಗೆ ಜೊಡಿ ಆಗದು. ಶಂಭು ಹೆಗಡೆಯವರು ಕಾರ್ತಿವಿರ್ಯ, ನಂದು ರಾವಣ ಎಂದರು. ನಾನು ಒಪ್ಪಿದೆ. ಶಂಭು ಹೆಗಡೆಯವರು ಹೇಳ್ತಿದ್ದರು. ನನಗಿಂತ ನೀನು ಸೀನಿಯರ್ ಮಾರಾಯ ಹೆಗಡೆರು ಗೀಗಡೆರು ಅಂತೆಲ್ಲಾ ಹೇಳ್ಬೆಡ ಅಂತಿದ್ರು. ಪಾಪ ರಾಶಿ ಒಳ್ಳೇರಾಗಿದ್ರು. ಒಂದಿನ ಮುಂಬೈ ಗೋಕುಲಕ್ಕೆ ಫೋನ್ ಮಾಡಿ ಕರೆದ್ರು. ಹೌದೆನೋ ವೆಂಕಟೇಶ ನನ್ನೊಂದಿಗೆ ರಾವಣನ ಮಾಡಲು ಒಪ್ಪಿದ್ದು ಹೌದೇನೊ ಅಂದ್ರು. ಹೌದು ಅಂದೆ. ಒಳ್ಳೆಯದಾಯ್ತು. ಮತ್ಯಾರ್ನಾದ್ರೂ ಮಾಡಿಸಿಬಿಡೋರು ಅವರು. ಹಾಗಾಗಿ ಕೇಳಿಕೊಳ್ವಾ ಮಾಡಿದೆ ಅಂದ್ರು. ಅವರು ರಂಗದಲ್ಲಿ ಒಂದು ಮಡಿ ಇಟ್ಟುಕೊಂಡವರು ಅವರು. ಅಲ್ಲಿ ಒಂದು ದುಡ್ದಾಯ್ತ ಮಾರಾಯ್ರೆ. ಅದೆಷ್ಟು ಅದು. ಕಾಳಿಂಗ ನಾವುಡರ ಸಾಲ ಎಲ್ಲಾ ತೀರಿ ಮತ್ತಾವುದು ಉಳಿತು ನೋಡಿ. ಅಲ್ಲಿಂದ ಸಾಲಿಗ್ರಾಮ ಮೇಳಕ್ಕೆ ಬಂದಿದ್ದೇ ಬಂದಿದ್ದು ಒಂದು ರೀತಿ ದಿಗ್ವಿಜಯ ಆಗೋಯ್ತು. ಇನ್ನೂ ಒಂದು ಸತ್ಯ ಹೇಳೋದಾದ್ರೆ ಕಾಳಿಂಗ ನಾವುಡರು ತೀರಾ ಹೋದಾಗಲೇ ನಾನು ನನ್ನ ಕಸುಬು ಬಿಡಬೇಕಾಗಿತ್ತು. ಅಲ್ಲಿಂದ ನನಗೆ ರಾಶಿ ಸೋಲಾಯ್ತು. ಯಜಮಾನಂಗೆ ನಾನು ಬೇಕಾಗಿತ್ತು; ಹಣ ಮಾಡಿಕೊಡಲು. ಆದ್ರೆ ನನಗೆ ತೊಂದರೆ ಆಯ್ತು.

ಇತ್ತೀಚೆಗೆ ಒಳ್ಳೆ ಭಾಗ್ವತರು ಬಂದಿದ್ದಾರೆ. ನಾನು ಮನೇಲಿರದೆ ಕಾಳಿಂಗ ನಾವುಡರು ನಮ್ಮ ಅಲ್ಲ. ನನಗೆ ಚಿಟ್ಟಾಣಿಯವರ ಕೌರವನನ್ನು ಬಿಟ್ಟರೆ ಬೇರೆಯವರದು ಪೂರ್ಣ ಹಿಡಿನೋದಿಲ್ಲ. ಇತ್ತೀಚೆಗೆ ವಿದ್ಯಾಧರ ಚೆನ್ನಾಗಿ ಮಾಡ್ತಾನೆ ಅಂತ ರಾಶಿ ಜನ ಹೇಳ್ತಾರೆ. ನಾನು ತಲೆ ಅಲ್ಲಾಡಿಸ್ತೆ. ಪೂರ್ಣ ನಾನು ಒಪ್ಪಿಕೊಳ್ಳಿಲ್ಲ. ನಾನು ಅವನ ಪೂರ್ಣ ವೇಷವನ್ನು ನೋಡ್ಲಿಲ್ಲ.

24 ವರ್ಷ ಸಾಲಿಗ್ರಾಮ ಮೇಳದಲ್ಲಿ 24 ವರ್ಷ ಇದ್ದೆ. ಕಾರಣ ಕಾಳಿಂಗ ನಾವುಡರ ಭಾಗವತಿಕೆ, ಸೋಮನಾಥ ಹೆಗಡೆಯವರ ಯಜಮಾನಿಕೆ.

ಕಲಾವಿದ ಯಜಮಾನರೊಂದಿಗೆ ಒಳ್ಳೆತನ ಉಳಿಸಿಕೊಳ್ಳಬೇಕು. ಅದು ಕಲಾವಿದನ ಘನಸ್ಥಿಕೆ ಉಳಿಸಿಕೊಳ್ಳೋದು. ಬಡತನ, ಸಾಲ ಎಲ್ಲಾ ಇರ್ತದೆ. ಅದು ಬೇರೆ.

ನನಗೊಂದು ಇಚ್ಛೆ ಇತ್ತು. ಆಗ್ತದೆ ಅಂತ ನನಗೂ ಗೊತ್ತಿರಲಿಲ್ಲ. ಅವರಿಗೂ ಗೊತ್ತಿರಲಿಲ್ಲ. ಒಂದು ಮೇಳ ಮಾಡಿದ್ದಾನೆ. ಖುಷಿ ಆಯ್ತು.

□ ನಿಮ್ಮ ವೃತ್ತಿ ನಿಮಗೆ ತೃಪ್ತಿ ತಂದಿದೆಯೇ?

ಈ ವರೆಗೆ ನಾನು ನಿರೀಕ್ಷೆ ಮೀರಿ ಕೆಲಸ ಆಗಿದೆ. ಯಾರೇ ಆದ್ರೂ ಅವನಷ್ಟಿಗೆ ಅವ ಇರೋದು ದೊಡ್ಡ ಸಂಗತಿ ಅಲ್ಲ. ಸಮಾಜಕ್ಕೆ ಏನಾದರೂ ಮಾಡಬೇಕು. ಸಮಾಜಕ್ಕೆ ಏನು ಕೊಟ್ಟಾ ಎನ್ನುವುದು ಬೇಕಲ್ಲಾ. ಸಣ್ಣದಾಗಲಿ, ದೊಡ್ಡದಾಗಲಿ. ನಾನೂ ಸೂಚನೆ ಮಾಡ್ದೆ. ನಮ್ಮೂರಿನಲ್ಲಿ, ಹೊರಗಿನವರಿಗೆ, ಬಡ ಕಲಾವಿದರಿಗೆ, ಬಡವರಿಗೆ 5–10 ಸಾವಿರ ಸಹಾಯ ನೀಡುವ ಕೆಲಸ ಮಾಡ್ತಿದ್ದಾನೆ. ಈ ಮೊದಲೊಂದು ಕಾಲದಲ್ಲಿ ಎಂಥಾಕ್ಕೆ ಬಂದೆ ಅನ್ನಿಸಿತ್ತು. ಪಗಾರ ಎಲ್ಲಾ ಕಡಿಮೆ ಇತ್ತು. ಆನರ ಪ್ರೀತಿ, ಗೌರವ ಎಲ್ಲಾ ಸಿಕ್ಕಿದೆ. ಸ್ವಯಾರ್ಜಿತವಾಗಿ ಗಳಿಸಿದ್ದು. ಪರಂಪರೆ ಅಲ್ಲ. ಆದ್ರೆ ನನ್ನ ಮಗ ಅದನ್ನು ಮುಂದುವರಿಸಿದ್ದಾನೆ. ಇನ್ನು ಮೊಮ್ಮಕ್ಕಳು ತಯಾರಾಗಬೇಕು ಅಂತ ಒಂದು ಆಶಯ ಇದೆ. ನಾನು ಪಟ್ಟ ಬಡತನ, ತೊಂದರೆ ನನ್ನ ಮಕ್ಕಳಿಗೆ ಬರಬಾರದು. ಅಂತೂ ಸಂತೃಪ್ತಿ ಆಗಿದೆ.

ಏ.......ನಿಲ್ಲು. ಪ್ರಭು !

ಏ.... ನೀಲ್ಲು ಪ್ರಭು,
ಸಾವು ಹೊತ್ತ ಹೆಜ್ಜೆಗಿಲ್ಲಿ
ನೆಲವಿಲ್ಲ.
ಹಬ್ಬಿದೆ ಕರುಳು ನೆಲದ ತುಂಬ
ಶಾಂತಿ ಘಮಿಸುವ ಬಳ್ಳಿ.

ನಾನು ಯೋಧ,
ನಿಮ್ಮಿಷ್ಟಕೆ ಕುಣಿವ ಗೊಂಬೆ ನಾನಲ್ಲ,
ಕನಸಿದೆ ನನಗೆ
ಯೋಧರೇ ಇಲ್ಲದ ಜಗತ್ತು
ಕಟ್ಟುವ ಕನಸು.
ಆಗ
ಜಗತ್ತಿನ ಪ್ರತಿಯೊಬ್ಬರದೂ ಯೋಧರು!
ಬಂಧೂಕದ ನಳಿಗೆ ತುಂಬ
ನೆಲದ ಕಸುವ ತುಂಬಿ
ಗುಲಾಬಿ ಅರಳಿಸ ಬೇಕು.
ಮುಖದ ಮುಖಕ್ಕಿರುವ ಮುಖವಾಡ ಕಿತ್ತೊಗೆದು,
ಬೆಂಕಿ, ಉರಿ, ಹೊಗೆ ಇರದೆ
ಬೆಸೆಯ ಬೇಕು ಬಯಲ,
ಹೊಸೆಯ ಬೇಕು
ಆ ಗಡಿ, ಈ ಗಡಿ ಗಡಚಿಕ್ಕುವ
ರೇಖೆ ತೀಡಿ,
ತಂತಿ ಮೀಟಬೇಕು
ನೆಲದೊಡಲಿಗೆ ಬಿಗಿದು
ಪ್ರೀತಿ ಹಾಡ.

ಹೇ.....ಪ್ರಭು. ನಿಲ್ಲು,
ಪರಾಕು ಪಂಪೊನ್ನೊತ್ತಿ
ಬೇರಿಲ್ಲದ ಮಾತೇಕೆ ?
ರಣೋತ್ಸವ ವಿಜಯೋತ್ಸವಗಳ
ನಡುವೆ ರಣಹದ್ದಿನ ಡೇಗು,
ತಾಯಿ ಆಕ್ರಂದನ, ಹೆಣ್ಣಿನ ನಿಟ್ಟುಸಿರು,
ಕುಟಿಲ ಕಾನನದಾತ್ಮದ
ದೇಶ ಪ್ರೇಮದ ಕೇಕೆ.
ಎದೆಗೆ
ಬಂಧೂಕದ ತಿದಿಯೊತ್ತಿ
ಗಲ್ಲ ಸವರುವ ಪ್ರೀತಿ.

ಎಲ್ಲ ಬಯಲಾಗಿದೆ ಈಗ
ಉತ್ತುಂಗದ ಉನ್ಮಾದ
ಬೆತ್ತಲಾಗಿದೆ
ನನ್ನ ಸಾವಿನ ಎದುರು.
ಹಿಂಸೆಗೆ ಹಿಂಸೆ, ಪ್ರತಿಕಾರಕ್ಕೆ ಪ್ರತಿಕಾರ, ಹೆಣಕ್ಕೆ ಹೆಣ
ಕಕ್ಕಿದ ರಕ್ತ, ನನ್ನರಕ್ತ ನಿನ್ನ ರಕ್ತ, ಅವರ ರಕ್ತ, ನಮ್ಮವರ ರಕ್ತ,
ಮನುಷ್ಯನದೇ ರಕ್ತ.

ಪ್ರಭು,
ನಿನ್ನ ಮನದ ಕತ್ತಲಿಗೆ
ಕದಿಯಬೇಕೆ
ನನ್ನ ಮನೆ ದೀಪ.
ಪ್ರಭು
ನಿಮ್ಮ ಕುರ್ಚಿಯ ಭದ್ರತೆಗೆ
ನನ್ನ ಹೆಣದ ಕಲ್ವಾ !

ನಾನು ಯೋಧ,
ನನಗೆ ಗೊತ್ತು ಪ್ರಭು.
ಯುದ್ಧ ಆಳರಸರ ಅಸ್ತ್ರ
ಭಯವೇ ಅದರುಸಿರು !
ಶಾಂತಿ ಕಾಯಕ ಜೀವದ ಅಸ್ತ್ರ
ನಿರ್ಭಯವರ ಅದರುಸಿರು!
ಗಯಕ್ಕೆ ಗಾಯ, ಭಯಕ್ಕೆ ಭಯ
ಔಷಧಿ ಯಾದೀತೆ?

ಪ್ರಭೋ
ನಿನ್ನ ಘರ್ಜನೆ ಎದುರು
ಹಿಡಿದಿದ್ದೇನೆ,
ಕಣ್ಣ ರೆಪ್ಪೆಯ ನೇಯ್ದ ಬಾವುಟ
ನನ್ನ ರಕ್ತದದಲೆದ್ದಿ
ಚಿಮ್ಮಿಸುತ್ತೇನೆ
ಅದರ ತುಂಬ ಬುದ್ಧ ನಗೆ
ಹಾರಲಿ ಜಗದ ತುಂಬ ಪಟಪಟ.
ಯುದ್ಧವೇ ಸಾವು, ಶಾಂತಿಯೇ ಜೀವ, ಪ್ರೀತಿಯೇ ಬೆಳಕು !

– ಪೀಆರ್ ವೆಂಕಟೇಶ್

ಟ್ರಂಪ್, ಉತ್ತರ ಕೊರಿಯಾ ಎಲ್ಲಾ ಪರಮಾಣು ಅಣ್ವಸ್ತ್ರ ಕೇಂದ್ರಗಳನ್ನು ಸಂಪೂರ್ಣವಾಗಿ ನಾಶಗೊಳಿಸಬೇಕು, ಪರಮಾಣು-ಮುಕ್ತ ಉತ್ತರ ಕೊರಿಯಾಕ್ಕೆ ಆರ್ಥಿಕವಾಗಿ ತುಂಬಾ ಉತ್ತಮ ಭವಿಷ್ಯವಿದೆ ಎಂಬ ಸಿಂಗಪೂರ್ ನ ಹೇಳಿಕೆಯನ್ನು ಪುನರುಚ್ಚರಿಸಿದ್ದಾರೆ. ಆದರೆ, ಉತ್ತರ ಕೊರಿಯಾವು ಇದಕ್ಕೆ ಸಿದ್ದವಿಲ್ಲ ಎಂದಿದ್ದಾರೆ. ಇದಕ್ಕೆ ಕಿಮ್ ಜಾಂಗ್ ಉನ್ ರವರು, ತಮ್ಮ ಆತಂಕವನ್ನು ವ್ಯಕ್ತ ಪಡಿಸುತ್ತಾ, ಮೊದಲು, ಅಮೆರಿಕವು ನಮ್ಮದೇಶದ ಮೇಲೆ ಹೇರಿರುವ ನಿರ್ಬಂಧಗಳನ್ನು ತೆರವುಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ. ಆದರೆ ಇದಕ್ಕೆ ಟ್ರಂಪ್ ಸಿದ್ಧರಿಲ್ಲ. ಆದ್ದರಿಂದ, ಯಾವುದೇ ಒಪ್ಪಂದಕ್ಕೆ ಬರಲು ಸಾಧ್ಯವಾಗಿಲ್ಲ ಎಂದಿದ್ದಾರೆ.



ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಕೊರಿಯ-ಅಮೆರಿಕ ಶೃಂಗಸಭೆ ವಿಫಲ

ಅಮೆರಿಕ ಸಂಯುಕ್ತ ಸಂಸ್ಥಾನ (ಯುಎಸ್) ಮತ್ತು ಡೆಮಾಕ್ರಾಟಿಕ್ ಪೀಪಲ್ಸ್ ರಿಪಬ್ಲಿಕ್ ಕೊರಿಯಾ (ಡಿ ಪಿ ಆರ್ ಕೆ)- ಅಂದರೆ ಉತ್ತರ ಕೊರಿಯಾ - ಅಮೆರಿಕ ದೇಶಗಳ ಇಬ್ಬರು ಅಧ್ಯಕ್ಷರಾದ ಡೊನಾಲ್ಡ್ ಟ್ರಂಪ್ ಮತ್ತು ಕಿಮ್ ಜಾಂಗ್ ಉನ್ ನಡುವೆ ವಿಯೆಟ್ನಾಮಿನ ರಾಜಧಾನಿ ಹನಾಯ್ ನಗರದಲ್ಲಿ ನಡೆದ ಪರಮಾಣು ಶೃಂಗಸಭೆಯು ಯಾವುದೇ ಲಿಖಿತ ಒಪ್ಪಂದಕ್ಕೆ ಬರದೇ ವಿಫಲವಾಯಿತು ಎಂದೇ ರಾಜಕೀಯ ವಿಶ್ಲೇಷಕರ ಅಭಿಪ್ರಾಯವಾಗಿದೆ. ಹಾಗೆಯೇ ಮುಂದಿನ ಸಭೆ ಮತ್ತೆ ಯಾವಾಗ ಎಂದು ಅಸ್ಪಷ್ಟವಾಗಿರುವುದರಿಂದ, ಪರಮಾಣು-ಮುಕ್ತ ಶಾಂತಿಗಾಗಿ ಹಂಬಲಿಸುವ ಜನರಿಗೆ ಮತ್ತಷ್ಟು ಅನುಮಾನ ಮತ್ತು ಆತಂಕ ಕಾಡಲಾರಂಭಿಸಿದೆ.

ಈ ಇಬ್ಬರು ನಾಯಕರ ನಡುವೆ ನಿಖರವಾಗಿ ಏನು ನಡೆಯಿತು ಎಂದು ತಿಳಿದು ಬಂದಿಲ್ಲ. ಆದಾಗ್ಯೂ, ಕೊರಿಯಾ ಪರ್ಯಾಯ ದ್ವೀಪದಲ್ಲಿ ಪರಮಾಣು ಶಸ್ತ್ರಾಸ್ತ್ರಗಳನ್ನು ನಾಶ ಪಡಿಸಲು ಎರಡೂ ದೇಶಗಳು ಒಟ್ಟಾಗಿ ಕೆಲಸ ಮಾಡುವುದಾಗಿ ಕಳೆದ 2018 ರ ಜೂನ್ ತಿಂಗಳಲ್ಲಿ ಸಿಂಗಪುರ್ ನಲ್ಲಿ ನಡೆದ ಪ್ರಥಮ ಶೃಂಗಸಭೆಯಲ್ಲಿ ಉಭಯ ನಾಯಕರು ಜಂಟಿ ಹೇಳಿಕೆ ನೀಡಿದ್ದರು. ಇಡೀ ಜಗತ್ತೇ ಆ ಮಹತ್ವದ ಶೃಂಗಸಭೆ ಯಲ್ಲಿನ ಸಕಾರಾತ್ಮಕ ಮಾತುಕತೆಗಳನ್ನು ವಿಶ್ವ ಶಾಂತಿಯ ಪ್ರಕ್ರಿಯೆಗೆ ಒಂದು ಆಶಾದಾಯಕ ಬೆಳವಣಿಗೆಯೆಂದು ಪರಿಗಣಿಸಿತ್ತು. ಆದರೆ, ರಕ್ಷಣಾ ಕಾರ್ಯದರ್ಶಿ ಯಾಗಿ ಬೋಲ್ಟ್ ಬಂದ ನಂತರದಲ್ಲಿ, ಅಮೆರಿಕಾದ ಅಧ್ಯಕ್ಷರ ಬದಲಾದ ನಡವಳಿಕೆಗಳು ಹೊಸ ವ್ಯೂಹಾತ್ಮಕವಾದ ಆಯಾಮವನ್ನು ಪಡೆದುಕೊಳ್ಳುತ್ತಿವೆ. ಈ ಹಿನ್ನೆಲೆಯಲ್ಲಿ, ಹನಾಯ್ ನಲ್ಲಿ ನಡೆದ ಎರಡನೆಯ ಸಭೆಯ ನಂತರ, ಮತ್ತೆ ಆತಂಕ ಆವರಿಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಈ ಎರಡನೆಯ ಶೃಂಗಸಭೆ ಪರಮಾಣು ನಿಶ್ಶಸ್ತ್ರೀಕರಣಗೊಳಿಸುವ ನಿಟ್ಟಿನಲ್ಲಿ ಸಾಕಷ್ಟು ನಿರೀಕ್ಷೆಗಳನ್ನು ಉಂಟು ಮಾಡಿತ್ತು. ಶಾಂತಿ ಒಪ್ಪಂದಕ್ಕೆ ಸಹಿ ಹಾಕುವ ತಯಾರಿ ನಡೆಸಲಾಗಿತ್ತು ಎಂದು ದಕ್ಷಿಣ ಕೊರಿಯಾದ ಅಧ್ಯಕ್ಷ ರಾದ ಮೂನ್ ರವರು ಆಶಾದಾಯಕ ವ್ಯಕ್ತಪಡಿಸಿದ್ದರು. ಆದರೆ ಸಭೆ ಮುಗಿದ ನಂತರ ದಿಢೀರನೆ ಹೊರಟು ಹೋದರು. ಯಾವುದೇ ಒಪ್ಪಂದಕ್ಕೆ ಬರಲು ಸಾಧ್ಯವಾಗಿಲ್ಲ. ಆದರೆ, ಇಬ್ಬರು ಸಹಾ ಪ್ರತ್ಯೇಕವಾಗಿ ಪತ್ರಿಕಾ ಗೋಷ್ಠಿ ನಡೆಸಿದ್ದಾರೆ ಎನ್ನಲಾಗಿದೆ.

ಟ್ರಂಪ್ ತನ್ನ ನಿಲುವನ್ನು ಸಷ್ಟಗೊಳಿಸುತ್ತಾ, ಉತ್ತರ ಕೊರಿಯಾ ಎಲ್ಲಾ ಪರಮಾಣು ಅಣ್ವಸ್ತ್ರ ಕೇಂದ್ರಗಳನ್ನು ಸಂಪೂರ್ಣವಾಗಿ ನಾಶಗೊಳಿಸಬೇಕು, ಪರಮಾಣು-ಮುಕ್ತ ಉತ್ತರ ಕೊರಿಯಾಕ್ಕೆ ಆರ್ಥಿಕವಾಗಿ ತುಂಬಾ ಉತ್ತಮ ಭವಿಷ್ಯವಿದೆ ಎಂಬ ಸಿಂಗಪೂರ್ ನ ಹೇಳಿಕೆಯನ್ನು ಪುನರುಚ್ಚರಿಸಿದ್ದಾರೆ. ಆದರೆ, ಉತ್ತರ ಕೊರಿಯಾವು ಇದಕ್ಕೆ ಸಿದ್ದವಿಲ್ಲ ಎಂದಿದ್ದಾರೆ. ಇದಕ್ಕೆ ಕಿಮ್ ಜಾಂಗ್ ಉನ್ ರವರು, ತಮ್ಮ ಆತಂಕವನ್ನು ವ್ಯಕ್ತ ಪಡಿಸುತ್ತಾ, ಮೊದಲು, ಅಮೆರಿಕವು ನಮ್ಮದೇಶದ ಮೇಲೆ ಹೇರಿರುವ ನಿರ್ಬಂಧಗಳನ್ನು ತೆರವುಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ. ಆದರೆ ಇದಕ್ಕೆ ಟ್ರಂಪ್ ಸಿದ್ದರಿಲ್ಲ. ಆದ್ದರಿಂದ, ಯಾವುದೇ ಒಪ್ಪಂದಕ್ಕೆ ಬರಲು ಸಾಧ್ಯವಾಗಿಲ್ಲ ಎಂದಿದ್ದಾರೆ.

ಹಿಂದಿನ ಹಗ್ಗ ಜಗ್ಗಾಟ ಮುಂದುವರಿದಿದೆ ಎನ್ನಬಹುದು. ಒಬ್ಬರ ಮೇಲೆ ಇನ್ನೊಬ್ಬರಿಗೆ ಮಾತಿನಲ್ಲಿ ನಂಬಿಕೆ ಇಲ್ಲದಿರುವುದನ್ನು ಇಲ್ಲಿ ಗಮನಿಸಬಹುದು. ಆದರೆ, ಈ ಹಿಂದೆ ಕೊಟ್ಟಂತೆ ಪರಮಾಣು ಶಸ್ತ್ರಾಸ್ತ್ರಗಳ ಅಥವಾ ಕ್ಷಿಪಣಿ ಪರೀಕ್ಷೆಗಳನ್ನು ನಡೆಸುವುದಿಲ್ಲ ಎಂದು ಕಿಮ್ ಭರವಸೆ ನೀಡಿದ್ದಾರೆ. ಕಳೆದ ಸಿಂಗಪುರ್ ಸಭೆಯ ನಂತರ, ಅವರು ಕೊಟ್ಟ ಮಾತಿನಂತೆ ನಡೆದುಕೊಂಡಿದ್ದಾರೆ. ಯಾವುದೇ ಇಂತಹ ಕ್ಷಿಪಣಿಗಳ ಪರೀಕ್ಷೆಗಳನ್ನು ಈ ಅವಧಿಯಲ್ಲಿ ನಡೆಸಿಲ್ಲ. ಇದೊಂದು ಆಶಾದಾಯಕ ಬೆಳವಣಿಗೆ ಎಂದು ಅಮೆರಿಕ ಪರಿಗಣಿಸಬೇಕು. ಆದರೆ, ಇದಕ್ಕೆ ಅನುಗುಣವಾಗಿ, ಅಮೆರಿಕಾ ಇಲ್ಲಿಯವರೆಗೆ ಯಾವುದೇ ನಿರ್ಬಂಧಗಳ ತೆರವಿನ ಬಗ್ಗೆ ಕ್ರಮ ತೆಗೆದು ಕೊಂಡಿಲ್ಲವೆಂಬುದು ಅವರ ಗಟ್ಟಿಯಾದ ವಾದವಾಗಿದೆ. ಬದಲಿಗೆ, ಅಮೆರಿಕವು ಸಂಪೂರ್ಣ ಪರಮಾಣು ಶಸ್ತ್ರಾಸ್ತ್ರಗಳ ನಾಶ ಮಾಡುಬೇಕೆಂದು ಉತ್ತರ ಕೊರಿಯವನ್ನು ಒತ್ತಾಯಿಸುತ್ತಿದೆ. ಹಾಗಾಗಿ, ನಂಬಿಕೆ ಅಪನಂಬಿಕೆ ಪ್ರಶ್ನೆಗಳು ಇಬ್ಬರನ್ನೂ ಕಾಡುತ್ತಿವೆ ಎಂದು ಉಭಯ ದೇಶಗಳ ರಾಜಕೀಯ ವಕ್ತಾರರ ಸಷ್ಟ ಅಭಿಪ್ರಾಯಗಳಾಗಿವೆ. ಆದರೆ, ಉತ್ತರ ಕೊರಿಯಾ ಅಮೆರಿಕ ಹೇರಿರುವ ಎಲ್ಲಾ ನಿರ್ಬಂಧಗಳನ್ನು ಒಟ್ಟಿಗೆ ತೆರವುಗೊಳಿಸಬೇಕೆಂಬ ಬೇಡಿಕೆಯನ್ನು ಕೂಡ ಇಟ್ಟಿಲ್ಲ, ಕೆಲವು ಪ್ರಮುಖ ಆಯಕಟ್ಟಿನ ನಿರ್ಬಂಧಗಳನ್ನು ಮಾತ್ರ ಸದ್ಯಕ್ಕೆ ಸಡಿಲಗೊಳಿಸಬೇಕೆಂದು ಆಗ್ರಹಿಸಿದೆ ಅಷ್ಟೆ. ಆದರೆ, ಅಮೆರಿಕ ಇದಕ್ಕೂ ಸಿದ್ಧವಿಲ್ಲ. ಆದ್ದರಿಂದ, ನಮಗೆ ಆತಂಕವಿದೆ ಎನ್ನುತ್ತಾರೆ ಕಿಮ್.


ಈ ಹಿನ್ನೆಲೆಯಲ್ಲಿ ತಕ್ಷಣದಲ್ಲಿ ಯಾವುದೇ ಅಣ್ವಸ್ತ್ರ-ನಾಶದ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿದ್ದಾರೆ. ಏಕೆಂದರೆ, ಬೋಲ್ಟ್ ರಕ್ಷಣಾ ಇಲಾಖೆಗೆ ಬಂದ ನಂತರ, ಟ್ರಂಪ್-ಬೋಲ್ಟ್ ರ ಹೊಸ ವ್ಯೂಹದ ನೀತಿಯ ಪ್ರಕಾರ ಅಮೆರಿಕಾವು, ಇರಾನ್ ಜೊತೆಗಿನ ಸಂಬಂಧವನ್ನು ಕಡಿತಗೊಳಿಸಿಕೊಂಡಿತು ಹಾಗೂ ಇತ್ತೀಚಿಗೆ, ವೆನೆಜುವೆಲಾ ದಲ್ಲಿ ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದ ಮಡೂರ ಸರ್ಕಾರವನ್ನು ಕಿತ್ತು ಹಾಕಿ ಪ್ರಭುತ್ವ ದ ಬದಲಾಣೆಗೆ ನಡೆಸುತ್ತಿರುವ ಪ್ರಯತ್ನಗಳು, ಹಾಗೂ ಒಪ್ಪಂದವಾದ ನಂತರ, ಲಿಬಿಯಾದಲ್ಲಿ, ಗಡಾಫಿಗೆ ಮತ್ತು, ಇರಾಕ್ ನಲ್ಲಿ ಸದ್ದಾಂ ಹುಸ್ಸೇನ್ ಗೆ ಆದ ದುರ್ಗತಿಗಳು - ಇವೆಲ್ಲಾ ಅಮೆರಿಕಾದ ಇತಿಹಾಸವನ್ನು ಬಯಲು ಗೊಳಿಸುತ್ತವೆ. ಆದ್ದರಿಂದ, ಇವೆಲ್ಲವನ್ನು ಚೆನ್ನಾಗಿ ತಿಳಿದಿರುವ ಉತ್ತರ ಕೊರಿಯಾವು ಕಿಮ್ ಜಾಂಗ್ ಉನ್ ನಾಯಕತ್ವದಲ್ಲಿ, ಟ್ರಂಪ್ ನ ಹೊಸ ತಂತ್ರಗಳನ್ನು ಕಾರ್ಯ ರೂಪಕ್ಕೆ ತರಲು, ಅಷ್ಟು ಸುಲಭವಾಗಿ ಬಿಡುವುದಿಲ್ಲ ಎಂದು ಅಲ್ಲಿನ ರಾಜಕೀಯ ಪಂಡಿತರ ಅಭಿಪ್ರಾಯ. ಹಾಗಾಗಿ, ಅಣ್ವಸ್ತ್ರ-ಮುಕ್ತ ಶಾಂತಿಯ ಒಪ್ಪಂದ ಬಹು ದೂರದ ಮಾತಾಗಿದೆ ಎಂದು ಹೇಳಬಹುದು.

ಬೊಲಿವಿಯಾ: ಎಲ್ಲರಿಗೂ ಸಂಪೂರ್ಣ ಆರೋಗ್ಯ ಸಂರಕ್ಷಣೆ

ಲ್ಯಾಟಿನ್ ಅಮೆರಿಕನ್ ರಾಷ್ಟಗಳಲ್ಲಿ ಒಂದಾದ, ಬೊಲಿವಿಯಾ ವು ತಮ್ಮ ದೇಶದ ಎಲ್ಲಾ ಪ್ರಜೆಗಳಿಗೆ ಅನ್ವಯವಾಗುವಂತ "ಯುನಿಫೈಡ್ ಹೆಲ್ತ್ ಸಿಸ್ಟಮ್ (ಎಸ್.ಯು.ಎಸ್)ನ್ನು ದೇಶಕ್ಕೆ ಸಮರ್ಪಿಸಿದೆ. ಬೊಲಿವಿಯಾದ ಅಧ್ಯಕ್ಷ ಇವೊ ಮೊರೇಲ್ಸ್ ರವರು ಈ ಯೋಜನೆಯ ರೂವಾರಿಯಾಗಿದ್ದು, ಎಸ್.ಯು.ಎಸ್ ಯೋಜನೆಯನ್ನು ಕಳೆದ ತಿಂಗಳು ಪರಿಚಯಿಸಿದ್ದಾರೆ. ಇದು ಆ ದೇಶದ 50 ಲಕ್ಷ ಬಡವರಿಗೆ ತಲುಪುತ್ತದೆ ಎಂದು ಅಂದಾಜಿಸಲಾಗಿದೆ.

ಒಂದು ಬಡ ರಾಷ್ಟವಾದ ಬೊಲಿವಿಯಾ ದೇಶವು, ಲ್ಯಾಟಿನ್ ಅಮೆರಿಕದ ಇನ್ನಿತರ ರಾಷ್ಟಗಳಿಗೆ ಮಾದರಿಯಾಗಿದ್ದು, ಇದೇ ರೀತಿಯ ಆರೋಗ್ಯ ಸಂರಕ್ಷಣಾ ಯೋಜನೆಗಳನ್ನು ರೂಪಿಸಿಕೊಳ್ಳಲು ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯೂ. ಎಚ್.ಒ) ವಕ್ತಾರ ಫರ್ನಾಂಡೊ ಲೀನ್ಸ್ ರವರು ಒಂದು ಸಮ್ಮೇಳನದಲ್ಲಿ ಮನವಿ ಮಾಡಿದ್ದಾರೆ. ಬೊಲಿವಿಯವು ಅಧ್ಯಕ್ಷ ಮೊರೇಲ್ಸ್ ರ ಆಡಳಿತದಲ್ಲಿ ಆರೋಗ್ಯ ಸಂರಕ್ಷಣಾ ವಿಚಾರದಲ್ಲಿ ಅತ್ಯುತ್ತಮ ಕಾರ್ಯ ನಿರ್ವಹಿಸಿದೆ. ವಿಶ್ವ ಆರೋಗ್ಯ ಸಂಸ್ಥೆಯು ಇದನ್ನು ಗುರುತಿಸಿದೆ ಮತ್ತು ಅದಕ್ಕಾಗಿ ಅವರನ್ನು ಅಭಿನಂದಿಸಿದೆ.


ಇವರ ಯೋಜನೆಯ ಫಲಿತಾಂಶಗಳು ಅಪಾರವಾಗಿವೆ. ಸಾರ್ವಜನಿಕ ಆರೋಗ್ಯ ಮತ್ತು ಸಾಮೂಹಿಕ ಆರೋಗ್ಯ ಕ್ಷೇತ್ರದಲ್ಲಿ ಅಸಾಧಾರಣ ಸೇವೆ ದಾಖಲಾಗಿದೆ. ಶಿಶು ಮರಣ, ಮಗುವಿನ ಅಪೌಷ್ಟಿಕತೆ, ಮತ್ತು ರೋಗರುಜಿನಗಳಿಂದ ಸಾವುಗಳು ನಿಯಂತ್ರಣ ದಲ್ಲಿವೆ. 2006 ರಿಂದ ಬೊಲಿವಿಯಾ ಆರೋಗ್ಯ ಸಂರಕ್ಷಣಾ ಯೋಜನೆಯ ಮೇಲೆ ಹೆಚ್ಚು ಖರ್ಚು ಮಾಡುತ್ತಿದೆ. ಮೊರೇಲ್ಸ್ 2014 ರ ಚುನಾವಣಾ ಭರವಸೆಗಳಲ್ಲಿ ಇದು ಪ್ರಮುಖ ವಾದ ಯೋಜನೆಯಾಗಿದೆ. ಮೊಬೈಲ್ ಮತ್ತು ಟೆಲಿಕ್ಲಿನಿಕ್ ಸೇರಿದಂತೆ ಹೊಸ ತಂತ್ರಜ್ಞಾನ ವನ್ನು ಈ ಯೋಜನೆ ಅಳವಡಿಸಿಕೊಂಡಿದೆ. ಪ್ರಸ್ತುತ ಟುಪಕ್ ಕಟರಿ ಉಪಗ್ರಹ ಮತ್ತು 284 ಆಪ್ಟಿಕಲ್ ಫೈಬರ್ ಕೇಂದ್ರಗಳನ್ನು ಹೊಂದಿದ್ದು, ಆಪ್ಟಿಕಲ್ ಫೈಬರ್ ಮೂಲಕ ಟೆಲಿ ಮೆಡಿಸನ್ ವ್ಯವಸ್ಥೆ ಯನ್ನು ಮಾಡಲಾಗಿದೆ. ಒಟ್ಟಾರೆಯಾಗಿ, ಮೊರೇಲ್ಸ್ ಅಧ್ಯಕ್ಷತೆಯಲ್ಲಿ, ಬೊಲಿವಿಯಾವು ಲ್ಯಾಟಿನ್ ಅಮೆರಿಕ ನಲ್ಲಿ, ತೀವ್ರ ಬಡತನದ ಮಟ್ಟವನ್ನು ತಗ್ಗಿಸಲು ಇಂತಹ ಹಲವಾರು ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತಂದಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆಯು ಗುರುತಿಸಿದೆ.



JANASHAKTHI KANNADA VARA PATRIKE MARCH 11-17, 2019 Price: Rs. 10/- Date of Publication: 8 MARCH 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ನವಕರ್ನಾಟಕ ಮತ್ತು ಕ್ರಿಯಾ ಗಳ ಜಂಟಿ ಯೋಜನೆಯಾದ 'ಮಾರ್ಕ್ಸ್ 200–ಕ್ಯಾಪಿಟಲ್ 150 ಮಾಲಿಕೆ'ಯ ಮೂರನೇ ಕಂತಿನಲ್ಲಿ ಮೂರು ಪುಸ್ತಕಗಳನ್ನು ಮೈಸೂರಿನಲ್ಲಿ ಮಾರ್ಚ್ 17 ರಂದು ಬಿಡುಗಡೆ ಮಾಡಲಾಗುತ್ತಿದೆ. ಅಲ್ಲಿ ಬಿಡುಗಡೆಯಾಗಲಿರುವ ಎರಡು ಪುಸ್ತಕಗಳ ಪರಿಚಯ ಈಗಾಗಲೇ 'ಜನಶಕ್ತಿ'ಯ ಹಿಂದಿನ ಸಂಚಿಕೆಯೊಂದರಲ್ಲಿ ಪ್ರಕಟವಾಗಿದೆ. ಮೂರನೇಯ ಪುಸ್ತಕ ಹಿರಿಯ ಕಮ್ಯುನಿಸ್ಟ್ ನಾಯಕ ಕಾ. ಬಿ.ವಿ.ಕಕ್ಕಿಲ್ಲಾಯ ಅವರು ಬರೆದ ಮೇರುಕೃತಿ "ಕಾರ್ಲ್ ಮಾರ್ಕ್ಸ್ – ಬದುಕು ಬರಹ". 1985ರಲ್ಲಿ ಮೊದಲು ಪ್ರಕಟವಾದ ಈ ಕೃತಿಯ ಪ್ರತಿಗಳು ಅಲಭ್ಯವಾಗಿದ್ದು ಅದರ ಮರುಪ್ರಕಟಣೆ ಮೂಲಕ ಅದನ್ನು ಲಭ್ಯಗೊಳಿಸಲಾಗುತ್ತಿದೆ. ಈ ಕೃತಿಗೆ ಡಾ. ಜಿ. ರಾಮಕೃಷ್ಣ ಅವರು ಬರೆದ ಮುನ್ನುಡಿಯ ಆಯ್ದ ಭಾಗಗಳ ಮೂಲಕ ಈ ಮೇರುಕೃತಿಯ ಕಿರುಪರಿಚಯ ಇಲ್ಲಿದೆ.

ಕಾರ್ಲ್ ಮಾರ್ಕ್ಸ್ – ಬದುಕು ಬರಹ




ಕಾರ್ಲ್ ಮಾರ್ಕ್ಸ್ ಅವರ ಜೀವಿತ ಕಾಲದಲ್ಲಿ ಅವರ ಸೈದ್ಧಾಂತಿಕ ಚಿಂತನೆಯ ಬಗೆಗೆ ಕಟೂಕ್ತಿಗಳನ್ನಾಡಿದವರು ಅನೇಕರು. ಅವರ ಹೋರಾಟಗಳನ್ನು ಚಾರಿತ್ರಿಕವಾಗಿ ಅಸಂಬದ್ಧವೆಂದು ಹೀಗಳೆದ ಅವರ ಅನೇಕ ಸಮಕಾಲೀನರು ಹೇಳ ಹೆಸರಿಲ್ಲದಂತೆ ಕಣ್ಮರೆಯಾಗಿದ್ದಾರೆ. ಅವರ ತತ್ವಜಿಜ್ಞಾಸೆಯನ್ನು ಅಪ್ರಬುದ್ಧವೆಂದು ಬಣ್ಣಿಸಿದ ವಿಮರ್ಶಕರು ವಿಪುಲ. ವಿಶ್ವದ ಯಾವೊಬ್ಬ ವ್ಯಕ್ತಿಯೂ ಇಡೀ ಮಾನವ ಜನಾಂಗದ ಆಶಾಕಿರಣವಾಗಿ ಕಂಗೊಳಿಸುವುದು ಸುಲಭಸಾಧ್ಯವಲ್ಲ. ಅಂತಹ ಸ್ಥಾನಮಾನಗಳನ್ನು ಗಳಿಸಿಕೊಂಡಿರುವ ಮೇರುಮಾನವ ಕಾರ್ಲ್ ಮಾರ್ಕ್ಸ್. ..

ಎಲ್ಲೆಲ್ಲೂ ಮಾರ್ಕ್ಸ್ ಮತ್ತು ಅವರ ವಾದದ ಛಾಯೆ ಅನವರತವಾಗಿ ಕಂಡುಬಂದಿರುವುದು ಸುಸ್ಪಷ್ಟ. ಮಾನವತೆಯ ದೀಪಧಾರಿಗಳಾಗಿ ವಿಶ್ವಚೇತನಕ್ಕೆ ಸ್ಫುರಿಸುವ ಧೀಮಂತ ವ್ಯಕ್ತಿಗಳು. ನಮ್ಮ ಈ ಚಿಕ್ಕ ಭೂಗ್ರಹ ಸದಾಕಾಲಕ್ಕೂ ಕ್ರಿಯಾತ್ಮಕತೆಯ ದಿಟ್ಟಹೆಜ್ಜೆಯನ್ನು ಹಾಕುತ್ತಿರಬೇಕೆಂದು ಆಶಿಸುವ ಶಾಂತಿಯ ಹೋರಾಟಗಾರರು, ದುಃಖ–ದುಮ್ಮಾನಗಳನ್ನು ನೀಗಿ ಪ್ರಜ್ವಲವಾದ ಸಾಂಸ್ಕೃತಿಕ ಜೀವನವನ್ನು ತಮ್ಮದನ್ನಾಗಿಸಿಕೊಳ್ಳಬೇಕೆಂಬ ಆಕಾಂಕ್ಷೆಯಿಂದ ಬಿರುಸಿನ ಹೋರಾಟಗಳಲ್ಲಿ ತೊಡಗಿರುವವರು, ಎಲ್ಲಾ ಮಾರ್ಕ್ಸ್ ಅವರತ್ತ ಕಣ್ಣು ಹಾಯಿಸಿ ಅವರಿಂದ ಸ್ಫೂರ್ತಿ ಹೊಂದುತ್ತಿರುವುದು ಇಂದಿನ ವಿಶ್ವಸತ್ಯವಾಗಿದೆ.

"ನಮ್ಮಲ್ಲೆಲ್ಲಾ ಅತಿಹೆಚ್ಚಿನ ಮೇಧಾವಿಯಾಗಿದ್ದ ಆತ ಕೊನೆಯುಸಿರೆಳೆದ," ಎಂದು ಫ್ರೆಡರಿಕ್ ಏಂಗೆಲ್ಸ್ ಅವರು ಮಾರ್ಕ್ಸ್‌ರನ್ನು ಮಣ್ಣು ಮಾಡುವಾಗ ಉದ್ಗರಿಸಿದ್ದು ಅತಿಶಯೋಕ್ತಿಯ ಮಾತಾಗಿರಲಿಲ್ಲ. ಅವರೇ ಹೇಳಿದಂತೆ ಮಾರ್ಕ್ಸ್ ತಮ್ಮ ಜೀವನದಲ್ಲಿ ಅತ್ಯಂತ ಶ್ರೇಷ್ಠವಾದ ಗುಣವೊಂದನ್ನು ಮೂರ್ತೀಭವಿಸಿಕೊಂಡಿದ್ದರು : ಅದೆಂದರೆ, ಇಡೀ ಮಾನವಕುಲವನ್ನು ನಿಷ್ಕಾಪಟ್ಯದಿಂದ ಸಂಪೂರ್ಣವಾಗಿ ಪ್ರೀತಿಸುವುದು. ಇದಕ್ಕೆ ಪ್ರತಿಯಾಗಿ ಮಾನವಕುಲದ ಬಹುಭಾಗ ಆತನನ್ನು ಪ್ರೀತಿಸಿದೆ, ಮುಂದೆಯೂ ಪ್ರೀತಿಸುತ್ತದೆ. ಆತನನ್ನು ತೆಗಳುವ ಮತ್ತು ದ್ವೇಷಿಸುವ ವ್ಯಕ್ತಿಗಳು ಮತ್ತು ಶಕ್ತಿಗಳು ಇಲ್ಲವೆಂದಲ್ಲ. ಆದರೆ ಆ ವರ್ಗ ವರ್ತಮಾನ ಇತಿಹಾಸದ ಕೊನೆಯ ಪುಟಗಳಲ್ಲಿ ಉಲ್ಲೇಖಕ್ಕೆ ಪಾತ್ರವಾಗುವಂತಹ ವರ್ಗ ಮಾತ್ರ. ಈ ವರ್ಗವೇ ಆತನ ಸಿದ್ಧಾಂತವನ್ನು ಹುರುಳಿಲ್ಲದ, ಅಪಥ್ಯವಾದ ಜಿಜ್ಞಾಸೆ ಎಂದು ಮೂದಲಿಸುವುದು. ಅದು ನಿಜಕ್ಕೂ ಹುರುಳಿಲ್ಲವಾದದ್ದಾದರೆ ಕಳೆದ ಒಂದುವರೆ ಶತಮಾನದಿಂದಲೂ ಅದನ್ನು ಸಾಬೀತುಗೊಳಿಸಲು ಏಕಿಷ್ಟು ಶ್ರಮ ವಹಿಸಿದ್ದಾರೆ, ಈ ವರ್ಗದವರು ಮತ್ತು ಅವರ ಬೌದ್ಧಿಕ ಕೈಯಾಳುಗಳು?

ಮಾನವ ಸಮಾಜದ ಭವಿಷ್ಯವನ್ನು ನುಡಿದ ದೇವದೂತನೆಂದು ಮಾರ್ಕ್ಸ್‌ಗೆ ಪ್ರಾಶಸ್ತ್ಯದ ಅಗತ್ಯವಿಲ್ಲ. ಸಮಾಜದ ವಿಶ್ಲೇಷಣೆ ಮತ್ತು ಬದಲಾವಣೆಗಳತ್ತ ನಿರಾತಂಕವಾಗಿ ಮುನ್ನುಗ್ಗಿದ ಸ್ಥಿತಪ್ರಜ್ಞನೆಂದಷ್ಟೇ ಆತನಿಗೆ ಮಾನ್ಯತೆ. ಅಪಕ್ವವಾದ ಬುದ್ಧಿಮತ್ತೆಯಿಂದ ಆತನ ತತ್ವಶಾಸ್ತ್ರ ಪ್ರಣಾಲಿಕೆಯನ್ನು ಜರಿಯುವುದು ಕಳೆದ ಒಂದುವರೆ ಶತಮಾನದ ಬೌದ್ಧಿಕ ಪರಂಪರೆಯ ಕಳಂಕವಾದ ಒಂದು ಭಾಗ. ಆತನ ಗ್ರಂಥಗಳ ಒಂದಕ್ಷರವನ್ನೂ ಓದದೆ ಅಥವಾ ಓದಿಯೂ ಸಮಗ್ರವಾಗಿ ಗ್ರಹಿಸದೆ ಆತನನ್ನು ತಳ್ಳಿಹಾಕುವುದು ಈ ಬೌದ್ಧಿಕ ಕವಾಯತುದಾರರಿಗೆ ಲಭ್ಯವಿರುವ ಏಕೈಕ ಮಾರ್ಗ. ಬರ್ನಾರ್ಡ್ ಶಾ ಅವರ ಜೀವನ ಚರಿತ್ರಕಾರನಾದ ಹೆಸ್ಕೆತ್ ಪಿಯರ್ಸನ್ ಒಂದೆಡೆ ಹೀಗೆ ಬರೆಯುತ್ತಾನೆ : "ನಾನು ಮಾರ್ಕ್ಸ್‌ರ ಗ್ರಂಥಗಳನ್ನು ಓದಿಲ್ಲ, ಓದುವುದೂ ಇಲ್ಲ; ಅದನ್ನೋದುವುದಕ್ಕಿಂತ ಸಾವೇ ಉಚಿತವೆಂದು ಬಗೆಯುವವನು ನಾನು." – ಆದರೂ ಮಾರ್ಕ್ಸ್‌ರ ಬಗ್ಗೆ ತೀರ್ಮಾನವನ್ನು ಕೊಡಲು ಅವನು ಒಂದಿಷ್ಟೂ ಹಿಂಜರಿಯಲಿಲ್ಲ ! ಅವನ ಸಂತತಿಗೆ ಸೇರಿದವರು ವಿರಳವಾಗಿಲ್ಲದಿರುವುದು ಒಂದು ಸೋಜಿಗದ ಸಂಗತಿ. ಡಾರ್ವಿನ್ನನ ವಿಕಾಸವಾದವನ್ನು ನುಚ್ಚುನೂರು ಮಾಡಲು ಧರ್ಮಾಂಧ ಪಾದ್ರಿಗಳು 1859ರಿಂದ ಎಡೆಬಿಡದೆ ಕಾರ್ಯನಿರತರಾಗಿದ್ದರೆ ಮಾರ್ಕ್ಸ್ ಅವರ ಆಮೂಲಾಗ್ರವಾದ ತಾತ್ವಿಕ–ಸಾಮಾಜಿಕ–ಆರ್ಥಿಕ ಸಿದ್ಧಾಂತಗಳನ್ನು ಬಗ್ಗುಬಡಿಯಲು ಎಲ್ಲ ಕ್ಷೇತ್ರಗಳಲ್ಲೂ ಹೋರಾಟ 1848ರಿಂದಲೂ ನಡೆಯುತ್ತಲೇ ಇದೆ. ಡಾರ್ವಿನ್ ಆಗಲಿ ಮಾರ್ಕ್ಸ್ ಆಗಲಿ ಅದರಿಂದ ವಿಚಲಿತರಾಗುವ ಸಂಭವವಿಲ್ಲ. ಕಾರಣ, ಅವರ ಪ್ರತಿಪಾದನೆಗಳು ಆಳವಾದ ಅಧ್ಯಯನದ ತಳಹದಿಯ ಮೇಲೆ ನಿಂತಿರುವ ವೈಜ್ಞಾನಿಕ ನಿರೂಪಣೆಗಳು.

ಮಾರ್ಕ್ಸ್‌ರ ಕೃತಿಗಳು ಕೇವಲ ಶಾಸ್ತ್ರ ಗ್ರಂಥಗಳಲ್ಲ. ಮಾರ್ಕ್ಸ್‌ವಾದವು ಮೂಲತಃ ಕ್ರಿಯೆಗೆ ಮಾರ್ಗದರ್ಶಿ; ಮಾನವನ ಜೀವನದಲ್ಲಿ ಹಾಸುಹೊಕ್ಕಾಗಿ ಸೇರಿರುವ ಪ್ರತಿಯೊಂದು ಕ್ಷೇತ್ರಕ್ಕೂ ಅನ್ವಯವಾಗುವಂತಹ ವಿಶ್ವದೃಷ್ಟಿ; ಬದಲಾದ ಸಂದರ್ಭಗಳಲ್ಲಿ ತನ್ನ ನೆಲೆಯನ್ನು ಕಳೆದುಕೊಳ್ಳದೆ ವಿಕಾಸಗೊಳ್ಳುವ ತಾತ್ವಿಕ ದರ್ಶನ. ಇದರ ನಿಜವಾದ ವಾರಸುದಾರರು ವಿಶ್ವದ ದುಡಿಯುವ ಜನತೆ. ಶೋಷಕ ವರ್ಗದ ಭಟ್ಟಂಗಿ ತತ್ವಜ್ಞಾನಿಗಳಿಗೆ ಮಾರ್ಕ್ಸ್‌ವಾದವು ಕಳಪೆಯಾದ ಸಿದ್ಧಾಂತವೆಂದೆನಿಸಿದರೆ ಅಚ್ಚರಿಪಡಬೇಕಾದದ್ದೇನೂ ಇಲ್ಲ. ಏಕೆಂದರೆ, ಅವರಿಗೆ ಉಳಿದಿರುವ ಒಂದೇ ಸಮಾಧಾನ ಅದು! ಆದರೆ ಶೋಷಿತ ವರ್ಗಕ್ಕೆ ಅದು ಬಹಳ ಪ್ರಬಲವಾದ ಅಸ್ತ್ರ, ಅನ್ವೇಷಣೆಗೆ ಸಹಕಾರಿ ಹಾಗೂ ವಿಮೋಚನೆಗೆ ಮಾರ್ಗ.



ವಸ್ತುನಿಷ್ಠವಾದ ಜ್ಞಾನಕ್ಕೆ ಆದ್ಯತೆ ನೀಡಿದ ಮಾರ್ಕ್ಸ್ ಅವರ ಬಗೆಗಿನ ವಸ್ತುನಿಷ್ಠವಾದ ಪರಿಚಯ ಈ ಕಾರಣದಿಂದ ದುಡಿಯುವ ಜನತೆಗೆ ಅತ್ಯವಶ್ಯಕವೆಂದಾಯಿತು. ಹೋರಾಟದ ಕತ್ತಿಯ ಅಲಗು ಮೊನಚಾಗಬೇಕಾದರೆ ಇಂತಹ ವಸ್ತುನಿಷ್ಠ ಪರಿಚಯ ಅನಿವಾರ್ಯ. ಶತ ಶತಮಾನಗಳ ಕಾಲ ದಾರಿದ್ರ್ಯ, ಅನಕ್ಷರತೆ, ಅಸಮಾನತೆ ಮತ್ತು ಕೈಂಕರ್ಯಗಳಿಗೆ ತುತ್ತಾಗಿದ್ದು ಬಳಲಿ ಬೆಂಡಾಗಿರುವ ಮರ್ದಿತ ಜನಾಂಗ ಭಾರತದಲ್ಲಿ ಹೇರಳವಾಗಿದೆ. ವರ್ಣ–ವರ್ಗಗಳ ವೈವಿಧ್ಯಮಯವಾದ ಬಲಾತ್ಕಾರಗಳಿಂದ ಬಂಧಿತರಾದ ಭಾರತದ ಜನಕೋಟಿಯ ಬವಣೆಯನ್ನು ನೀಗಿಸಲು ಅನೇಕ ಸುಧಾರಣಾವಾದಿಗಳು ಭಗೀರಥ ಪ್ರಯತ್ನಗಳನ್ನು ನಡೆಸುತ್ತಲೇ ಬಂದಿದ್ದಾರೆ. ಆದರೆ ಮರ್ದಿತ ಜನಸಮೂಹಕ್ಕೆ ಅದರಿಂದ ಗಂಗೆಯ ಶೀತಲತ್ವ–ಪಾವನತ್ವಗಳ ಅನುಭವ ಉಂಟಾಗಿಲ್ಲ. ಈ ಜನಸಮೂಹದ ಪ್ರಜ್ಞಾಪೂರ್ವಕ ಭಾಗವಹಿಸುವಿಕೆಯ ಅಭಾವದಲ್ಲಿ ಕ್ರಾಂತಿಕಾರಿ ದಾಪುಗಾಲು ನಮಗೆ ಕೇವಲ ಭ್ರಮೆಯಾಗಿಯೇ ಉಳಿಯುತ್ತದೆ. ಅಂತೆಯೇ ಆ ಜನಸಮೂಹದ ವಿಮುಕ್ತಿಯೂ ಭ್ರಾಮಕ ಲೋಕದ ಹಣ್ಣಲ್ಲದೆ ಬೇರೇನೂ ಆಗಿರಲಾರದು. ಪ್ರಬಲವಾದ ಅಸ್ತ್ರವನ್ನು ಹೊಂದಿರುವವನು ವಿಜಯಿಯಾಗಬೇಕಾದರೆ ಮೊಟ್ಟಮೊದಲು ಅವನಿಗೆ ಆ ಅಸ್ತ್ರದ ಬಳಕೆಯ ವಿಧಾನ ತಿಳಿದಿರಬೇಕು, ಸಂದರ್ಭಕ್ಕೆ ಸರಿಹೊಂದುವಂತೆ ಆ ಅಸ್ತ್ರವನ್ನು ಪ್ರಯೋಗಿಸುವ ಕುಶಲತೆ ಇರಬೇಕು. ನಮ್ಮ ಶೋಷಣೆಯ ಮೂಲವನ್ನರಸಿ ಅದನ್ನು ನಿರ್ಮೂಲನಗೊಳಿಸುವ ಸಾಮರ್ಥ್ಯವನ್ನು ಪಡೆಯದಿರುವುದು ನಾವಿನ್ನೂ ಪಿಡುಗಿನಿಂದ ಪಾರಾಗದಿರಲು ಮೂಲ ಕಾರಣ. ದಿನನಿತ್ಯದ ಸಂಕಷ್ಟಗಳನ್ನೆದುರಿಸುವಲ್ಲಿ ಅಲ್ಲೊಂದು ಇಲ್ಲೊಂದು ತೇಪೆದಾರಿ ತಂತ್ರವು ಕೆಲವೊಮ್ಮೆ ಸ್ವಲ್ಪಮಟ್ಟಿಗೆ ಫಲಕಾರಿಯಾಗಿ ಕಂಡಿರಬಹುದು; ದಂಗುಬಡಿಸುವ ಪ್ರಚಂಡ ಆಟಾಟೋಪಗಳ ನಡುವೆ ಇಂತಹ ಝುರಿ ತುಸು ಸಂತಸವನ್ನೂ ನೀಡಬಹುದು. ಸಹನೆಯನ್ನೂ ಪರಲೋಕದ ಸೌಂದರ್ಯವನ್ನೂ ವೈಭವೀಕರಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಆಳುವ ಶೋಷಕ ವರ್ಗಕ್ಕೆ ಇದರಿಂದ ಅತಿಹೆಚ್ಚಿನ ಲಾಭವಿದೆ, ಸುಖವಿದೆ, ಭದ್ರತೆಯಿದೆ. ಇದನ್ನು ಆಗುಗೊಡದೆ ಭಾರತದ ಜನತೆ ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳಲು ಸಮರ್ಥವಿದೆ. ಆದರೆ, ವಿಶ್ಲೇಷಣೆ ಮತ್ತು ಪ್ರಜ್ಞಾಪೂರ್ವಕ ಹೋರಾಟಗಳಿಂದ ಮಾತ್ರ ಆ ಸಾಮರ್ಥ್ಯದ ಆವಿಷ್ಕಾರ ಸಾಧ್ಯ.

ಈ ದಿಕ್ಕಿನಲ್ಲಿ ಮುನ್ನಡೆಯಲು ಕಾರ್ಲ್ ಮಾರ್ಕ್ಸ್‌ರ ಜೀವನ, ಸಿದ್ಧಾಂತ, ಸಂಘಟನಾ ಚಾತುರ್ಯ ಮತ್ತು ಹೋರಾಟಗಳು ಭಾರತದ ಜನತೆಗೆ ಬೋಧಪ್ರದವಾದುವು. ಶ್ರೀ ಬಿ. ವಿ. ಕಕ್ಕಿಲ್ಲಾಯ ಅವರು ಈ ಎಲ್ಲ ಅಂಶಗಳನ್ನೊಳಗೊಂಡಂತೆ ಕನ್ನಡದಲ್ಲಿ ಒಂದು ಗ್ರಂಥವನ್ನು ರಚಿಸಿರುವುದು ಸುತ್ತ್ಯರ್ಹವಾಗಿದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ, ದುಡಿಯುವ ಜನರ ವಿವಿಧ ಹೋರಾಟಗಳಲ್ಲಿ ಮತ್ತು ಕಮ್ಯುನಿಸ್ಟ್ ಚಳುವಳಿಯಲ್ಲಿ ಸ್ವತಃ ಧೀಮಂತ ಮತ್ತು ದಿಟ್ಟತನದ ಪಾತ್ರ ವಹಿಸಿರುವ ಶ್ರೀ ಕಕ್ಕಿಲ್ಲಾಯರು ಇಂತಹ ಕೃತಿಯ ರಚನೆಗೆ ಅತ್ಯಂತ ಸೂಕ್ತವಾದ ವ್ಯಕ್ತಿಯಾಗಿದ್ದಾರೆ. ಸರಳವಾದ ಭಾಷೆಯಲ್ಲಿ ಎಂತಹ ಸಾಮಾನ್ಯ ಅಕ್ಷರಸ್ಥನೂ ಅರ್ಥಮಾಡಿಕೊಳ್ಳುವಂತೆ ಮಾರ್ಕ್ಸ್‌ವಾದದ ಗಹನ ತತ್ವಗಳನ್ನು ಪ್ರತಿಪಾದಿಸುವುದೆಂದರೆ ಸುಲಭದ ಮಾತಲ್ಲ. ಅದನ್ನು ಸಾಧಿಸಿರುವುದು ಶ್ರೀ ಕಕ್ಕಿಲ್ಲಾಯರ ಶ್ಲಾಘನೀಯವಾದ ಹಿರಿಮೆ. ಕನ್ನಡದ ಜನ ಅವರಿಗೆ ಸಹಜವಾಗಿಯೇ ಋಣಿಯಾಗಿರುತ್ತಾರೆ.

ಮಾರ್ಕ್ಸ್ ಅವರ ಜೀವನ ಮತ್ತು ಸಿದ್ಧಾಂತಗಳನ್ನು ಕುರಿತಂತೆ ಹೇರಳವಾಗಿಯಲ್ಲವಾದರೂ ಕನ್ನಡದಲ್ಲಿ ಕೆಲವು ಗ್ರಂಥಗಳು ಲಭ್ಯವಿವೆ. ಮಾರ್ಕ್ಸ್‌ರ ಕೆಲವು ಕೃತಿಗಳ ಕನ್ನಡ ಭಾಷಾಂತರಗಳೂ ಇವೆ. ಆದರೆ ಸಮಗ್ರವಾದ ಹಾಗೂ ಸರಳವಾದ ಒಂದು ಉದ್ಗ್ರಂಥ ನಮ್ಮಲ್ಲಿ ಈವರೆಗೆ ಬಂದುದಿಲ್ಲ. ಈ ಕೊರತೆಯನ್ನು ನೀಗಿಸಿ ಮಾರ್ಕ್ಸ್‌ವಾದದ ನಿಖರವಾದ ಗ್ರಂಥ ಸಮೂಹದ ರಚನೆಯಲ್ಲಿ ತೊಡಗುವ ಪ್ರಪ್ರಥಮ ಮಹತ್ತರ ಪ್ರಯತ್ನ ನಮ್ಮ ಹಿರಿಯ ಬಂಧುಗಳಾದ ಶ್ರೀ ಕಕ್ಕಿಲ್ಲಾಯರದು. ಅವರು ಕೈಗೊಂಡಿರುವ ಈ ಪ್ರಯತ್ನ ಅವರ ವಿದ್ವತ್ತು, ಕಾಳಜಿ ಮತ್ತು ಆಕಾಂಕ್ಷೆಗಳ ಸಕ್ರಿಯ ಪ್ರತೀಕವಾಗಿದೆ.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**